Scarcity of Kerosene Oil in Hassan District.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಿ 15 ದಿವಸವಾಯ್ತು, ಹಾಸನ ಜಿಲ್ಲೆಯಲ್ಲಿ ಸೀಮೆ ಎಣ್ಣೆಗೆ ತೊಂದರೆಯಾಗಿದೆ. ಬ್ಲಾಕ್‌ಮಾರ್ಕೆಟ್ಟಿನಲ್ಲಿ ಅದು ಮಾರಾಟವಾಗುತ್ತಿದೆ. ಶಾಂತಿಗ್ರಾಮದಲ್ಲಿ ತಲೆಮೇಲೆ ಹೊಡೆದು ಕಳಿಸಿದ್ದಾರೆ, ಶುಕ್ರವಾರ ಸಂತೆಯಲ್ಲಿ ತೊಂದರೆಯಾಗಿದೆ.

(ಮಾತನಾಡುತ್ತಲೇ ಇದ್ದರು)***

ಅಧ್ಯಕ್ಷರು.—ಹೀಗೆ ಹೇಳುವುದು ಸರಿಯಲ್ಲ. ಬರೆದುಕೊಳ್ಳಬೇಡಿ.

Industrial Policy matters stated in the L. C. by the Government

ಶ್ರೀ ಕೋಣಂದೂರು ಲಿಂಗಪ್ಪ.—ಪಾಯಿಂಟ್ ಆಫ್ ಆರ್ಡರ್. ನಮ್ಮ ಸಭೆಯ ಸಂಪ್ರದಾಯ ಮತ್ತು ಹಕ್ಕಿಗೆ ಸಂಬಂಧಪಟ್ಟ ಒಂದು ವಿಷಯ. ನಮಗೆಲ್ಲರಿಗೂ ತಿಳಿದಹಾಗೆ ಈ ರಾಜ್ಯದಲ್ಲಿ ಒಂದು ಉತ್ತಮವಾದ ವಿಧಾನವಿದೆ. ಸರಕಾರ ತನ್ನ ನೀತಿಯನ್ನು ಯಾವುದೇ ಹೇಳಿಕೆಯನ್ನು ಯಾವದೇ ನೀತಿಯ ಬಗ್ಗೆ ಕೊಡುವಾಗ ಮೊದಲು ಈ ಸಭೆಗೆ ತಿಳಿಸಬೇಕು. ಹಾಗೆ ಮಾಡುವುದನ್ನು ಈಗ ಕೈಬಿಡಲಾಗಿದೆ. ಈ ಸಭೆಯಲ್ಲಿ ಮೊದಲು ಹೇಳುವ ಬದಲು ವಿಧಾನ ಪರಿಷತ್ತಿನಲ್ಲಿ ಅಥವಾ ಹೊರಗೆ ಬಹಿರಂಗ ಸಭೆಯಲ್ಲಿ ಸರಕಾರ ತನ್ನ ನೀತಿಯನ್ನು ತಿಳಿಸುವುದು ಸರಿಯಲ್ಲ.

ಅಧ್ಯಕ್ಷರು.—ಅದಕ್ಕೆ ರೂಲ್ಸ್ ಇದೆ, ಬರೆದು ಕಳಿಸಿ.

ಶ್ರೀ ಕೋಣಂದೂರು ಲಿಂಗಪ್ಪ.—ವಿಧಾನ ಪರಿಷತ್ತಿನಲ್ಲಿ ಕೈಗಾರಿಕಾ ನೀತಿಯನ್ನು ಮಂತ್ರಿಗಳು ಪ್ರಸ್ತಾಪಿಸಿದ್ದಾರೆ. ಇದರಿಂದ ನಮ್ಮ ಸಭೆಯ ಗೌರವಕ್ಕೆ ಧಕ್ಕೆ ಬಂದಿದೆ. ನಮ್ಮ ಸಭೆಯಲ್ಲಿ ಅದನ್ನು ಮೊದಲು ಹೇಳಿ ನಂತರ ವಿಧಾನ ಪರಿಷತ್ತಿನಲ್ಲಿ ಹೇಳಬೇಕಾಗಿತ್ತು.

ಅಧ್ಯಕ್ಷರು.—ತಾವು ಬರೆದು ಕಳುಹಿಸಿ ಹೀಗೆ ಹೇಳುವುದಕ್ಕೆ ಬರುವುದಿಲ್ಲ.

Study of Scarcity Conditions by the Study Tour

SRI H. M. CHANNABASAPPA (Minister for Public Works).—Madam Speaker, before proceeding with the business of the House, I would like to submit that in regard to scarcity conditions that was examined by me and by the Hon'ble Leader of the Opposition and other 8 Hon'ble Members during the la t 4-5 days, I was expected to m ke a statement to lay after question-hour. I would submit that I will make it tomorrow.

BUDGET ESTIMATES FOR 1973-74

Demands for Grants (*Demand Nos. 14, 16, 24, 43, 44, & 24A*)

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಈ ಕೆಳಕಂಡ ಬೇಡಿಕೆಗಳ ಮುಂದೆ ನಮೂದಾಗಿರುವ ಹಣಕ್ಕೆ ಈ ಮಾನ್ಯ ಸಭೆ ಮಂಜೂರಾತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Demand No. 14. - Supplies and Disposals.

On the recommendation of the Governor, I beg to move :

That a sum not exceeding Rs. 1,00,000 inclusive of the sum granted 'on account' be granted to the Government to defray the

*** Matter not recorded as ordered by the Chair.

(ಶ್ರೀ ಎಸ್. ಎಂ. ಕೃಷ್ಣ)

charges which will come in course of payment during the financial year ending 31st day of March 1974, in respect of Demand No. 14 'Supplies and Disposals'.

Demand No. 16 – Scientific Departments

That a sum not exceeding Rs. 66,23,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 16 'Scientific Departments'.

Demand No. 24 - Industries (Excluding Sericulture).

That a sum not exceeding Rs. 15,82,87,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, Demand No. 24 in respect of Industries (Excluding Sericulture)'.

Demand No. 43 - Capital Outlay on Improvement of Public Health.

That a sum not exceeding Rs. 94,77,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 43 'Capital Outlay on Improvement of Public Health'.

Demand No. 44 - Capital Outlay on Industrial and Economic Development

That a sum not exceeding Rs. 13,81,14,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 44 'Capital Outlay on Industrial and Economic Development'.

Demand No. 24A - Sericulture

That a sum not exceeding Rs. 91,33.000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974; in respect of Demand No. 24A 'Sericulture'.

MADAM SPEAKER.—Motion moved:

That a sum not exceeding Rs. 4,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 14 'Supplies and disposals'.

That a sum not exceeding Rs. 66,23,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 16 'Scientific Departments'.

That a sum not exceeding Rs. 15,82,87,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 24 'Industries (Excluding Sericulture').

That a sum not exceeding Rs. 94,77,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 43 'Capital Outlay on Improvement of Public Health'.

That a sum not exceeding Rs. 13,81,14,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 44 'Capital Outlay on Industrial and Economic Development'.

That a sum not exceeding Rs. 91,33,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 24A 'Sericulture'.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷಣಿಯರೇ, ಮಾನ್ಯ ಕೈಗಾರಿಕಾ ಮಂತ್ರಿಗಳೇನು ಬೇಡಿಕೆ ಇಟ್ಟಿದ್ದಾರೆ ಅದನ್ನು ವಿರೋಧಿಸಿ ಒಂದೆರಡು ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಕೈಗಾರಿಕೆ ಬಗ್ಗೆ ಚರ್ಚೆ ಈ ಸಭೆಯಲ್ಲಿ ನಡೆದಮೇಲೆ ಮೇಲ್ಮನೆಯಲ್ಲಿ ನಡೆಯಲು ವ್ಯವಸ್ಥೆ ಮಾಡಿದ್ದರೆ ಚೆನ್ನಾಗಿತ್ತು. ಆ ಸಭೆಗೂ ಹಕ್ಕಿದೆ. ಆದರೆ ಇಲ್ಲಿ ಚರ್ಚೆ ಆಗಿ ಆಮೇಲೆ ಅಲ್ಲಿ ಚರ್ಚೆಯಾಗಿದ್ದರೆ ಚೆನ್ನಾಗಿತ್ತು. ಅಲ್ಲಿ ಚರ್ಚೆಯಾಗಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು.--ಇಲ್ಲಿ ಬೇಡದೆ ಇರುವ ವಿಷಯ ಮಾತನಾಡಿ ತೊಂದರೆಯಾದುದರಿಂದ ಹೀಗಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಗದಿಯಾಗಿರುವ ಪ್ರಕಾರ ಇಲ್ಲಿ ಡಿಮ್ಯಾಂಡುಗಳನ್ನು ತೆಗೆದು ಕೊಳ್ಳಲಾಗುತ್ತಿದೆ.

ಶ್ರೀ ಕೋಣಾದೂರು ಲಿಂಗಪ್ಪ.- ಯಾವುದೇ ಡಿಮ್ಯಾಂಡ್ ಆಗಲಿ, ಈ ಸಭೆಯಲ್ಲಿ ಚರ್ಚೆ ಮೊದಲಾಗಬೇಕು, ಒಂದು ನೀತಿಯನ್ನನುಸರಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಕೈಗಾರಿಕೆ ಧೋರಣೆ ಬಗ್ಗೆ, ಹೇಳಿರುವುದು ಇಂದು ವರದಿಯಾಗಿದೆ.

(ಶ್ರೀ ಎಂ. ಎಸ್. ಕೃಷ್ಣನ್)

2–30 P. M.

ಆ ರಿಪೋರ್ಟಿನಲ್ಲಿ ಏನು ಇದೆ? ಯಾವ ಯಾವ ಇಲಾಖೆಗಳು ಯಾವ ಯಾವ ರೀತಿ ಕೆಲಸ ಮಾಡಿವೆ ಎನ್ನುವುದನ್ನು ಇದೆಯೇ ವಿನಹ, ಧೋರಣೆಯ ಅಂಶಗಳು ಏನೂ ಕಂಡು ಬರುತ್ತಾ ಇಲ್ಲ. ನಾವು ಇವತ್ತು ಪರಿಶೀಲನೆ ಮಾಡುವುದು ಏನೆಂದರೆ, ಈ ರಾಜ್ಯದಲ್ಲಿ ತಾವು ಬಂದಮೇಲೆ, ಕಳೆದ ಒಂದು ವರ್ಷದಲ್ಲಿ ಕೈಗಾರಿಕೆಗಳಲ್ಲಿ ಎಷ್ಟು ಮುಂದೆ ಹೋಗಿದ್ದೀರಿ ಎನ್ನುವುದು ಮುಖ್ಯ ಪ್ರಶ್ನೆ. ನನಗೆ ಗೊತ್ತಿದ್ದ ಹಾಗೆ, ನಾವು ಬಂದು ಒಂದು ವರ್ಷವಾಗಿದೆ, ಕೈಗಾರಿಕೆಗಳನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಇನ್ನೂ ಸ್ವಲ್ಪ ಟೈಂ ಬೇಕು ಎಂದು ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನೇ ತಾವು ಮೊನ್ನೆ ಸಭೆಯಲ್ಲಿ ಹೇಳಿದ್ದೀರಿ. ಇದಕ್ಕಿಂತ ಮುಖ್ಯವಾಗಿ ನಾವು ಆಳವಾಗಿ ನೋಡಿದರೆ, ಹೋಗುತ್ತಿರುವ ದಾರಿ ಸರಿಯಾಗಿ ಇದೆಯೇ ? ದಾರಿ ಸರಿಯಾಗಿದ್ದರೆ ಸ್ವಲ್ಪವಾದರೂ ಕೆಲಸವಾಗಬಹುದು ಎಂದು ನಾವು ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆ ದಾರಿ ಸರಿ ಇದೆಯೇ ಎಂದು ಪರಿಶೀಲನೆ ಮಾಡುವುದಾದರೆ, ಕೈಗಾರಿಕಾ ಧೋರಣೆ ಏನು ಇದೆ, ಅದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ನನಗೆ ತಿಳಿದಮಟ್ಟಿಗೆ, ಸಮಾಜವಾದವನ್ನು ಒಪ್ಪಿಕೊಂಡ ಜನ ನೀವು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಬಿಟ್ಟು, ಸೋಷಿಯಲಿಸಂ ಅನ್ನು ಒಪ್ಪಿಕೊಂಡಿದ್ದೀರಿ. ಸಮಾಜವಾದವನ್ನು ಒಪ್ಪಿಕೊಂಡ ಮೇಲೆ ಕೈಗಾರಿಕೆಯ ಧೋರಣೆಯಲ್ಲಿ ಮೂರು ಮುಖ್ಯ ಅಂಶಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ನನ್ನ ಅಭಿಪ್ರಾಯ. ಮೊದಲನೆಯದು, ಪಬ್ಲಿಕ್ ಸೆಕ್ಟಾರ್ ಅನ್ನ, ಸಾರ್ವಜನಿಕ ಕ್ಷೇತ್ರವನ್ನು ಇನ್ನೂ ಹೆಚ್ಚು ಬಳಸಬೇಕು, ಇರುವುದನ್ನು ಉಳಿಸಬೇಕು, ಎನ್ನುವುದು ಸಮಾಜವಾದದ ಕೆಲಸವಾಗಿದೆ. ಎರಡನೆಯದು, ನಮ್ಮ ರಾಜ್ಯದಲ್ಲಿ ಹಿಂದುಳಿದ ಪ್ರದೇಶಗಳಲ್ಲಿ, ಬೀದರ್, ರಾಯಚೂರು ಮತ್ತು ಬಿಜಾಪುರ್ ಇಂಥ ಕಡೆಗಳಲ್ಲಿ ಇನ್ನು ಹೆಚ್ಚು ಕೈಗಾರಿಕೆಗಳನ್ನು ಬರುವ ಹಾಗೆ ಮಾಡುವುದು. ಮೂರನೆಯದು ಇವತ್ತಿನ ದಿವಸ ಸಣ್ಣ ಸಣ್ಣ ಕೈಗಾರಿಕೆಗಳು ಏನು ಇವೆ, ಅವುಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಕೇಂದ್ರ ಸರ್ಕಾರದವರ ಜವಾಬ್ದಾರಿಗೆ ವಹಿಸಬೇಕು, ಕೆಲವು ಬೃಹತ್ ಕೈಗಾರಿಕೆಗಳ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದಾರೆ. ಒಂದು ಕಡೆ ಸಣ್ಣ ಸಣ್ಣ ಕೈಗಾರಿಕೆಗಳು ಬರಬೇಕು ಎಂದು ಹೇಳುತ್ತೀರಿ, ಅವುಗಳಿಗೆ ತಾವು ಸಹಕಾರ ಕೊಟ್ಟಿದ್ದೀರಾ, ಸಹಾಯ ಮಾಡಿದ್ದೀರಾ, ಎನ್ನುವುದನ್ನು ವಿಮರ್ಶೆ ಮಾಡಬೇಕಾಗಿದೆ. ಈ ಮೂರು ಮುಖ್ಯ ಅಂಶಗಳ ಆಧಾರದ ಮೇಲೆ ನಾವು ನಿಮ್ಮ ದಾರಿ ಸರಿಯೋ ಎಂದು ತೀರ್ಮಾನ ಮಾಡಬೇಕಾಗಿದೆ. ಇದರಿಂದ ಸೋಷಿಯಲಿಸಂ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಯೋಚನೆ ಮಾಡಬೇಕಾಗಿದೆ. ಇಷ್ಟು ಮಾತ್ರವಲ್ಲ, ಈ ರೀತಿ ನಾವು ಯೋಚನೆ ಮಾಡಬೇಕಾದರೆ, ಕೇಂದ್ರ ಸರ್ಕಾರದ ಧೋರಣೆಗೂ ನಮ್ಮ ಧೋರಣೆಗೂ ವ್ಯತ್ಯಾಸವಿಲ್ಲ. ಏಕೆಂದರೆ, ಇಲ್ಲಿಯು ಮತ್ತು ಅಲ್ಲಿಯು ಆಡಳಿತ ನಡೆಸುತ್ತಿರುವವರು ಒಂದೇ ಪಕ್ಷದವರು. ಕೇಂದ್ರ ಸರ್ಕಾರದ ಧೋರಣೆಯ ಆಧಾರದ ಮೇಲೆಯೇ ಅದಕ್ಕೆ ಅನುಗುಣವಾಗಿಯೇ ನಮ್ಮ ಸರ್ಕಾರದ ಧೋರಣೆ ಇದೆಯೆಂದು ಹೇಳಬಹುದು. 1956ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಇಂಡಸ್ಟ್ರಿಯಲ್ ಪಾಲಿಸಿ ಏನು ಇದೆ, ಅದರಂತೆ ಕೈಗಾರಿಕಾ ಧೋರಣೆ ಈ ದಿವಸ ಇದೆಯೇ ? ತಾವು ಬರುವುದಕ್ಕೆ ಮುಂಚೆ ಗುತ್ತಿಗೆದಾರಿ ಬಂಡವಾಳಗಾರರಿಗೆ ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಬೆಳೆಸುವಂಥ ಧೋರಣೆ ಇದ್ದುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅಂಕಿ ಅಂಶಗಳ ಆಧಾರದ ಮೇಲೆಯೂ ಸಹ ಇದನ್ನು ಹೇಳಬಹುದು. ನಮ್ಮ ದೇಶದಲ್ಲಿ 75 ಮನೋಪಲಿಸ್ಟ್ ಮನೆತನಗಳು ಬೆಳೆದಿವೆ, ಆದ್ದರಿಂದ ನಮ್ಮ ದೇಶದ ಕೈಗಾರಿಕಾ ಧೋರಣೆ ಸರಿಯಾಗಿಲ್ಲ, ಅದನ್ನು ಮಾರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ತಾವು ಹೇಳಿದ್ದನ್ನು ನೋಡಿದರೆ, ಗ್ರೂಪ್ ಆಫ್ ಸೋಷಿಯಲ್ ಜಸ್ಟೀಸ್, ಸಮಾಜವಾದದ ಜೊತೆಗೆ ಸೋಷಿಯಲ್ ಜಸ್ಟೀಸ್ ಅನ್ನೂ ಹೇಳಿದ್ದಾರೆ. ಆದರೆ ಈ ಪದ ಜಾರಿಗೆ ಬಂದಿದ್ದರೆ, ಸೋಷಿಯಲ್ ಜಸ್ಟೀಸ್ ಜಾರಿಗೆ ಬಂದಿದ್ದರೆ ನಾವು ಸಂತೋಷ ಪಡಬಹುದಿತ್ತು ಅಸಂತೋಷ ಪಡಬೇಕಾಗಿಲ್ಲ. ನಮ್ಮ ನಾಡಿನ ಕೈಗಾರಿಕಾ ಧೋರಣೆಯನ್ನು ಹೇಳಿದ್ದರೂ ಸಹ ಅದು ಕಾರ್ಯಗತವಾಗಿಲ್ಲ ಎಂದು ಸ್ಪಷ್ಟವಾದ ನನ್ನ ಅಭಿಪ್ರಾಯ. ಏತಕ್ಕೆ ಆಗಿಲ್ಲ ? ದೇಶದ ಎಲ್ಲಾ ಕೈಗಾರಿಕಾ ಧೋರಣೆಯನ್ನು ವಿಮರ್ಶೆ ಮಾಡುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ, ಎಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಗ್ರೋತ್ ಆಫ್ ಸೋಷಿಯಲ್ ಜಸ್ಟೀಸ್—ಕೈಗಾರಿಕಾ ಉತ್ಪಾದನೆಯಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು

ಎನ್ನುವ ಪ್ರಶ್ನೆ ಬರುತ್ತದೆ, ಅದಕ್ಕೆ ಆರ್ಥಿಕ ತಜ್ಞರು ಹೇಳುತ್ತಾರೆ, ಸರ್ಕಾರದವರು ಹೇಳುತ್ತಾರೆ, ಹಣವಂತರು, ಶ್ರೀಮಂತರು ಅವರು ಕೊಂಡುಕೊಳ್ಳತಕ್ಕ ಸಾಮಗ್ರಿಗಳನ್ನು ತಯಾರು ಮಾಡುವುದನ್ನು ಕಡಮೆ ಮಾಡಬೇಕು, ಅದಕ್ಕೆ ಬ್ಯಾನ್ ಹಾಕಬೇಕು, ಸಾಮಾನ್ಯರು ಬಳಕೆ ಮಾಡುವ ವಸ್ತುಗಳನ್ನು ತಯಾರು ಮಾಡಬೇಕು ಎನ್ನುವ ಧೋರಣೆಯನ್ನು ಇಟ್ಟುಕೊಳ್ಳಬೇಕು ಎಂದು ಹೇಳುತ್ತಾರೆ. ಅದು ಮಾತಿನಲ್ಲಿ ಇದೆಯೇ ಹೊರತು ಕಾರ್ಯಕ್ರಮದಲ್ಲಿ ಎಳ್ಳಷ್ಟೂ ಇಲ್ಲ. ಸಣ್ಣ ಸಣ್ಣ ಕೈಗಾರಿಕೆಗಳು, ಮೀಡಿಯಂ ಕೈಗಾರಿಕೆಗಳಲ್ಲಿ, ತಮಗೆ ಗೊತ್ತಿರುವ ಹಾಗೆ, ಮಾರ್ಕೆಟ್ಟಿನಲ್ಲಿ ಹೈಯರ್ ಕಾಂಪಿಟೇಷನ್ ಇದೆ ಎನ್ನುವುದರಿಂದ ಲಕ್ಷ್ಯುರಿ ಗೂಡ್ಸ್ ತಯಾರು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಗುರುತರವಾದ ಅಪಾದನೆ ಇವೆ ಎಂದು ಹೇಳಬೇಕಾಗುತ್ತದೆ. ಇದೇ ಆಧಾರದ ಮೇಲೆ ನೀವೂ ಸಹ ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ನಾನು ಹೇಳುತ್ತೇನೆ. ಆ ರೀತಿ ಮಾಡಿಲ್ಲ ಎಂದು ಕೇಂದ್ರ ಸರ್ಕಾರದವರು ಹೇಳುವುದಾದರೆ, ಅವರು ಲಗ್ಸುರಿ ಗೂಡ್ಸ್ ಮಾಡುವುದಕ್ಕೆ ಅವಕಾಶ ಮಾಡಿಲ್ಲ, ಕನ್‌ಸ್ಯೂಮರ್ ಗೂಡ್ಸ್ ಮಾಡುವುದಕ್ಕೆ ಕೈಗಾರಿಕೆಗಳಿಗೆ ಅವಕಾಶ ಕೊಟ್ಟಿದ್ದೇವೆ ಎಂದು ಹೇಳಿದರೆ ಇದು ನನಗೆ ಅರ್ಥವಾಗುವುದಿಲ್ಲ. ರಿಸೆಂಟ್ ಆಗಿ ತಮಗೆ ಗೊತ್ತಿರಬಹುದು, ಫಾರಿನ್ ಕೊಲ್ಯಾಬರೇಷನ್‌ನಲ್ಲಿ ಲೇಡಿಸ್ ಅಂಡರ್ ಗಾರ್ಮೆಂಟ್ಸ್ ಮಾಡುವುದಕ್ಕೆ ಒಂದು ಲೈಸೆನ್ಸ್ ಕೊಟ್ಟಿದ್ದಾರೆ. ಅದು ಲಕ್ಷ್ಯುರಿ ಗೂಡ್ಸ್. ಅಂಥಾದ್ದಕ್ಕೆ ಫಾರಿನ್ ಕೊಲ್ಯಾಬರೇಷನ್‌ನಲ್ಲಿ ಲೈಸೆನ್ಸ್ ಅನ್ನು ಕೊಟ್ಟಿದ್ದರ ಹಿನ್ನೆಲೆ ಏನು ಎಂದು ನಾವು ನೋಡಬೇಕಾಗಿದೆ. ಇನ್ನೊಂದು, ಇವತ್ತಿನ ದಿವಸ ಕೇಂದ್ರ ಸರ್ಕಾರದವರು ಇದೇ ರೀತಿ ಮಾನ್ಯ ಸುಬ್ರಹ್ಮಣ್ಯಂ ಅವರು ಬಂದ ತಕ್ಷಣ ಜಾಯಿಂಟ್ ಸೆಕ್ಟಾರ್ ಫಾರ್ ಜಾಯಿಂಟ್ ವೆಂಚರ್ ಎಂದು ಒತ್ತಿ ಒತ್ತಿ ಹೇಳುತ್ತಾ ಇರುವುದು ನನಗೆ ತಿಳಿದು ಬಂದಿದೆ. ಟಾಟಾರವರು ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿ, ದೊಡ್ಡ ದೊಡ್ಡ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಇವೆ, ಅವುಗಳನ್ನು ಕಬಳಿಸಬೇಕು ಎನ್ನುವ ಜಾಯಿಂಟ್ ಫೇಸ್ಡ್ ಪ್ರೋಗ್ರಾಂ ಅನ್ನು ಇಟ್ಟರು. ಆ ಮೆಮೋರ್ಯಾಂಡಂ ಅನ್ನು ಪೂರ್ತಿ ಒಪ್ಪಿಕೊಳ್ಳದೆ, ಹೋದರೂ ಸಹಾ ಅದನ್ನು ಕಾರ್ಯ ರೂಪದಲ್ಲಿ ಬರುವಂತೆ ಜಾಯಿಂಟ್ ಸೆಕ್ಟಾರ್ ಪದ್ಧತಿ ಇಟ್ಟುಕೊಂಡು ನಮ್ಮ ದೇಶದ ಗುತ್ತೇದಾರಿ ಬಂಡವಾಳಗಾರರಿಗೆ ಹೆಚ್ಚು ಅನುಕೂಲ ಮಾಡುತ್ತಾ ಇದ್ದಾರೆ. ಪಬ್ಲಿಕ್ ಸೆಕ್ಟಾರ್ ಮುಂದೆ ಹೋಗುವುದಕ್ಕೆ ಬಿಡುತ್ತಾ ಇಲ್ಲ ಇದಕ್ಕೆ ಬೇಕಾದಷ್ಟು ನಿದರ್ಶನ ಇದೆ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಕೇಂದ್ರಸರ್ಕಾರದವರು ಕೈಗಾರಿಕಾ ಧೋರಣೆಯನ್ನು ಪ್ರಗತಿಪರವಾಗಿ, ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಕ್ಕೆ ತಯಾರಿಲ್ಲ. ಅದರಲ್ಲಿ ಬೇಕಾದಷ್ಟು ನ್ಯೂನತೆಗಳು ಇವೆ. ಹೇಳುವುದು ಒಂದು ಮಾಡುವುದು ಒಂದು ಆಗಿದೆ. ಗುತ್ತೇದಾರಿ ಬಂಡವಾಳಗಾರರಿಗೆ ಇಂಡಸ್ಟ್ರೀಸ್ ಲೈಸೆನ್ಸ್ ಕೊಟ್ಟು ಅನುಕೂಲ ಮಾಡಿಕೊಡುತ್ತಾ ಇದ್ದೀರಿ. ಈ ಧೋರಣೆಯನ್ನು ಅರ್ಥಂಬರ್ಥ ಸಂಬಂಧವಿಲ್ಲದೆ ನೋಡಿಕೊಳ್ಳುತ್ತಿದ್ದಾರೆ; ಎಂದು ಹೇಳಬೇಕಾಗುತ್ತದೆ. ಈ ಧೋರಣೆಯನ್ನು ಕಾರ್ಯರೂಪಕ್ಕೆ ಮೈಸೂರು ರಾಜ್ಯದಲ್ಲಿ ತರುತ್ತಾ, ಇದೇ ಚೌಕಟ್ಟಿನೊಳಗೆ ತಮ್ಮ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಇದೇ ಚೌಕಟ್ಟಿನಲ್ಲಿ ತಾವು ಮುಂದುವರಿಯಬೇಕಾಗುತ್ತದೆ. ಕೌನ್ಸಿಲ್‌ನಲ್ಲಿ ತಾವು ಮಾತನಾಡುತ್ತಾ, ನಮ್ಮ ಅಭಿಪ್ರಾಯ ರಾಜ್ಯಸರ್ಕಾರದ ಕೈಗಾರಿಕಾ ಬೆಳವಣಿಗೆ ಆಗುವುದಕ್ಕೆ ಪ್ರಯತ್ನ ಮಾಡುತ್ತೇವೆ, ಪಬ್ಲಿಕ್ ಸೆಕ್ಟಾರ್ ಬೆಳೆಯಬೇಕು ಎಂದು ತಮ್ಮ ಅಭಿಪ್ರಾಯ ಹೇಳಿದಿರಿ. ಆ ಕೈಗಾರಿಕೆಗಳಿಗೆ ಸಹಾಯ ಮಾಡುತ್ತೇವೆ, ಎಂದು ಹೇಳಿದ್ದೀರಿ, ಆ ರೀತಿ ಮಾಡುವುದಾದರೆ ಬಹಳ ಸಂತೋಷ. ಈ ಸಂದರ್ಭದಲ್ಲಿ ನಾನು ಒಂದು ನಿದರ್ಶನವನ್ನು ಕೊಡಬೇಕಾಗಿದೆ. ತಾವು ಯಾವ ರೀತಿ ಪ್ರೈವೇಟ್ ಸೆಕ್ಟಾರ್‌ಗೆ ಅನುಕೂಲ ಮಾಡಿ, ರಾಜ್ಯಕ್ಕೆ ಅನ್ಯಾಯವಾಗುವ ಹಾಗೆ ಸಹಾಯ ಮಾಡಿದ್ದೀರಿ ಎನ್ನುವುದಕ್ಕೆ ಮೆಕ್ ಬೆಕ್ ಫ್ಯಾಕ್ಟರಿ ಇದೆ. ಅಲ್ಲಿ 600 ಜನ ಕಾರ್ಮಿಕರು ಇದ್ದಾರೆ. ಇದರಲ್ಲಿ ಸರ್ಕಾರದ್ದು 40ಲಕ್ಷ ರೂಪಾಯಿ ಬಂಡವಾಳ ಇದೆ. ಹಿಂದೆ ಇದ್ದಂಥ ಮಂತ್ರಿಗಳು ಇದರಲ್ಲಿದ್ದ ತಮಗೆ ಬೇಕಾದಂಥ ಜನಗಳಿಗೆ ಬೇಕಾದಷ್ಟು ಸವಲತ್ತನ್ನು ಮಾಡಿಕೊಟ್ಟರು. ಆದರೆ ಆ ಕಂಪನಿ ಉಳಿಯಲಿಲ್ಲ. ಅದನ್ನು ಮುಚ್ಚಿಕೊಂಡು ಹೋಗಬೇಕು ಎಂದು ಅವರು ಯೋಚನೆ ಮಾಡಿದರು. ಆ ರೀತಿ ಯೋಚನೆ ಮಾಡಿದಾಗ ಒಂದು ಪ್ರಶ್ನೆ ಬಂತು ಏನೆಂದರೆ, ಅದರಲ್ಲಿ ಹೆಚ್ಚು ಇದ್ದುದು ಷೇರ್ ಸರ್ಕಾರದ್ದು, ಸೆಕ್ಯೂರ್ಡ್ ಷೇರ್ಸ್ ಅವರದ್ದು. ಇದು ಹೈಕೋರ್ಟಿಗೆ ಹೋದಾಗ ಹೈಕೋರ್ಟಿನವರು ಇದರ ಕ್ಯಾಪಿಟಲ್ ರೀಸ್ಟ್ರಕ್ಚರ್ ಮಾಡಬೇಕು ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಇದು ಸರಿಯಲ್ಲ ಎಂದು ಇದ್ದರೂ, ಹೈಕೋರ್ಟಿನವರು ರೀಸ್ಟ್ರಕ್ಚರ್ ಮಾಡಬೇಕು ಎಂದು ಹೇಳಿರುವುದರಿಂದ ಮೈಸೂರು ಸರ್ಕಾರದವರು ಮೊದಲನೆಯ ಅಫಿಡವಿಟ್ ಅನ್ನು ಹಾಕಿದರು. ಆ ಫೈಲ್ ನನ್ನ ಹತ್ತಿರ ಇದೆ.

(ಶ್ರೀ ಎಂ. ಎಸ್. ಕೃಷ್ಣನ್)

ನೀವು ರೀಸ್ಟ್ರಕ್ಚರ್ ಮಾಡಿ ಪ್ರೈವೇಟ್ ಪಾರ್ಟಿಗೆ ಕೊಡುವುದಕ್ಕೆ ತಯಾರಿಲ್ಲ ಎಂದೂ ಹೇಳಿ ಮೂರು ಜನರೂ ನೊಂದಣಿ ಮಾಡಬೇಕು ಎಂದು ಮೂರು ಜನರಲ್ಲಿ ಇಬ್ಬರು ಪ್ರಯತ್ನಪಟ್ಟರು. ಒಂದು ಬಾಂಬೆ ಗ್ಯಾಸ್ ಕಂಪನಿ ಜಾಲನ್ ಎಂದು ಅವರು ಭಾರಿ ದೊಡ್ಡ ಬಂಡವಾಳಗಾರರು. ಇನ್ನೊಬ್ಬರು ಜಾಟಿಯಾ ಅವರು ಬಗ್ಗೆ ಬೇಕಾದಷ್ಟು ಇದೆ. ನಾನು ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ. ಅವರು ಬಂಡವಾಳಗಾರರು ಹಲವಾರು ರೂಪದಲ್ಲಿ ಹಣ ಸಂಪಾದನೆ ಮಾಡಿರುತ್ತಾರೆ. ಅವರು ಸಹಿತ ತಮ್ಮ ಅಭಿಪ್ರಾಯ ಕೊಟ್ಟರು. ಇದರೊಳಗೆ ವಿಚಾರ ಇದ್ದದ್ದು ಸರ್ಕಾರವೇ ನಡೆಸಬೇಕು ಎಂದು ತಮ್ಮ ಅಭಿಪ್ರಾಯ ಇತ್ತು. ಸೆಕ್ಯೂರ್ಡ್ ಕ್ರೆಡಿಟರ್ಸ್ ನೀವೇ ತೆಗೆದುಕೊಳ್ಳಬೇಕೆಂದು ಹೇಳಿ ಅಭಿಪ್ರಾಯ ಮೊದಲನೆ ಸಲ ಕೊಟ್ಟಿರಿ. ರೀಸ್ಟ್ರಕ್ಚರಿಂಗ್ ಒಪ್ಪಿಕೊಳ್ಳಲಿಲ್ಲ. ಅಫೆಡವಿಟ್ ಹಾಕಿ 15 ದಿವಸಗಳ ಮೇಲೆ ಹಿಯರಿಂಗ್ ಬಂದಾಗ, ನಿಮ್ಮ ಡಿಪಾರ್ಟ್‌ಮೆಂಟ್‌ನ ಅಂಡರ್‌ಸೆಕ್ರೆಟರಿಯವರು ಬೇರೆ ಡಿಪಾರ್ಟ್‌ಮೆಂಟ್ ಕನ್ಸಲ್ಟ್ ಮಾಡದೆ, ಇನ್ನೊಂದು ಅಫೆಡವಿಟ್‌ನ್ನು ಹಾಕಿದ್ದಾರೆ. ನೀವು ಸೆಕ್ಯೂರ್ಡ್ ಕ್ರೆಡಿಟ್‌ರ್ಸ್ ಆದರೂ ಕೂಡ ಎಲ್ಲವನ್ನೂ ಶ್ರೀಮಾನ್ ಜಾಟಿಯಾ ಅವರಿಗೆ ಬಿಟ್ಟುಬಿಡಬೇಕು ಎಂದು ಹೇಳಿ ಎಲ್ಲವನ್ನೂ ಅವರಿಗೆ ಕೊಟ್ಟಿದ್ದೀರಿ. ಈ ಸ್ಕೀಮನ್ನು ನೋಡಿದರೆ ಬಾಂಬೆ ಗ್ಯಾಸ್ ಕಂಪನಿಗೆ ಕೊಟ್ಟಿದ್ದರೆ ಕಾರ್ಮಿಕರಿಗೆ ಚೆನ್ನಾಗಿರುತ್ತಿತ್ತು. ಅವರಿಗೆ ಕೊಡಲಿಲ್ಲ. ಜಾಟಿಯಾ ಅವರಿಗೆ ಕೊಟ್ಟಿರಿ, 15 ದಿವಸಗಳಲ್ಲಿ ವ್ಯವಹಾರ ನಡೆಯಿತು. ನನಗೆ ಗೊತ್ತಿದೆ ಇವರು ಮಾತ್ರ ಅಲ್ಲಿ ಒಬ್ಬ ಪ್ರಮುಖ ಜನಸಂಘದ ಅಡ್ವೋಕೇಟರ್ ಸಹ ಸೇರಿಕೊಂಡಿದ್ದಾರೆ, ಇವರು ಎಲ್ಲರೂ ನಿಮ್ಮ ಹತ್ತಿರ ಕ್ಯಾನ್‌ವಾಸ್ ಮಾಡಿದರು. ಮತ್ತು ನಮ್ಮ ಹತ್ತಿರ ರೀಕ್ಯಾನವಾಸ್ ಮಾಡಿ ನಾವು ಒಪ್ಪಿಕೊಳ್ಳಬೇಕು ಎಂದು ಹೇಳಿದರು. ನಾವು ಒಪ್ಪಲಿಲ್ಲ, ಸರ್ಕಾರವೇ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಸರ್ಕಾರ ತೆಗೆದುಕೊಳ್ಳುತ್ತಿದೆ ಎಂದು ಆಶ್ವಾಸನೆ ಕೊಟ್ಟರು. ನಮಗೆ ಅಧಿಕಾರ ಇದೆ ಬದಲಾವಣೆ ಮಾಡುವುದಿಲ್ಲ ಎಂದು ಹೇಳಿದರು. ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಿ ಡಿಫೆನ್ಸ್ ಮಿನಿಸ್ಟ್ರಿಯವರು ಸಮಿತಿ ರಚನೆ ಮಾಡಿದರು. ಆಗ ನಾನು ವಿಟ್‌ನೆಸ್ ಆಗಿ ಹೋಗಿ ಯಾವದೇ ರೀತಿಯಿಂದಲೂ ಇದನ್ನು ಬೇರೆಯವರಿಗೆ ಕೊಡಕೂಡದು, ಸರ್ಕಾರವೇ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಡಿಫೆನ್ಸ್ ಮಿನಿಸ್ಟ್ರಿ ಸಮಿತಿಯವರು ಇದರಿಂದ ಬೆಳೆಗೆ ಅನುಕೂಲವಾಗುತ್ತದೆ, ದೇಶಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರು, ಹಾಗೆ ಹೇಳಿದರು ಮತ್ತೆ ಭಾರಿ ಕೈಗಾರಿಕೋದ್ಯಮಿಗೆ ಬಂಡವಾಳಗಾರರಿಗೆ ಬಾರಿಬಾರಿ ಕಳ್ಳ ನೋಟು ತಯಾರು ಮಾಡುವವರಿಗೆ ಬ್ಲಾಕ್‌ಮಾರ್ಕೆಟ್, ಸ್ಮಗಲಿಂಗ್ ಮಾಡುವವರಿಗೆ ಅವಕಾಶ ಕೊಟ್ಟಿದ್ದಾರೆ ತಮ್ಮ ಡಿಪಾರ್ಟ್‌ಮೆಂಟಿನವರು ಹೋಗಿ ಅಫೆಡವಿಟ್ ಹಾಕಿದ ಮೇಲೆ ಅದು ಹಿಂದಕ್ಕೆ ಏತಕ್ಕೆ ತೆಗೆದುಕೊಂಡರು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ, ಅದರಿಂದ ಪ್ರೈವೇಟ್ ಸೆಕ್ಟಾರ್ ಬೆಳೆಸುವುದಕ್ಕೆ ಅನುಕೂಲ ಮಾಡುತ್ತಿದ್ದೀರಿ. ಸ್ಟೇಟ್ ಸೆಕ್ಟಾರ್ ಬೆಳೆಸುವುದಕ್ಕೆ ಅನುಕೂಲ ಮಾಡುತ್ತಿದ್ದೀರಿ ಎಂದು ಹೇಳಬೇಕಾಗಿದೆ. ನಿಮಗೂ ಜನಸಂಘಕ್ಕೂ ಮೈತ್ರಿ ಹೇಗೆ ಬಂತು ಎಂದು ಕೇಳಬೇಕಾಗಿದೆ.

ಇನ್ನೊಂದು ನಿದರ್ಶನ ಕೊಡುತ್ತೇನೆ ಮೈಸೂರು ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೋರೇಟರಿ. ಇದು ಹಳೆ ಕತೆ. ರಾಮಕೃಷ್ಣ ಹೆಗಡೆಯವರು ಟೀಕೆ ಮಾಡಿದರು. ರಾಮಕೃಷ್ಣ ಹೆಗ್ಗಡೆಯವರು ಏನು ಮಾಡಿದ್ದು? ಎಂ.ಐ.ಟಿ. ಲ್ಯಾಬೋರೇಟರಿ ಸರ್ಕಾರದ್ದು, ಬೇಕಾದಷ್ಟು ಲಾಭಗಳಿಸುತ್ತಿತ್ತು. ಡ್ರಗ್ಸ್ ಮತ್ತು ಫಾರ್ಮಸ್ಯುಟಿಕಲ್ ಇಂಡಸ್ಟ್ರಿ ಸರ್ಕಾರದ್ದೇ ಇರಬೇಕಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಇರಬೇಕು ಎಂದು ಒತ್ತಾಯ ಪಡಿಸುತ್ತಿದ್ದೆವು ಸಾರ್ವಜನಿಕ ಕ್ಷೇತ್ರದು, ಇದು ಬೇಕಾದಷ್ಟು ಲಾಭಗಳಿಸುತ್ತಿತ್ತು. ನನ್ನ ಹತ್ತಿರ ಅಂಕಿ ಅಂಶಗಳು ಇವೆ. ಅವನ್ನು ಓದುವುದಕ್ಕೆ ಈಗ ಹೋಗುವುದಿಲ್ಲ 1968 ರಿಂದ ಹಿಡಿದು 71-72ರವರೆಗೆ ಅದು ಲಾಭವನ್ನು ಗಳಿಸಿದೆ. ಅದು ಜಾಸ್ತಿ ಜಾಸ್ತಿ ಡಿವಿಡೆಂಡ್ ಕೊಡುತ್ತಿತ್ತು. ಕಡೆಯಲ್ಲಿ ಡಿವಿಡೆಂಡ್ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಏತಕ್ಕೆಂದರೆ 11 ಪರ್ಸೆಂಟ್‌ನಿಂದ 5 ಪರ್ಸೆಂಟ್‌ಗೆ ಇಳಿಯಿತು ಆದರೂ ಸಹಿತ ಲಾಭ ಮಾಡುತ್ತಿದ್ದರು. ವೆಸ್ಟ್ ಜರ್ಮನಿ ಕೊಲಾಬೊರೇಷನ್ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ಯೋಜನೆ ತಯಾರು ಮಾಡಿದರು. ಹೀಗೆ ಯೋಜನೆ ತಯಾರು ಮಾಡುತ್ತಾ ಇರುವಾಗ, ನೇರವಾಗಿ ಪ್ರೈವೇಟ್ ಸೆಕ್ಟಾರ್‌ಗೆ ಕೊಟ್ಟರು. ನಿಜವಾಗಿ ಯಾವ ಕನ್ಸಿಡರೇಷನ್ ಮೇಲೆ ಕೊಟ್ಟರು ಯಾರು ಯಾರು ಎಷ್ಟೆಷ್ಟು ಕೊಟ್ಟರು. ಒಳಗಿನ ವ್ಯವಹಾರ ಏನು ಎನ್ನುವುದು ನನಗೆ ಗೊತ್ತಿಲ್ಲ. ಇದರಿಂದ ರಾಜ್ಯಕ್ಕೆ ಮತ್ತು ದೇಶಕ್ಕೆ ಅನ್ಯಾಯವಾಗಿದೆ. ಇವರು ಬಂದ ಮೇಲೆ ಅದನ್ನು ಮುಂದುವರಿಸಿ ಕೂಡದು ಎಂದು ಇದ್ದವರು ಮುಂದುವರಿಸಿದರು. ಕೆಲವು ದಿವಸಗಳ ಹಿಂದೆ ಒಂದು ಮುಖ್ಯವಾದ ಪ್ರಶ್ನೆ ಬಂತು, ಮೈಸೂರು ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೊರೆಟರಿ ಮತ್ತು ಇಂಡಿಯನ್

ಡೆಟರ್ನೇಟರ್‌ಸ್ವಮರ್ಡ್ ಮಾಡಬೇಕು ಎಂದು ಹೊರಟಿರದ್ದರು. ಅದು ಹೈಕೋರ್ಟಿನ ಮುಂದೆ ಇದೆ, ಅದು ತೀರ್ಮಾನವಾಗಿದೆಯೋ ಇಲ್ಲವೋ ಗೊತ್ತಿಲ್ಲ. ತಮ್ಮ ಹತ್ತಿರ ಹೆಚ್ಚು ಮಾಹಿತಿ ಇದೆ, ನನಗೆ ತಿಳಿದಮಟ್ಟಿಗೆ ಏನೋ ಮಸಲತ್ತು ನಡೆಯುತ್ತಿದೆ. ಮಾರ್ಜ್ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ನಿಮ್ಮಲ್ಲಿರುವ ಕೆಲವು ಅಧಿಕಾರಿಗಳು ಹಣವನ್ನು ತೆಗೆದುಕೊಂಡು ಪ್ರಯತ್ನ ಮಾಡುತ್ತಾ ಇದ್ದಾರೆ. ಒಳಗಿಂದೊಳಗೆ ಪಿತೂರಿ ನಡೆಯುತ್ತಿದೆ ಎಂದು ತಿಳಿಸಿದ್ದೇನೆ. ಹಾಗೆ ಆಗುವ ಪಕ್ಷಕ್ಕೆ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಡ್ರಗ್ ಇಂಡಸ್ಟ್ರೀಸ್ ಏನು ಇವೊತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಇರಬೇಕು ಎಂದು ಕೇಂದ್ರಸರ್ಕಾರ ಹೇಳಿದ್ದಕ್ಕೆ ವಿರುದ್ಧವಾಗಿ ನಡೆದಂತಾಗುತ್ತದೆ. ನಮ್ಮ ಹಿತಕ್ಕೆ ವಿರುದ್ಧವಾಗುತ್ತದೆ ತಮ್ಮ ಗುರಿ ಮುಟ್ಟುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಇನ್ನು ಎರಡನೆ ನಿದರ್ಶನ ಪಬ್ಲಿಕ್ ಸೆಕ್ಟಾರ್ ಸಾರ್ವಜನಿಕ ಕ್ಷೇತ್ರ ಬೆಳೆಯಬೇಕು ಎನ್ನುವುದರಲ್ಲಿ ಯಾರದು ಭಿನ್ನಾಭಿಪ್ರಾಯವಿಲ್ಲ ಅದರಲ್ಲೂ ಮೈಸೂರು ರಾಜ್ಯದಲ್ಲಿ ಬೆಳೆಯಲೇಬೇಕು. ಕೇಂದ್ರ ಸರ್ಕಾರದವರು ನಮಗೆ ಎಷ್ಟು ಹಣ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಎಷ್ಟು ಸಹಾಯ ಮಾಡಬೇಕೋ ಅಷ್ಟು ಮಾಡಿಲ್ಲ. ಉದಾಹರಣೆಗೆ ಹೇಳಬೇಕು ಎಂದರೆ ತಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಸ್ಟೇಟ್‌ವೈಸ್ ಡಿಸ್ಟ್ರಿಬ್ಯೂಷನ್ ಆಫ್ ಇನ್‌ವೆಸ್ಟ್‌ಮೆಂಟ್ ಮತ್ತು ಗ್ರೋಸ್ ರಾಸ್ ಸೆಂಟ್ರಲ್ ಗೌರ್ನಮೆಂಟ್ ಅಂಡರ್ ಟೇಕಿಂಗ್ಸ್ ಅದರಲ್ಲಿ ಹೇಳುವುದಾದರೆ ಮಾರ್ಚ್ 1968ರ ತನಕ ಟೋಟಲ್ ಸೆಂಟ್ರಲ್ ಗೌರ್ನಮೆಂಟ್ ಇನ್‌ವೆಸ್ಟ್‌ಮೆಂಟ್ಸ್ 3042.4 ಕೋಟಿ. ಅದರಲ್ಲಿ ಮೈಸೂರದ್ದು 70.8 ಕೋಟಿ ಮಾತ್ರ. ಅದು 2.3 ಪರ್ಸೆಂಟ್. ಆಗುತ್ತದೆ, ಬೇರೆ ರಾಜ್ಯಗಳಿಗೆ ಏನು ಮಾಡಿದ್ದಾರೆ. ಬಿಹಾರ್ 15.5 ಪರ್ಸೆಂಟ್, ಮಧ್ಯಪ್ರದೇಶ 17 ಪರ್ಸೆಂಟ್, ಒರಿಸ್ಸಾ 12 ಪರ್ಸೆಂಟ್, ವೆಸ್ಟ್‌ಬೆಂಗಾಲ್ 13.3 ಪರ್ಸೆಂಟ್. ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾವು ಮತ್ತು ಕೇರಳಕ್ಕೆ ಮಾತ್ರ ಏನು ಪಾಪ ಮಾಡಿದ್ದೇವೊ 2.3 ಪರ್ಸೆಂಟ್‌ಗಿಂತ ಜಾಸ್ತಿಹೋಗಿಲ್ಲ. ಕೇಂದ್ರ ಸರ್ಕಾರದವರು ನಮ್ಮನ್ನು ನಿಜವಾಗಿ ಕಡೆಗಣಿಸುತ್ತಿದ್ದಾರೆ. ಒಂದು ಕಾಲಕ್ಕೆ ಎಚ್. ಎಂ. ಟಿ. ಬಿ. ಇ. ಎಲ್. ಐ. ಟಿ. ಐ. ಬಂತು ಇದನ್ನೇ ಯೋಚಿಸುತ್ತಿದ್ದಾರೇ ಸ್ವಾಮಿ. ಇಲ್ಲಿ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ ಲೆಕ್ಕಹಾಕಿ. ಬೇರೆ ಕಡೆ ಎಷ್ಟುಮಾಡಿದ್ದಾರೆ ಲೆಕ್ಕ ಹಾಕಿ ನೋಡಿದರೆ ನನಗೆ ಬಹಳ ಅನ್ಯಾಯ ಮಾಡಿದ್ದಾರೆ. ಈ ಅನ್ಯಾಯ ತೊಡೆದು ಹಾಕುವ ದೃಷ್ಟಿಯಿಂದ ನಾನು ಹೇಳುವುದು ಪಬ್ಲಿಕ್ ಸೆಕ್ಟಾರ್ ಬೆಳೆಯಬೇಕು. ಖಾಸಗಿ ಕ್ಷೇತ್ರದ ಕೈಗಾರಿಕೋದ್ಯಮಿಗಳು ಬರುತ್ತಾ ಇಲ್ಲ ಅವರು ಬರಬೇಕು ಬರಬೇಕು ಎಂದು ಕೇಳಿಕೊಂಡಿದ್ದೀರಿ. ಸ್ಟೇಟ್ ಸೆಕ್ಟಾರ್ ಬೆಳೆಸಬೇಕು ಎನ್ನುವ ಅಪ್ರೋಚ್ ನಿಮ್ಮದು ಇರಬೇಕು. ಇದನ್ನು ತಾವು ಮಾಡುತ್ತಾ ಇಲ್ಲ. ಈ ಸಂದರ್ಭದಲ್ಲಿ ಎರಡು ಉದಾಹರಣೆ ಕೊಟ್ಟೆ. ಇನ್ನೊಂದು ಉದಾಹರಣೆ ರೆವ್ಕೋ. ಅದರ ಬಗ್ಗೆ ಬೇಕಾದಷ್ಟು ವಾದ ನಡೆಯುತ್ತಿದೆ. ಅದು ಕೂಡ ಖಂಡಿತ ಖಾಸಗಿಯವರಿಗೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ನಾನು ಟೀಕೆ ಮಾಡುವುದಿಲ್ಲ. ಬೋರ್ಡ್ ಆಫ್ ಡೈರೆಕ್ಟರ್ಸ್ ಯಾರು ಯಾರು ಇದ್ದಾರೆ ಎಂದರೆ ಶ್ರೀ ಕೆ. ಎಚ್. ರಂಗನಾಥ್, ವೆಂಕಟೇಶ್, ಮತ್ತು ದೇಸಾಯಿ ಈ ಮೂರು ಜನರನ್ನು ಹಾಕಿದ್ದಾರೆ. ಬೇರೆಯವರನ್ನು ಹಾಕುತ್ತಾ ಇಲ್ಲ. ವಿರೋಧ ಪಕ್ಷದಲ್ಲಿ ಇರುವವರನ್ನು ಹಾಕುವುದಿಲ್ಲ. ಕಮಿಟೆಡ್ ಪೀಪಲ್ ಹಾಕಿದ್ದೇವೆ, ಪಬ್ಲಿಕ್ ಸೆಕ್ಟಾರ್‌ಗೆ ಬೆಂಬಲ ಕೊಡುವ ಜನಗಳನ್ನು ಹಾಕಿದ್ದೇವೆಂದು ಹೇಳುತ್ತೀರಿ. ನನಗೆ ಕೆಲವರ ವಿಷಯದಲ್ಲಿ ಅನುಮಾನ ಇದೆ. ಶ್ರೀಮಾನ್ ಕೆ. ಎಚ್. ರಂಗನಾಥ್ ವಿಷಯದಲ್ಲಿ ಅನುಮಾನವಿಲ್ಲ, ಕಮಿಟೆಡ್ ಪರಸನ್ಸ್ ಎಂದು ಇವರೆಲ್ಲರ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ. ಆದುದರಿಂದ ನೀವು ಸ್ವಲ್ಪ ಯೋಚನೆ ಮಾಡಬೇಕು. ಸ್ಟೇಟ್ ಸೆಕ್ಟಾರ್ ಬೆಳೆಯುವುದಕ್ಕೆ ಬದಲು ಅಳಿಸಿ ಹಾಕುವ ಪರಿಸ್ಥಿತಿ ಬಂದರೂ ಬರಬಹುದು. ಆ ರೀತಿ ಪ್ರವೃತ್ತಿ ಕಂಡುಬರುತ್ತಿದೆ. ಇನ್ನು ಕಬಲ್ಸ್ ಐಟಿಐ ಸಂಬಂಧಪಟ್ಟ ಹಾಗೆ ಮಾಡುತ್ತೇವೆಂದು ಹೇಳಿದರು. ಅದನ್ನು ಮಾಡಿದರೆ ಒಳ್ಳೆಯದು. ಅದರ ರೂಪರೇಶೆಗಳು ಏನು ಎಂದು ಹೇಳಬೇಕು.

ಇದು ಬಹಳ ಮುಖ್ಯವಾದುದು. ಈಗ ರೆವ್ಕೋನಲ್ಲಿ ಡಿಲೇ ಏನು ಇವೆ ಅದನ್ನು ಉಳಿಸಬೇಕಾದರೆ ನೀವು ಅವರಿಗೆ ಆದಷ್ಟು ಜಾಗ್ರತೆ ಹಣ ಸಹಾಯ ಮಾಡಿದರೆ ಆಗುತ್ತದೆ. ಇದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಇದೆ. ಅವರು ತಮ್ಮ ಸಹಾಯವನ್ನು ಕೇಳಿದ್ದಾರೆ. ಅವರಿಗೆ ಮೊದಲು 60 ಲಕ್ಷ ಕೊಡುವುದಕ್ಕೆ ಡಿಲೇ ಮಾಡಿದಿರಿ. ಈಗ ಅವರು ಒಂದು ಕೋಟಿ ರೂಪಾಯಿ ಕೇಳಿದ್ದಾರೆ. ಆ ಬಗ್ಗೆ ನೀವು ಏನೂ ವ್ಯಕ್ತಪಡಿಸಿಲ್ಲ. ನಿಮಗೂ ಮತ್ತು ಚನ್ನಬಸಪ್ಪನವರಿಗೂ ಏನು ಜಗಳವಾಯಿತು ಆ ಬಗ್ಗೆ ಏನೂ ಆಧಾರವಿಲ್ಲ. ಈವೊತ್ತು ಅದರಲ್ಲಿ $1\frac{1}{2}$ ಲಕ್ಷ ಮೀಟರ್‌ನ್ನು

(ಶ್ರೀ ಎಂ. ಎಸ್. ಕೃಷ್ಣನ್)

ತಯಾರು ಮಾಡುವುದಕ್ಕೆ ಸಾಧ್ಯತೆ ಇದೆ. ಆದರೆ ಅವರಲ್ಲಿ 5—6 ಸಾವಿರ ಮೀಟರ್‌ನ್ನು ತಯಾರು ಮಾಡುತ್ತಿದ್ದಾರೆ. ಇನ್ನೂ ಪೂರ್ತಿಯಾಗಿ ಅವರ ಕಂಟ್ರೋಲ್‌ಗೆ ಕೊಟ್ಟಿಲ್ಲ. ಸರ್ಕಾರೀ ಕ್ಷೇತ್ರದಲ್ಲಿರ ತಕ್ಕಂಥಾದ್ದಕ್ಕೆ ಸರ್ಕಾರದಲ್ಲಿರುವವರೇ ಸಹಾಯ ಮಾಡದೇ ಹೋದರೆ ಬೇರೆ ಖಾಸಗಿಯವರು ಬಂದು ಸಹಾಯ ಮಾಡುತ್ತಾರೆಯೇ; ಮಾಡುವುದಿಲ್ಲ. ಆದುದರಿಂದ ತಕ್ಷಣವಾಗಿ ಅವರಿಗೆ ಪೂರ್ಣ ಸಹಾಯ ಕೊಡಿ. ಸರ್ಕಾರಿ ಕ್ಷೇತ್ರದಲ್ಲಿರುವಂಥಾದ್ದನ್ನು ಬಿರ್ಲಾ ಅಂಥಾವರಿಗೆ ಸಹಾಯ ಮಾಡುವುದು ಒಳ್ಳೆಯದಲ್ಲ. ಇದಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಒಪ್ಪಿಕೊಳ್ಳದೇ ಹೋದರೆ ಇದಕ್ಕೆ ಬಂದು ಸಹಾಯ ಮಾಡಬೇಕು.

ಇನ್ನು ಸ್ಟೇಟ್ ಸೆಕ್ಟಾರ್ ಕನ್‌ಸರ್ನ್ಸ್ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ 17 ಸ್ಟೇಟ್ ಸೆಕ್ಟಾರ್ ಕನ್‌ಸರ್ನ್ಸ್ ಇವೆ. ಅದರಲ್ಲಿ 5 ಮಾತ್ರ ಲಾಭದಾಯಕವಾಗಿ ಕೆಲಸ ಮಾಡುತ್ತಾ ಇವೆ, ಬಾಕಿದು ಇಲ್ಲ. ಇದರಲ್ಲಿ ಮುಕ್ಕಾಲು ಭಾಗ ಅನಲೈಸ್ ಮಾಡಿ ನೋಡಿದರೆ ಎಲ್ಲಾ ಓವರ್ ಕ್ಯಾಪಿಟಲೈಸ್ ಆಗಿವೆ. ಇದನ್ನು ಲೆಕ್ಕಾಚಾರ ಹಾಕಿ ನೋಡುವುದಾದರೆ ದುರದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ ಎಂದರೆ ಕೆಲವು ಅಧಿಕಾರಿಗಳ ಮಾನಾಪಲಿ ಆಗಿಹೋಗಿ ಬಿಟ್ಟಿದೆ. ಮಂತ್ರಿಗಳು ಕೂಡ ಅವರು ಹೇಳಿದ ಹಾಗೆ ಕೇಳುತ್ತಿದ್ದಾರೆ ಎಂದು ತಿಳಿದು ಬಂದಿದೆ. ಇದು ತಮಗೂ ಗೊತ್ತಿದೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಈ ಕೈಗಾರಿಕೆಗಳು ಅಧಿಕಾರಿಗಳ ಮಾನಾಪಲಿ ಆಗಿರುವುದರಿಂದ ಈ ಕೈಗಾರಿಕೆಗಳು ನಾಶವಾಗಿ ಹೋಗುತ್ತಾ ಇವೆ. ಇದು ಕೆಲವು ಆಫೀಸರ್ಸ್‌ಗೆ ಹ್ಯಾಪಿ ಹಂಟಿಂಗ್ ಗ್ರೌಂಡ್ ಆಗಿದೆ. ನಾನು ಈ ಬಗ್ಗೆ ಹೋದ ಸಲ ಕೆಲವು ಜನರ ಹೆಸರನ್ನು ಹೇಳಿದ್ದೆ. ಇಲ್ಲಿ ಅವರ ಹೆಸರನ್ನು ಹೇಳುವುದಿಲ್ಲ. ಅದರಲ್ಲಿ ಒಬ್ಬರನ್ನು ಬೇರೆ ಕಡೆಗೆ ತೆಗೆದು ಹಾಕಿದ್ದೀರಿ. ಇನ್ನೊಬ್ಬರಿಗೆ ಮೇಲಕ್ಕೆ ಪ್ರಮೋಷನ್ ಕೊಟ್ಟಿದ್ದೀರಿ ಮತ್ತೊಬ್ಬರನ್ನು ತಮ್ಮ ಜೊತೆಯಲ್ಲೇ ನಿಕಟ ಸಂಬಂಧ ಇಟ್ಟುಕೊಂಡಿದ್ದೀರಿ. ಈ ರೀತಿ ಆದರೆ ನಮ್ಮ ರಾಜ್ಯದ ಸ್ಟೇಟ್ ಸೆಕ್ಟಾರ್ ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ನಮ್ಮ ಸ್ಟೇಟ್ ಸೆಕ್ಟಾರ್ಸ್ ಉಳಿಯ ಬೇಕಾದರೆ ವರ್ಕರ್ಸ್‌ದು ಎಫೆಕ್ಟೀವ್ ಕೋ ಆಪರೇಷನ್ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಇದರಲ್ಲಿ ಲಾಸ್ ಆಗುವುದಕ್ಕೆ ಕಾರಣವಾಗುತ್ತದೆ. ಸ್ಟೇಟ್ ಸೆಕ್ಟಾರ್ಸ್‌ನಲ್ಲಿ ರಿಯಲ್ ವರ್ಕರ್ಸ್ ಪಾರ್ಟಿಸಿಪೇಷನ್ ಮಾಡುವಂಥಾದ್ದಾಗಬೇಕು. ಮತ್ತು ಇದಕ್ಕೆ ಸಾರ್ವಜನಿಕರ ಸಹಾಯವನ್ನು ದೊರಕಿಸಿಕೊಳ್ಳುವಂತೆ ಪ್ರಯತ್ನ ಮಾಡಬೇಕು. ಅದುಬಿಟ್ಟು ಇದಕ್ಕೇನೇ ಒಬ್ಬರು ಡೈರೆಕ್ಟರನ್ನು ನೇಮಕ ಮಾಡಿದರೆ ಸರಿಹೋಗುವುದಿಲ್ಲ. ಆದುದರಿಂದ ಈ ಒಂದು ಪರಿಶೀಲನೆಗೆ ರಾಜ್ಯಮಟ್ಟದಲ್ಲಿ ಒಂದು ಸಮಿತಿ ಇರಬೇಕು. ಈ ಕಮಿಟಿಯಲ್ಲಿ ಮ್ಯಾನೇಜ್‌ಮೆಂಟ್, ಸ್ಟೇಟ್ ಸೆಕ್ಟಾರ್ ಇಂಡಸ್ಟ್ರೀಸ್ ಟ್ರೇಡ್ ಯೂನಿಯನ್ ರಪ್ರೆಸೆಂಟೇಟೀವ್ಸ್ ಅವರು ಯಾರಾದರೂ ಇರಲಿ ಅವರೊಬ್ಬರು ಮತ್ತು ಗೌರ್ನಮೆಂಟ್. ಈ ಮೂರು ಜನರನ್ನೊಳಗೊಂಡ ಒಂದು ಪರ್ಮನೆಂಟ್ ಕಮಿಟಿ ಮಾಡಿದರೆ ಅವರು ಆಗಿಂದಾಗ್ಗೆ ಇದರಲ್ಲಿ ಕೆಲಸಮಾಡಿ ಕಾರ್ಮಿಕರ ಸಹಾಯವನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಅದುದರಿಂದ ರಾಜ್ಯಮಟ್ಟದಲ್ಲಿ ಈ ಒಂದು ಸಮಿತಿಯನ್ನು ಮಾಡಬೇಕುಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಸ್ಟೇಟ್ ಸೆಕ್ಟಾರ್ಸ್‌ನ್ನು ಬೆಳೆಸಬೇಕು ಎಂದರೆ ತಾವು ಸಮತಾವಾದ ಸಮಾಜದ ರಾಷ್ಟ್ರದಲ್ಲಿ ಸಂಪರ್ಕ ಬೆಳೆಸದೇ ಹೋದರೆ ಕೈಗಾರಿಕಾ ಧೋರಣೆಯನ್ನು ಮಾರ್ಪಾಡು ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಹೋದ ಸಾರಿಯೇ ಹೇಳಿದ್ದೇನೆ. ನಾನು ರುಮೇನಿಯಕ್ಕೆ ಹೋಗಿ ಬಂದಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ನೀವು ಹೋಗಿ ಬಂದಿದ್ದೀರಿ, ನಾನು ಹೋಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೋಗಿ ಬಂದರೆ ಆಗ ಇದೆ ಮಂತ್ರಿಮಂಡಲದಲ್ಲಿ ಕೈಗಾರಿಕೆ ಮಂತ್ರಿಗಳಾಗಿ ಇರುತ್ತಿರೋ ಅಥವಾ ಹೋಂ ಮಿನಿಸ್ಟರ್ ಆಗಿ ಇರುತ್ತೀರೋ, ಗೊತ್ತಾಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ನಾವು ಸಮತಾವಾದ ಸಮಾಜದ ರಾಷ್ಟ್ರದಲ್ಲಿ ಕಾಗದ ಪತ್ರ ವ್ಯವಹಾರಗಳನ್ನು ನಡೆಸುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಆರೀತಿಯಲ್ಲಿ ಸಮತಾವಾದ ಸಮಾಜದ ರಾಷ್ಟ್ರದಲ್ಲಿ ಸಂಪರ್ಕ ಇಟ್ಟುಕೊಂಡು ವ್ಯವಹಾರ ನಡೆಸುತ್ತಿದ್ದೇವೆ ಎಂಬುದು ಬಹಳ ಸಂತೋಷ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಅದು ಏನೆಂದರೆ ನಿಮ್ಮನ್ನು ಟೀಕೆ ಮಾಡಬೇಕಾಗಿದೆ.

ಏತಕ್ಕೆಂದರೆ ಸ್ಟೇಟ್ ಸೆಕ್ಟರ್‌ನ್ನು ಬೆಳೆಸುವುದಕ್ಕೆ ಬದಲಾಗಿ ಜಾಯಿಂಟ್ ಸೆಕ್ಟರ್‌ನ್ನು ಬೆಳೆಸುತ್ತಿದ್ದೀರಿ. ಪ್ರೈವೇಟ್ ಸೆಕ್ಟರ್ ಮಾಡುವುದು ನೀವು ಸರಿಯಾದ ಡೈರಕ್ಷನ್ ಕೊಡುತ್ತಾ ಇಲ್ಲ. ಈಗ ಗಂಗಾವತಿ ಷುಗರ್ ಫ್ಯಾಕ್ಟರಿ, ದಾವಣಗೆರೆ ಷುಗರ್ ಮತ್ತು ಬಿರಾಕ್ ಮಿನಿ ಸ್ಟೀಲ್ ಪ್ಲಾಂಟ್ ಇವೆಲ್ಲಕ್ಕೂ ಕೂಡ ಎಂ. ಎಸ್. ಐ. ಐ. ಡಿ ಸಿ. ಯವರು ಇನ್‌ವೆಸ್ಟ್ ಮಾಡುತ್ತಾರೆ. ಇದು ಯಾರ ಹಣ ? ಇದು ನಿಜವಾಗಿಯೂ ಸರ್ಕಾರದ ಹಣ ಎಂದು ಹೇಳುತ್ತೇನೆ. ಈ ಹಣ ಕೊಡುವುದರಲ್ಲಿ ಹೆಚ್ಚು ಕಡಿಮೆ ಮಾಡಿದ್ದಾರೆ. ಗಂಗಾವತಿ ಷುಗರ್ ಫ್ಯಾಕ್ಟರಿಗೆ ಕಡಿಮೆ ಹಣ ಕೊಟ್ಟಿದ್ದಾರೆ. ನ್ಯಾಯವಾಗಿ ಇದನ್ನು ಚೆನ್ನಾಗಿ ಬೆಳೆಸುವುದಕ್ಕೆ ಹೆಚ್ಚು ಅನುಕೂಲ ಮಾಡಿಕೊಡಬೇಕು. ಈ ಜಾಯಿಂಟ್ ಸೆಕ್ಟರ್‌ನಲ್ಲಿರುವ ಈ ಒಂದು ಪರಿಸ್ಥಿತಿ ಹೋಗಬೇಕು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅದರೆ ಈ ರೀತಿಯಾಗಿ ಜಾಯಿಂಟ್ ಸೆಕ್ಟರ್‌ನ್ನು ಇನ್ನೂ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಈ ಬಗ್ಗೆ ಇನ್ನೊಂದು ವಿಷಯ ಹೇಳುವುದಾದರೆ ತಾವು ತಾರೀಖು 21-9-1972ರಲ್ಲಿ ಮೈಸೂರು ರಾಜ್ಯದ 3 ದೊಡ್ಡ ಫ್ಯಾಕ್ಟರಿಗಳ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟಿದ್ದೀರಿ, ಆ ಬಗ್ಗೆ ಏನಾಯಿತು ಈ ಮೂರು ಫ್ಯಾಕ್ಟರಿಗಳು ಯಾವುವು ಎಂದರೆ :—

1. ಪ್ಯಾಥಲಿಕ್ ಅನ್‌ಹೈಡ್ರೈಡ್ ಪ್ರಾಜೆಕ್ಟ್.—ಇದರ ಬಂಡವಾಳ 6.5 ಕೋಟಿ ರೂಪಾಯಿ ಇದಕ್ಕೆ ಇನ್‌ವೆಸ್ಟ್‌ಮೆಂಟ್ ಎಂ. ಎಸ್. ಐ. ಐ. ಡಿ ಸಿ. ಮತ್ತು ಪ್ರೈವೇಟ್‌ನವರೂ ಸೇರಿದ್ದಾರೆ.

2. ನೈಲಾನ್ ಪ್ಲಾಂಟ್ ಮಂಗಳೂರು.—ಇದರ ಬಂಡವಾಳ 12 ಕೋಟಿ ರೂಪಾಯಿ, ಇದರ ಪಾರ್ಟ್‌ನರ್ ರಮೇಷ ಪೈ.

3, ಗಂಗಾವತಿ ಷುಗರ್ ಫ್ಯಾಕ್ಟರಿ.—ಇದರ ಬಂಡವಾಳ 4 ಕೋಟಿ ರೂಪಾಯಿ. ಈ ಮೂರು ಫ್ಯಾಕ್ಟರಿಗಳು ಜಾಯಿಂಟ್ ಸೆಕ್ಟರ್‌ನಲ್ಲಿ ನಡೆಸಿದರೂ ಇದಕ್ಕೆ ಹೇರಳವಾದ ಹಣವನ್ನು ಅವರು ಇನ್‌ವೆಸ್ಟ್ ಮಾಡುತ್ತಾರೆ. ಅದರೂ ಕೂಡ ನೀವು ಹಾಕಿಕೊಂಡಿರತಕ್ಕಂಥ ಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಅದುದರಿಂದ ತಾವು ಬೇರೆ ದಾರಿ ಹುಡುಕಿಕೊಂಡು ಹೋಗಬೇಡಿ. ಎಂದು ಹೇಳುತ್ತೇನೆ.

ಇನ್ನು ಎಂ. ಐ. ಎಸ್. ಲಿಮಿಟೆಡ್ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಈ ವಿಚಾರದಲ್ಲಿ ದತ್ ಕಮಿಟಿಯವರು ಕೊಟ್ಟ ರಿಪೋರ್ಟ್ ಬಗ್ಗೆ ಏನಾಯಿತು ಅದರ ಬಗ್ಗೆ ವರದಿ ಕೊಡಿ.

ಇನ್ನು ಸಿ. ಬಿ. ಐ ನವರು ಫೆರೋಸಿಲಿಕಾನ್ ಡೀಲ್ ಬಗ್ಗೆ ವರದಿ ಕೊಟ್ಟಿದ್ದಾರೆ ಅದನ್ನು ಟೇಬಲ್ ಮುಂದೆ ಇಟ್ಟರೆ ಒಳ್ಳೆಯದು. ಅದರ ಜೊತೆಗೆ ಮತ್ತೊಂದು ಮುಖ್ಯವಾದ ಅಂಶ ಏನೆಂದರೆ ನಮ್ಮ ರಾಜ್ಯಕ್ಕೆ ವಿಜಯನಗರ ಸ್ಟೀಲ್ ಪ್ಲಾಂಟ್ ಬರುತ್ತದೆ, ಬಹಳ ಸಂತೋಷ. ಇನ್ನು ಕಾರವಾರದಲ್ಲಿ ಕಾರ್ಬನ್ ಬೇಸ್ಡ್ ಸ್ಟೀಲ್ ಪ್ಲಾಂಟ್ ಬರುವ ಬಗ್ಗೆ ಏನಾಯಿತು. ಅದು 200 ಕೋಟಿ ರೂಪಾಯಿಯ ಯೋಜನೆ ಎಂದು ಹೇಳಿದ್ದಾರೆ. ಅದು ಬರಬೇಕು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಕೊನೆಯದಾಗಿ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಅದು ಏನೆಂದರೆ ಸೋಸಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂದು ಏನು ಹೇಳುತ್ತೀರೋ ಅದು ಪಬ್ಲಿಕ್ ಸೆಕ್ಟರ್‌ನಲ್ಲಿ ಇರಬೇಕು ಎನ್ನುವುದಕ್ಕೆ ಒಂದು ಸರಿಯಾದ ವ್ಯವಸ್ಥೆ ಇಲ್ಲ.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ನೋಡುವುದಾದರೆ ನೀವು ಏನು ಗುರಿ ಇಟ್ಟಿದ್ದೀರೋ ಆ ಗುರಿ ಮುಟ್ಟುತ್ತದೆಯೋ ಅದನ್ನು ಯೋಚನೆ ಮಾಡಬೇಕು. ಆ ಗುರಿ ಮುಟ್ಟಿದರೆ ಸಂತೋಷ. ಅದರೆ ಯಾವ ಅಧಿಕಾರಿ ಮೇಲೆ ಗುರುತರವಾದ ಅಪಾದನೆ ಇದೆ, ಯಾರ ಮೇಲೆ ಸಿ. ಬಿ. ಐ. ಎನ್‌ಕ್ವೈರಿ ಇದೆ ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಯಾರು ಎಂಬುದು ನಿಮಗೆ ಗೊತ್ತಿದೆ. ಅವರನ್ನು ಜಾಯಿಂಟ್ ಡೈರೆಕ್ಟರನ್ನಾಗಿ ಮಾಡಿದ್ದೀರಿ. ಆ ಫೈಲು 15 ದಿವಸದಲ್ಲಿ ಮೂವ್ ಆಗಿ ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಏತಕ್ಕೆಂದರೆ ಆ ದೊಡ್ಡ ಅಧಿಕಾರಿಗಳು ನಿಮಗೆ ಸಂಬಂಧಪಟ್ಟ ಸ್ನೇಹಿತರು ಎಂದು ತಿಳಿದು ಬಂದಿದೆ, ಹೀಗಾದರೆ ನಿಮ್ಮ ಮೇಲೆ ಹೇಗೆತಾನೇ ನಂಬಿಕೆ ಬರಬಹುದು ? ಅಡ್ಮಿನಿಸ್ಟ್ರೇಷನ್ ಸರಿಯಾಗಿ ನಡೆಸುತ್ತಾರೆಯೋ ಎನ್ನುವ ನಂಬಿಕೆ ಬರುತ್ತದೆಯೇ ? ನಾನು ಮೊದಲೇ ಹೇಳಿದ ಹಾಗೆ ಈವೊತ್ತಿನ ದಿವಸ ಆ ಮೂವರನ್ನು ಬೇರೆ ಕಡೆಗೆ ಕಳುಹಿಸಿದ್ದಾರೆ. ಅದರಲ್ಲಿ ಒಬ್ಬರನ್ನಂತೂ ಎಂ. ಎಸ್. ಐ. ಐ. ಡಿ. ಸಿ. ಗೆ ಹಾಕಿದ್ದಾರೆ. ಅದರಲ್ಲಿ ಬೇಕಾದಷ್ಟು ಹಣ ಇದೆ. ಆ ಖಾಸಗೀ ಕ್ಷೇತ್ರಕ್ಕೆ ಇವರನ್ನು ಪೋಸ್ಟ್ ಮಾಡಿದ್ದೀರಿ. ಏತಕ್ಕೆಂದರೆ ಅದರ ಸಂಬಂಧ ಇಟ್ಟುಕೊಂಡು ಇವರು ಬೇಕಾದಷ್ಟು ಹಣ ಮಾಡಿ ಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಎನ್ನುವ ಅನುಮಾನ ಇದೆ. ಏತಕ್ಕೆಂದರೆ ಅವರಮೇಲೆ ಮೊದಲೇ ಆರೋಪಣೆ ಇದೆ.

(ಶ್ರೀ ಎಂ. ಎಸ್. ಕೃಷ್ಣನ್)

ಈಗ ಮತ್ತೆ ಅವರಿಗೆ ಮತ್ತೊಂದು ಅವಕಾಶ ಕೊಟ್ಟಿರುವುದರಿಂದ ನಮಗೆ ಇನ್‌ಸ್ಪಿರೇಷನ್ ಆಗುತ್ತದೆ. ಇದರಿಂದ ನಿಮ್ಮ ಸಮತಾವಾದ ಸಮಾಜದ ಗುರಿ ಮುಟ್ಟುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಮಾತನಾಡುವ ರೀತಿ ನೋಡಿದರೆ ಪ್ರೈವೇಟ್ ಸೆಕ್ಟರ್‌ನಲ್ಲಿ ಇದ್ದಂಥ ಜನರೂ ಕೂಡ ಅವರ ಬಗ್ಗೆ ಹೇಳುತ್ತಾರೆ.

3-00 P M.

He is opposed to the public sector ; he will sabotise the public sector. ಇಂಥ ಜನರನ್ನು ಮೇಲಕ್ಕೆ ಕಳುಹಿಸಿರುವುದು ಸರಿಯಾದುದಲ್ಲವೆಂದು ಮಾತ್ರ ಹೇಳುತ್ತೇನೆ.

ಇನ್ನೊಂದು ನಿದರ್ಶನ ಕೊಡಬೇಕಾಗಿದೆ. ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಇದೆ. ನಮ್ಮ ರಾಜ್ಯದಲ್ಲಿ 182 ಜನಗಳಿಗೆ ಲೈಸೆನ್ಸ್ ಇವೆ ಎಂದು ತಿಳಿದು ಬಂದಿದೆ. 1972ರ ಮಾರ್ಚಿ ತಿಂಗಳಲ್ಲಿ ಏನಾಯಿತು ಎಂದರೆ ರೆಡ್ ಬುಕ್ ಎಂದು ಸರ್ಕಾರದವರು ಪ್ರಕಟಿಸುತ್ತಾರೆ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಕೋಟ ಕೊಡುವವರಿಗೆ ಲೈಸೆನ್ಸ್‌ಗಳನ್ನು ಮಾಡಬೇಕಾದರೆ ಇಂತಿಂಥ ಯಂತ್ರಗಳಿದ್ದರೆ ಮಾತ್ರ ಕೋಟ ರಿನ್ಯೂ ಮಾಡುತ್ತೇವೆಂದು ಹೇಳಿದ್ದಾರೆ, ಇಂಥಿಂಥ ಯಂತ್ರಗಳಿರಬೇಕೆಂದು ಸ್ಪೆಸಿಫಿಕೇಷನ್ಸ್ ಇವೆ. ಆ ಪ್ರಕಾರ ಇದ್ದವರಿಗೆ ಮಾತ್ರ ಸ್ಟೈನ್‌ಲೆಸ್ ಸ್ಟೀಲ್ ಕೊಡುತ್ತೇವೆಂದು ಇದೆ. ರಾಜ್ಯದಲ್ಲಿರುವ 182 ಜನರ ಪೈಕಿ ಎಂಟು ಹತ್ತು ಜನಗಳು ಮಾತ್ರ ಅಂಥ ಯಂತ್ರಗಳನ್ನು ಇಟ್ಟುಕೊಂಡಿದ್ದಾರೆಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಕೊನೆಗೆ ಏನಾಯಿತು ಎಂದರೆ ಅವರಿಗೆ ಮಾತ್ರ ಸರ್ಟಿಫಿಕೇಟುಗಳನ್ನು ಕೊಡುವುದು, ಬೇರೆಯವರಿಗೆ ಇಲ್ಲ ಎಂದಾಯಿತು. ಮತ್ತೆ ಪುನಃ ಅಧಿಕಾರಿಗಳ ಪ್ರಭಾವಕ್ಕೆ ಮಣಿದು 182 ಜನಗಳಿಗೂ ಸಹ ಸರ್ಟಿಫಿಕೇಟುಗಳನ್ನು ಕೊಡಲಾಗಿದೆ. ಅವರೆಲ್ಲರ ಹತ್ತಿರವೂ ಯಂತ್ರಗಳಿವೆ ಎಂದು ಸುಳ್ಳು ಸರ್ಟಿಫಿಕೇಟು, ಬೋಗಸ್ ಸರ್ಟಿಫಿಕೇಟು ಕೊಟ್ಟು ಸ್ಟೈನ್‌ಲೆಸ್ ಸ್ಟೀಲ್ ಕೋಟ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಂದು ಗೊತ್ತಾಗಿದೆ. ಮಾನ್ಯ ಮಂತ್ರಿಗಳು ಅದರಲ್ಲಿ ಷರೀಕಾಗಿದ್ದಾರೆ ಎಂದು ಹೇಳದೆ ಹೋದರೂ, ಆ ನಿರ್ಣಯಕ್ಕೆ ಬಂದರೂ ತಪ್ಪಾಗಲಾರದು ಎಂದೆನ್ನಿಸುತ್ತದೆ ಬಹಳ ಅನ್ಯಾಯದ ಪರಿಸ್ಥಿತಿ ಬಂದಿದೆ. ಇದರಿಂದ ಕೂಡ ನಂಬಿಕೆ ಬರುವುದು ಕಷ್ಟವೆಂದು ಹೇಳಬೇಕಾಗಿದೆ.

ಜಾಯಿಂಟ್ ಡೈರೆಕ್ಟರ್ ಆಗಿರುವವರನ್ನು ಬೇರೆ ಬೇರೆ ಡಿವಿಜನ್ನುಗಳಿಗೆ ಕಳುಹಿಸುತ್ತೇವೆ ಸ್ಟ್ರೀಮ್‌ಲೈನ್ ಮಾಡುತ್ತೇವೆ ಎಂದು ವಿಧಾನ ಪರಿಷತ್ತಿನಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವರನ್ನು ಬೇರೆ ಬೇರೆ ಕಡೆಗೆ ಕಳುಹಿಸಿದ ಮಾತ್ರಕ್ಕೆ ಸ್ಟ್ರೀಮ್ ಲೈನ್ ಆಗುವುದಿಲ್ಲ. ಬೆಳಗಾಂ, ಬಿಜಾಪುರ, ಹಾಸನ, ಬಿದರೆ, ಬೆಂಗಳೂರು ಹೀಗೆ ನಾಲ್ಕಾರು ಕಡೆಗಳಲ್ಲಿ ಈಗಾಗಲೇ ಕೆಲವು ಪೋಸ್ಟ್ಸ್ ವೇಕೆಂಟ್ ಆಗಿವೆ. ರೂರಲ್ ಇಂಡಸ್ಟ್ರೀಸ್ ಸ್ಕೀಂನಲ್ಲಿ ಹಲವಾರು ವರ್ಷಗಳಿಂದ ಡೆಪ್ಯೂಟಿ ಡೈರೆಕ್ಟರ್ ಪೋಸ್ಟ್ಸ್ ವೇಕೆಂಟಾಗಿದ್ದು ಅಸಿಸ್ಟೆಂಟ್ ಡೈರೆಕ್ಟರುಗಳು ಇನ್‌ಚಾರ್ಜ್ ಕೆಲಸ ಮಾಡುತ್ತಿದ್ದಾರೆ. ಹೀಗಾದರೆ ಯಾವ ರೀತಿ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯ ? ಖಾಲಿ ಇರತಕ್ಕ ಪೋಸ್ಟ್ಸ್ ಭರ್ತಿ ಮಾಡಿ ಅವರಿಗೆ ಜವಾಬ್ದಾರಿ ಕೊಟ್ಟು, ಕೆಲಸದಲ್ಲಿ ಹತೋಟಿ ತಂದರೆ ಒಳ್ಳೆಯದಾಗುತ್ತದೆ. ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜಾಯಿಂಟ್ ಡೈರೆಕ್ಟರುಗಳನ್ನು ವರ್ಗ ಮಾಡುವುದರಿಂದ ಏನೂ ಕೆಲಸವಾಗುವುದಿಲ್ಲ. ಇರತಕ್ಕ ವೇಕೆನ್ಸಿ ಭರ್ತಿ ಮಾಡಬೇಕಾದ್ದು ಮುಖ್ಯವೆಂದು ಹೇಳುತ್ತೇನೆ.

ಪಬ್ಲಿಕ್ ಸೆಕ್ಟಾರಿನಲ್ಲಿ ಸರಿಯಾಗಿ ಕೆಲಸಕಾರ್ಯಗಳು ನಡೆಯುತ್ತಿಲ್ಲ ಎನ್ನುವ ದೂರುಗಳು ಬರುತ್ತಿವೆ. ಅವು ಸರಿಯಾಗಿ ಕೆಲಸ ಮಾಡಬೇಕಾದರೆ ಫುಲ್ ಕೆಪಾಸಿಟಿ ಉಪಯೋಗ ಮಾಡಿಕೊಳ್ಳಬೇಕು. ಕಾಂಪೊನೆಂಟ್ಸ್ ತಯಾರು ಮಾಡುವುದಕ್ಕೆ ಕೂಡ ನಮ್ಮಲ್ಲಿ ಒಳ್ಳೊಳ್ಳೆಯ ಮೆಷಿನರಿ ಇದೆ, ಒಳ್ಳೊಳ್ಳೆಯ ಕೆಲಸಗಾರರಿದ್ದಾರೆ. ಪೂರ್ಣವಾಗಿ ಖಾಸಗಿಯವರಿಗೆ ಕೊಡುವುದಕ್ಕೆ ಬದಲು ಪಬ್ಲಿಕ್ ಸೆಕ್ಟಾರಿನಲ್ಲಿ ಕೂಡ ಇವುಗಳನ್ನು ತಯಾರು ಮಾಡಬೇಕು. 1971-72ರಲ್ಲಿ ನಮ್ಮ ರಾಜ್ಯದಲ್ಲಿರುವ 87 ಯೂನಿಟ್‌ಗಳು 5 ಕೋಟಿ ರೂಪಾಯಿ ಬಾಳುವಷ್ಟು ಕಾಂಪೊನೆಂಟ್ಸ್ ತಯಾರು ಮಾಡಿವೆ ಎನ್ನುವ ವಿಚಾರ ನನಗೆ ತಿಳಿದು ಬಂದಿದೆ. ಮೈಸೂರು ಐರನ್ ಮತ್ತು ಸ್ಟೀಲ್, ರೆಂಕೊ,

ಎನ್. ಜಿ. ಇ. ಎಫ್., ಬಿ. ಇ. ಎಲ್. ಹೀಗೆ ಎಲ್ಲರನ್ನೂ ಸೇರಿಸಿ ಒಂದು ಸಮಿತಿ ಅಥವಾ ಸೆಲ್ ಮಾಡಿ ಯಾರು ಯಾರಿಗೆ ಯಾವ ಯಾವ ಕಾಂಪೊನೆಂಟ್ಸ್ ಮಾಡುವುದಕ್ಕೆ ಕೊಡಬಹುದು ಎಂದು ಯೋಚನೆ ಮಾಡಿದರೆ ಫುಲ್ ಕೆಪೆಸಿಟಿ ಯುಟಿಲೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಿಕ್ ಯೂನಿಟ್ಸ್ ಕಾರ್ಪೊರೇಷನ್ ಮಾಡಬೇಕು. ಮೈಸೂರು ಮೆಷಿನರಿ, ಚಾಮುಂಡಿ ಫರ್ಟಿಲೈಸರ್ಸ್, ವೈಕಾನ್ ಈ ಕೈಗಾರಿಕೆಗಳು ಮುಚ್ಚಿವೆ, ಸರ್ಕಾರ ಇಂಥ ಕೈಗಾರಿಕೆಗಳನ್ನು ತೆಗೆದುಕೊಳ್ಳಬೇಕು ಮತ್ತು ಅದಕ್ಕಾಗಿ ಒಂದು ಕಾರ್ಪೊರೇಷನ್ ಮಾಡುವ ವಿಚಾರವನ್ನೂ ಯೋಚನೆ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಕೈಗಾರಿಕೆ ಬೇಡಿಕೆಯ ಸ್ವರೂಪ, ನೀತಿ ಆಡಳಿತ ಇತ್ಯಾದಿ ವಿಷಯ ಮಾತನಾಡಬೇಕಾಗಿದೆ. ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆ ರೇಷ್ಮೆ ಕೈಗಾರಿಕೆಯೂ ಸೇರಿ ಸುಮಾರು 16,74,20,000 ರೂಪಾಯಿ ಆಗುತ್ತದೆ. ಕೈಗಾರಿಕೆಗಳಿಂದ ನಮಗೆ ಬರತಕ್ಕ ಉತ್ಪಾದನೆ ಸುಮಾರು 14 ಕೋಟಿ 30 ಲಕ್ಷ ರೂಪಾಯಿ ಮಾತ್ರ. 2 ಕೋಟಿ 74 ಲಕ್ಷ ರೂಪಾಯಿ ಕೊರತೆಯಾಗತಕ್ಕ ನೀತಿ ಇದರಲ್ಲಿ ಅಡಕವಾಗಿದೆ. ಕೈಗಾರಿಕಾ ನೀತಿ ಏನಿದೆ ಎಂದರೆ ಖಾಸಗಿ ಮಾಲೀಕರನ್ನು ಕರೆದು ಕೈಗಾರಿಕೆ ಸ್ಥಾಪನೆ ಮಾಡಿ ನಡೆಸಿ ಎಂದು ಹೇಳುತ್ತಿದ್ದೇವೆ. ನಾನು ಒಂದು ಸಲಹೆ ಮಾಡುವುದಾದರೆ ಮಾನ್ಯ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ನಾವು ಹೊಗಳುವುದಕ್ಕೆ ಹೋಗುವುದಿಲ್ಲ. ಮಂತ್ರಿಗಳು ಸಮಾಜವಾದದ ಬಗ್ಗೆ ಅನೇಕ ವರ್ಷ ದುಡಿದು ಈಗ ಅಧಿಕಾರದಲ್ಲಿ ಬಂದಿದ್ದಾರೆ. ಎಂದಾದರೂ ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳಬೇಕಾದ ಪದ್ಧತಿಯಾಗಲೇ ಬೇಕು. ಅದಕ್ಕೆ ಹಿಂದೆ ನಾನು ಸೂಚನೆ ಕೊಟ್ಟಿದ್ದೇನೆ. ಸೂಚನೆ ಮಾತ್ರ ಇದೆಯೇ ಹೊರತು ಅದಕ್ಕೆ ಬೇಕಾಗಿರತಕ್ಕ ಪ್ರಾಜೆಕ್ಟ್‌ಗಳು ನಮ್ಮಲ್ಲಿಲ್ಲ. ಕೈಗಾರಿಕೆಗಳನ್ನು ಖಾಸಗಿ ಮಾಲೀಕರು ಸ್ಥಾಪನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅನೇಕ ರೀತಿಯ ಸೌಲಭ್ಯಗಳನ್ನು ಕೊಡುತ್ತೇವೆ, ಬನ್ನಿ ಎಂದು ಕರೆಯುತ್ತೇವೆ. ಅವರು ಹೇಗೆ ಬರುತ್ತಾರೆ ಎನ್ನುವ ಪ್ರಶ್ನೆ ಇದೆ. ನಮ್ಮ ಸರ್ಕಾರದ ನೀತಿ ಇಂದಲ್ಲ, ಎಂದಾದರೂ ಒಂದು ದಿವಸ ಸಮಾಜವಾದ ಸರ್ಕಾರವಾಗಲೇ ಬೇಕು. ನಾವು ಈಗಾಗಲೇ ಲ್ಯಾಂಡ್ ಸೀಲಿಂಗ್ ತಂದಿದ್ದೇವೆ, ಅರ್ಬನ್ ಪ್ರಾಪರ್ಟಿ ಸೀಲಿಂಗ್ ತರುವವರಿದ್ದೇವೆ. ಯಾರಾದರೂ ಮಾಲೀಕರಿಗೆ ಹೆದರಿಕೆಯಾಗತಕ್ಕ ವಿಚಾರವಾಗಿದೆ ಇದು. ನಾವು ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಅದು ಸುಭದ್ರವಾಗಿರುತ್ತದೆಯೋ ಇಲ್ಲವೋ ಎನ್ನುವ ಭಯ ಅವರಿಗಿರುತ್ತದೆ. ಆದ್ದರಿಂದ ನಮ್ಮ ಕಾಲ ಮೇಲೆ ನಿಂತುಕೊಂಡು ನಾವೇ ಕೈಗಾರಿಕೆಗಳನ್ನು ನಡೆಸೋಣ ಎನ್ನುವ ಸಲಹೆಯನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಅದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಅದಕ್ಕೆ ದುಡ್ಡು ಹೊಂದದೆ ಇದ್ದರೆ ಸಾಲವಾದರೂ ಮಾಡಬೇಕಾದ ಪ್ರಸಂಗವಿದೆ, ಮಾಡಲೇ ಬೇಕು.

ಭದ್ರಾವತಿ ಕಾರ್ಖಾನೆಯಲ್ಲಿ 30 ಕೋಟಿ 20 ಲಕ್ಷ ರೂಪಾಯಿ ಉತ್ಪಾದನೆ ಮಾಡುತ್ತಾರೆ. ಆದರೆ ಅದರಲ್ಲಿ ಬಂದಿರತಕ್ಕ ಲಾಭ ಒಂದು ಪರ್ಸೆಂಟ್ ಕೂಡ ಇಲ್ಲ. ಇದರ ಹಿನ್ನೆಲೆ ಏನು ಎಂದು ನೋಡಬೇಕು. ಖಾಸಗಿ ಕಾರ್ಖಾನೆಯಲ್ಲಿ 5 ಕೋಟಿ ರೂಪಾಯಿ ಉತ್ಪಾದನೆಯಾದರೆ 10-15 ಪರ್ಸೆಂಟ್ ಲಾಭ ಬರುವ ಮಟ್ಟದಲ್ಲಿ ಕೆಲಸ ಮಾಡುತ್ತಾರೆ. ಆದರೆ ಸರ್ಕಾರಿ ಸಂಸ್ಥೆಯಲ್ಲಿ 30 ಕೋಟಿ ರೂಪಾಯಿ ಒಂದು ಪರ್ಸೆಂಟ್ ಕೂಡ ಲಾಭ ಬರುವುದಿಲ್ಲ. ಇದನ್ನು ನೋಡಿದರೆ ನಮ್ಮ ಕೈಗಾರಿಕಾ ನೀತಿಯಲ್ಲಿ ಲೋಪವಿದೆ ಎಂದು ಒಪ್ಪಿಕೊಳ್ಳಲೇಬೇಕು.

ಪದೇ ಪದೇ ಅಧಿಕಾರಿಗಳನ್ನು ಬದಲಾವಣೆ ಮಾಡುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಕೆಲಸ ಮಾಡುವ ಅಧಿಕಾರಿಗಳಿಗೆ ಹೊಣೆಗಾರಿಕೆ ಇರುವುದಿಲ್ಲ. ಅಲ್ಲಿ ಏನಾದರೂ ತಪ್ಪುಗಳು ನಡೆದಿದ್ದರೆ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಒಂದು ಕಾರ್ಖಾನೆಯ ಜವಾಬ್ದಾರಿಯನ್ನು ವಹಿಸಿ ಅದರಲ್ಲಿ ಸರಿಯಾಗಿ ಉತ್ಪಾದನೆ ಮಾಡದೆ ಇದ್ದರೆ ನಿಮ್ಮ ಮೇಲೆ ಜವಾಬ್ದಾರಿ ಬರುತ್ತದೆ ಎನ್ನುವ ಬೈಂಡಿಂಗ್ ಮಾಡತಕ್ಕ ನೀತಿ ಕೈಗಾರಿಕೆಯಲ್ಲಿ ಎಲ್ಲಿಯವರೆಗೆ ಇರುವುದಿಲ್ಲ ಅಲ್ಲಿಯವರೆಗೆ ಅಧಿಕಾರಿಗಳು ಧರ್ಮಛತ್ರದಲ್ಲಿರುವ ಧರ್ಮಾಧಿಕಾರಿಗಳ ಹಾಗೆ ಇರುತ್ತಾರೆ. ಕಾರ್ಖಾನೆಗಳಿಗೆ ಡೈರೆಕ್ಟರಾಗಿ, ಜನರಲ್ ಮ್ಯಾನೇಜರ್ ಆಗಿ ಹಾಕುವಂಥ ಅಧಿಕಾರಿಗಳನ್ನು ಕೆಲವು ವರ್ಷಕಾಲ ಅಲ್ಲಿಯೇ ಇಟ್ಟು, ಅವರಿಗೆ ಎಲ್ಲ ಜವಾಬ್ದಾರಿಯನ್ನೂ ಕೊಟ್ಟು ಲಾಭದಾಯಕವಾಗಿರುವಂತೆ ಕೆಲಸ ಮಾಡಬೇಕು, ನಷ್ಟವಾದರೆ ಅದಕ್ಕೂ ಜವಾಬ್ದಾರರಾಗಬೇಕಾಗುತ್ತದೆ, ಎನ್ನುವ ನೀತಿಯನ್ನು ಅನುಸರಿಸಬೇಕು. ತಮಗೆ ಗೊತ್ತಿರುವ ಹಾಗೆ ವರ್ಷ

(ಶ್ರೀ ಕೆ. ಶ್ರೀರಾಮುಲು)

ಒಂದಕ್ಕೆ ಸುಮಾರು ಹನ್ನೊಂದು ಲಕ್ಷ ಜನ ಹುಟ್ಟುತ್ತಿದ್ದಾರೆ. ಇದರಂತೆ ಹನ್ನೊಂದು ಲಕ್ಷ ಜನ ಸಂಖ್ಯೆ ಜಾಸ್ತಿಯಾಗುತ್ತ ಬರುತ್ತದೆ. ಇಷ್ಟು ಹೆಚ್ಚು ಜನಸಂಖ್ಯೆಗೆ ತಕ್ಕಂತೆ ಎಷ್ಟು ಜನರಿಗೆ ಕೈಗಾರಿಕೆಗಳಲ್ಲಿ ಕೆಲಸಗಳನ್ನು ಒದಗಿಸಿಕೊಡುವುದು ಸಾಧ್ಯ? ಇದನ್ನು ನಿಮ್ಮ ಕೈಗಾರಿಕಾ ಇಲಾಖೆಗಳಲ್ಲಿರುವ ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ತಾವು ಇದನ್ನು ಗಮನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ. ಹಾಲಿ ಇರ ತಕ್ಕ ಕೈಗಾರಿಕೆಗಳಲ್ಲಿ ಇಲ್ಲಿನ ಅಧಿಕಾರಿಗಳು ದುಡ್ಡು ಖರ್ಚು ಮಾಡುವುದೊಂದೇ ಇವರಿಗೆ ತಿಳಿದಿರುವುದು, ಆ ದುಡ್ಡಿಗೆ ತಕ್ಕಂತೆ ವ್ಯವಸ್ಥಿತವಾದ ಕೆಲಸಗಳಾಗುತ್ತಿಲ್ಲ. ನಾನು ಕಾರ್ಮಿಕನಾಗಿ ತಿಳಿದುಕೊಂಡಿರುವ ಪ್ರಕಾರ ಮೂವತ್ತು ದಿನಗಳು ಪೂರ್ತಿ ಒಂದು ಕೈಗಾರಿಕೆಯಲ್ಲಿ ಕೆಲಸ ಮಾಡಿದರೆ ನಾಲ್ಕನೆ ಒಂದು ಭಾಗದಷ್ಟು ಲಾಭ ಬರಬಹುದು ಮತ್ತು ಆರನೇ ಒಂದು ಭಾಗದಷ್ಟು ಹೆಚ್ಚು ಜನಕ್ಕೆ ಕೆಲಸಗಳೂ ಸಿಗಲು ಅವಕಾಶ ಸಿಗಬಹುದು ಮತ್ತು ಈ ರೀತಿ ವ್ಯವಸ್ಥಿತವಾಗಿ ಕೈಗಾರಿಕೆಗಳು ನಡೆದರೆ ಇದರಿಂದ ಸ್ವಲ್ಪಮಟ್ಟಿಗಾದರೂ ನಿರುದ್ಯೋಗದ ಸಮಸ್ಯೆ ಕಡಿಮೆಯಾಗಬಹುದು, ಸರಕಾರ ಇದನ್ನು ಇನ್ನೂ ಚೆನ್ನಾಗಿ ಪರಿಶೀಲನೆ ಮಾಡುವುದೊಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ನಮ್ಮ ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ನಮ್ಮ ರಾಜ್ಯದಲ್ಲಿರುವ ಕೈಗಾರಿಕಾಧಿಕಾರಿಗಳಿಗೆ ಸಂಬಳ ಕೊಡುವಂತೆ ಕೊಡುವುದಿಲ್ಲ. ಅಲ್ಲಿರುವ ಕೈಗಾರಿಕೆಗಳಲ್ಲಿ ಯಾವ ರೀತಿ ಉತ್ಪಾದನೆ ಹೆಚ್ಚು ಮಾಡಬಹುದು ಮತ್ತು ಯಾವ ರೀತಿ ಲಾಭ ಸಂಪಾದನೆ ಮಾಡಬಹುದು, ಉತ್ಪಾದನೆ ಯಾವ ರೀತಿ ಹೆಚ್ಚಾಗುತ್ತದೋ ಅವಕ್ಕೆ ತಕ್ಕಂತೆ ವರಮಾನವನ್ನೂ ಅವರು ಕಾರ್ಮಿಕರಿಗೆ ಅಲ್ಲಿ ಕೊಡುತ್ತಾರೆ. ನಮ್ಮಲ್ಲಿರುವ ಕೈಗಾರಿಕೆಗಳಲ್ಲಿ ಉತ್ಪಾದನೆಯೂ ಜಾಸ್ತಿಯಾಗುತ್ತಿಲ್ಲ ಮತ್ತು ಲಾಭ ಸಂಪಾದನೆಯಂತೂ ಇಲ್ಲವೇ ಇಲ್ಲ. ಇರುವ ಎಲ್ಲ ಕೈಗಾರಿಕೆಗಳೂ ನಷ್ಟದಲ್ಲೇ ಕೆಲಸ ಮಾಡುತ್ತಿವೆ, ಉತ್ಪತ್ತಿ ಹೆಚ್ಚು ಮಾಡಬೇಕೆ ಎಂದು ನಾವು ಪದೇ ಪದೇ ಹೇಳುತ್ತಿದ್ದರೂ ಕಾರ್ಮಿಕರು ಅಷ್ಟು ಉತ್ಸಾಹದಿಂದ ಕೆಲಸ ಮಾಡಿ ಉತ್ಪಾದನೆ ಜಾಸ್ತಿ ಮಾಡಲಾಗಲಿಲ್ಲ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಇಂತಹ ಕಷ್ಟಗಳನ್ನು ಅನುಭವಿಸಿಕೊಂಡು ಬರುತ್ತಿದ್ದೇವೆ. ಇದನ್ನು ಯಾವ ರೀತಿ ಉತ್ತಮಪಡಿಸಲು ಸಾಧ್ಯ ಮತ್ತು ಕಾರ್ಮಿಕರಿಗೆ ಯಾವ ರೀತಿ ಉತ್ತೇಜನ ಕೊಡಲು ಸಾಧ್ಯ, ಇದನ್ನು ಸರಕಾರ ಪರಿಶೀಲಿಸಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ನಾನು ತಿಳಿಸುತ್ತಿದ್ದೇನೆ.

ಇನ್ನು ಸರಕಾರ ನಮಗೆ ಕೊಟ್ಟಿರುವ ರಿಪೋರ್ಟನ್ನು ನೋಡಿದರೆ ಇದರಲ್ಲಿ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಯಾವ ಕೈಗಾರಿಕೆಗಳಲ್ಲಿ ನೋಡಿದರೂ ಒಂದು ಫಂಡನ್ನು ಮಾಡಲಿಲ್ಲ. ಒಂದೇ ಒಂದು ಕೈಗಾರಿಕೆಯಲ್ಲಿ ಎಂದರೆ ಸರಕಾರದ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಮಾತ್ರ ಒಂದು ಕ್ಷೇಮಾಭಿವೃದ್ಧಿ ಫಂಡು ಎಂದು ಮಾಡಿ ಇದಕ್ಕೆ ಸುಮಾರು 3.90 ಲಕ್ಷ ಒದಗಿಸಲಾಗಿದೆ ಎಂದು ಇದರಲ್ಲಿದೆ. ಬೇರೆ ಯಾವ ಕೈಗಾರಿಕೆಗಳೂ ಕೂಡ ಕಾರ್ಮಿಕರಿಗಾಗಿ ಕ್ಷೇಮಾಭಿವೃದ್ಧಿ ಫಂಡು ಎಂದು ಮಾಡಿಲ್ಲ. ಇಲ್ಲಿ ತಮ್ಮ ಬೇಡಿಕೆ 14.36 ಕೋಟಿ ಉತ್ಪಾದನೆ ಮಾಡುವುದಕ್ಕೋಸ್ಕರ, ಇದರಲ್ಲಿ ಸಿರಿಕಲ್ಚರನ್ನೂ ಸೇರಿಸಿದರೆ 16.'6 ಕೋಟಿಯಾಗುತ್ತದೆ. ಇದರಲ್ಲಿ ಕೊರತೆ ಸುಮಾರು 2.74 ಲಕ್ಷದವರೆಗೂ ಬರುತ್ತದೆ. ಇಷ್ಟು ಹಣವನ್ನು ಖರ್ಚು ಮಾಡಿದರೂ ಇದರಲ್ಲಿ ಮಾನ್ಯ ಮಂತ್ರಿಗಳೇ ಇವಕ್ಕೆಲ್ಲಾ ಹೊಣೆಗಾರರು ಎಂದು ಹೇಳಲು ನಾನು ತಯಾರಾಗಿಲ್ಲ. ಇದರಲ್ಲಿ ಹಿಂದಿನಿಂದ ಕೆಲಸ ಮಾಡುತ್ತ ಬರುತ್ತಿರುವ ಅಧಿಕಾರಿಗಳ ಧೋರಣೆಯೇ ಕಾರಣವಾಗಿದೆ. ಇದನ್ನು ನಾನು ಮೊದಲಿಂದಲೂ ಹೇಳುತ್ತಿದ್ದೇನೆ. ಕೈಗಾರಿಕೆಗಳಲ್ಲಿ ಉತ್ಪಾದನೆ ಜಾಸ್ತಿಯಾಗದೆ ನಷ್ಟವಾಗುತ್ತಿರುವುದರಿಂದ ರಾಜ್ಯದ ಬಡ್ಜೆಟ್ಟಿನಲ್ಲೂ ಕೂಡ ಕೊರತೆಯಾಗುವುದು ಕಂಡುಬರುತ್ತಿದೆ. ಇಲ್ಲಿ ಕೊರತೆಯಾಗಲು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವುದೇ ಕಾರಣವಾಗಿದೆ. ಮೂವತ್ತು ಕೋಟಿಯಷ್ಟು ಖರ್ಚು ಮಾಡಿ ಕೈಗಾರಿಕೆಗಳನ್ನು ಮಾಡಲು ಆರಂಭ ಮಾಡಿದರೂ ಇದರಲ್ಲಿ ಕೇವಲ ಒಂದು ಪರ್ಸೆಂಟಿನಷ್ಟು ಲಾಭವು ಬಾರದೆ ಇದ್ದರೆ ಇದರಿಂದ ನಮಗೇನೂ ಅನುಕೂಲವಾದಂತೆ ಕಂಡು ಬರಲಿಲ್ಲ. ಲಾಭದ ದೃಷ್ಟಿಯಿಂದ ಇಂದು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಮಾಡಿದರೆ ಅದರಲ್ಲಿ ಉತ್ಪಾದನೆ ಜಾಸ್ತಿಯಾಗುವಂತೆ ಕೆಲಸ ಮಾಡಿದರೆ ಅದರಿಂದ ಆಗ ಸ್ವಲ್ಪಮಟ್ಟಿಗೆ ಲಾಭ ಬರಬಹುದು, ಇಂತಹ ವ್ಯವಸ್ಥೆ ಮಾಡಲು ಅಲ್ಲಿರುವ ಅಧಿಕಾರಿಗಳು ಹಾಗೂ ಇತರರು ಸಹಾಯ ಮಾಡಬೇಕು, ಅಧಿಕಾರಿಗಳಿಗೇನೋ ಸಂಬಳ ಕೊಡುತ್ತಾರೆ ಮತ್ತು ಕಾರ್ಮಿಕರುಗಳು ಡಿಮ್ಯಾಂಡು ಮಾಡುತ್ತಾರೆಂದು ಹೇಳಬಹುದು. ಆದರೆ ಕೈಗಾರಿಕೆಗಳವರು ಹೆಚ್ಚು ಉತ್ಪಾದನೆ ಬರುವಂತೆ ಕಾರ್ಮಿಕರು ಕೆಲಸ

ಮಾಡಿದರೆ ಉತ್ಪಾದನೆಯೂ ಜಾಸ್ತಿ ಬರುತ್ತದೆ ಅದಕ್ಕೆ ತಕ್ಕಂತೆ ಲಾಭವೂ ಬರುತ್ತದೆ. ಈಗಿರುವ ಕೈಗಾರಿಕೆಗಳಲ್ಲಿ ಲಾಭವೇ ಇಲ್ಲ. ಎಲ್ಲ ನಷ್ಟದಲ್ಲೇ ಕೆಲಸ ಮಾಡುತ್ತಿವೆ, ಇದು ಹೇಗಾಗಿದೆ ಎಂದರೆ ಬಿಳೀ ಆನೆ ಕಟ್ಟಿಕೊಂಡು ಸಾಕಿದಂತೆ ಆಗಿದೆ. ಇಲ್ಲಿ ಎರಡು, ಮೂರು ಹಾಗೂ ಐದು ಸಾವಿರ ರೂಪಾಯಿಗಳಷ್ಟು ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳ ಮೇಲೆ ಕೈಗಾರಿಕೆಗಳ ಹೊಣೆ ವಹಿಸಿ ಎಲ್ಲ ಜವಾಬುದಾರಿಯನ್ನೂ ಅವರಿಗೆ ವಹಿಸಿ ಹೆಚ್ಚು ಉತ್ಪತ್ತಿ ಮಾಡುವಂತೆ ಪ್ರಯತ್ನ ಮಾಡಿದರೆ ಆಗ ನಷ್ಟವಾಗುವ ಬದಲು ಉತ್ಪತ್ತಿಯೂ ಜಾಸ್ತಿಯಾಗುತ್ತದೆ ಲಾಭವೂ ಬರಲು ಅವಕಾಶವಾಗುತ್ತದೆ. ಯಾವ ಅಧಿಕಾರಿಗಳು ಇದರ ಜವಾಬುದಾರಿಯನ್ನು ಹೊರಲು ಆಸಕ್ತಿ ವಹಿಸುವುದಿಲ್ಲವೋ ಅಂತಹವರ ಮೇಲೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರಕಾರ ಇದರ ಬಗ್ಗೆ ಸ್ವಲ್ಪಮಟ್ಟಿಗಾದರೂ ಇಂತಹ ಆಸಕ್ತಿ ವಹಿಸದೇ ಇದ್ದರೆ ಇಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸಾಧ್ಯವಿಲ್ಲ.

ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಹಾಗೂ ಶಿವಮೊಗ್ಗದಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಇರುವ ಒಟ್ಟು ಕಾರ್ಮಿಕರ ಸಂಖ್ಯೆ ಕೇವಲ 450 ಜನ. ಇಲ್ಲಿರುವ ಮೆಷಿನರಿಗೂ ಬಹಳ ಕಡಿಮೆ. ನಮಗೆ ಬಂದಿರುವ ವರದಿ ಪ್ರಕಾರ ಇಲ್ಲಿರುವ ಮೆಷನರಿಗಳ ರಿಪೇರಿಗಾಗಿ ಖರ್ಚು ಒಂದು ವರ್ಷಕ್ಕೆ ಸುಮಾರು ಮೂರು ಲಕ್ಷದವರೆಗೆ ಬರುತ್ತದೆ ಎಂದು ಕೇಳುತ್ತೇವೆ. ಇದು ಯಾವ ನ್ಯಾಯ ಎಂದು ಕೇಳಬೇಕಾಗಿದೆ. ಹೊಸದಾಗಿ ಮೆಷಿನರಿಗಳನ್ನು ಇದೇ ಬೆಲೆಯಲ್ಲಿ ಕೊಂಡುಕೊಳ್ಳಲು ಆಗುತ್ತಿರಲಿಲ್ಲವೇ ? 450 ಜನ ಮಾತ್ರ ಇರುವ ಕಾರ್ಮಿಕರಿಗಾಗಿ ಇಲ್ಲಿನ ಮೆಷಿನರಿಗಳನ್ನು ರೀಪ್ಲೇಸು ಮಾಡಿಕೊಳ್ಳಲು ದುಡ್ಡನ್ನು ಒದಗಿಸಿಕೊಟ್ಟಿಲ್ಲವೇ ? ಆದರೆ ಇವೆರಡು ಕೈಗಾರಿಕೆಗಳ ಪೂರ್ಣ ಚಿತ್ರವನ್ನು ಇದರಲ್ಲಿ ಸರಕಾರ ನಮಗೆ ಒದಗಿಸಿಕೊಟ್ಟಿಲ್ಲ. ಇದು ಕೊಟ್ಟಿದ್ದರೆ ನಮಗೆ ಆಗ ಇದರ ವಿವರಗಳನ್ನು ತಿಳಿಯಬಹುದಾಗಿತ್ತು. ಇನ್ನು ಮುಂದಾದರೂ ಸರಕಾರ ಎಲ್ಲ ಕೈಗಾರಿಕೆಗಳ ಪೂರ್ತಿ ಅಂಕೆ ಅಂಶಗಳನ್ನು ನಮಗೆಲ್ಲ ಒದಗಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಸುಮಾರು ಹತ್ತುಸಾವಿರ ಕೆಲಸ ಮಾಡತಕ್ಕ ಬೆಂಗಳೂರಿನಲ್ಲಿರುವ ಬಿನ್ನಿ ಮಿಲ್‌ನಲ್ಲಾಗಲೀ ಇಲ್ಲವೇ ಮೈಸೂರು ಮಿಲ್ಲಿನಲ್ಲಾಗಲೀ ಇಷ್ಟು ಲಕ್ಷ ರೂಪಾಯಿಗಳು ರಿಪೇರಿಗಾಗಿ ಖರ್ಚಾಗುತ್ತಿಲ್ಲ. ಬಹುಶಃ ಇಲ್ಲಿರತಕ್ಕ ಮೆಷಿನರಿಗಾಗಿ ಸುಮಾರು ಐದಾರು ಸಾವಿರ ಖರ್ಚಾಗಿರಬಹುದು. ಹಾಗಿರುವಾಗ ಇಲ್ಲಿರುವ ಹಳೆ ಮಿಷಿನರಿಗಳ ರಿಪೇರಿಗಾಗಿ ಐದಾರು ಲಕ್ಷದಷ್ಟು ದುಡ್ಡು ಖರ್ಚು ಮಾಡುವುದು ಸರಿಯೇ, ಇದರಲ್ಲಿ ಕೆಲಸ ಮಾಡುವ ಜನ ಕೇವಲ 450 ಜನ ಮಾತ್ರ, ಇದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು, ಇನ್ನು ನಾನಾಗಲೇ ಹೇಳಿದಂತೆ ವರ್ಷಕ್ಕೆ ಸುಮಾರು 11 ಲಕ್ಷ ಜನಸಂಖ್ಯೆ ದೇಶದಲ್ಲಿ ಹೆಚ್ಚಾಗುತ್ತಿರುವಾಗ ಎಷ್ಟು ಕೈಗಾರಿಕೆಗಳನ್ನು ಇವರಿಗಾಗಿ ಆರಂಭಮಾಡಿ ಕೆಲಸಗಳನ್ನು ಒದಗಿಸುತ್ತೀರಿ, ಇದರಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ನಮಗೆ ಇಲ್ಲಿರಬೇಕು. ನಮ್ಮ ರಾಜ್ಯವನ್ನು ಒಳ್ಳೆ ಮಾದರಿಯ ಕೈಗಾರಿಕೆ ರಾಜ್ಯ ಮಾಡಬೇಕೆಂದು ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರು ಒಂದು ರೀತಿಯಾದ ಯೋಜನೆ ಹಾಕಿದ್ದರು. ಅವರು ಯಾವ ರಾಜಕೀಯ ದೃಷ್ಟಿಯನ್ನೂ ಇಟ್ಟುಕೊಂಡು ಇದನ್ನು ಆರಂಭ ಮಾಡಲಿಲ್ಲ ನಮ್ಮ ರಾಜ್ಯಕ್ಕೂ ಒಳ್ಳೆಯದಾಗಬೇಕು ಎನ್ನುವ ಒಂದು ಉತ್ತಮವಾದ ದೃಷ್ಟಿಯಿಂದ ಅವರು ಮಾಡಿದಂತಹ ಕೈಗಾರಿಕೆಗಳೇ ಇಂದು ಇನ್ನೂ ಚೆನ್ನಾಗಿ ಮುಂದುವರಿಯುತ್ತಿವೆ. ಇಂತಹ ಸರ್ ಎಂ. ವಿ. ರವರ ಫೋಟೋ ಕೂಡ ಇಲ್ಲಿಲ್ಲ. ಇಂತಹ ಒಂದು ಒಳ್ಳೆ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳೆಯಲು ಶ್ರೀ ವಿಶ್ವೇಶ್ವರಯ್ಯನವರು ಬಹಳ ಕಷ್ಟಪಟ್ಟು ಅಗ ಪ್ರಾರಂಭ ಮಾಡಿದರು. ಈಗ ಇಂತಹ ಕೈಗಾರಿಕೆಗಳನ್ನು ಪೂರ್ತಿ ಮಾಡುವ ಅವಕಾಶ ನಮಗೆ ಸಿಕ್ಕಿದೆ. ಇವರಲ್ಲಿ ಅನೇಕ ವಿದ್ಯುಚ್ಛಕ್ತಿ ಯೋಜನೆಗಳಿವೆ, ನೀರಾವರಿ ಯೋಜನೆಗಳೂ ಇರಬಹುದು, ಖಾಸಗೀ ಮಾಲೀಕರಿಂದಲೂ ಕೈಗಾರಿಕೆಗಳು ಆಗಿರಬಹುದು. ಆದರೆ ವರ್ಷ ಒಂದಕ್ಕೆ ಸುಮಾರು 11 ಲಕ್ಷ ಜನಸಂಖ್ಯೆ ಏರುತ್ತಿರುವುದರಿಂದ ಇಷ್ಟು ಜನರಿಗೂ ಯಾವ ರೀತಿ ಉದ್ಯೋಗಗಳನ್ನು ದೊರಕಿಸಿಕೊಡುತ್ತೀರಿ, ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಇದರಲ್ಲ 2.74 ಲಕ್ಷ ಡಿಪ್ರಿಸಿಯೇಷನ್‌ಗಾಗಿ ಎಂದು ಹೇಳಿದ್ದಾರೆ. 14.36 ಕೋಟಿ ವಿದ್ಯುಚ್ಛಕ್ತಿಗೋಸ್ಕರ ಇನ್ನೊಂದು ಕಡೆ 14.74 ಕೋಟಿ ಖರ್ಚು ಮಾಡುವುದಕ್ಕಾಗಿ ಎಂದು ಇದರಲ್ಲಿ ಹೇಳಿದ್ದಾರೆ. ಇದರಲ್ಲಿ ಸರಕಾರದ ಯಾವ ನೀತಿ ಇದೆ ಎನ್ನುವುದು ಕಂಡು ಬರುತ್ತಿಲ್ಲ. ಯಾವಾಗಲೂ ಕೈಗಾರಿಕೆಗಳನ್ನು ಮಾಡುವಾಗ ಹೆಚ್ಚು ಉತ್ಪಾದನೆ ಮಾಡಿ ಜಾಸ್ತಿ ಲಾಭ ಬರುವಂತೆ ಇಲ್ಲಿನ ಅಧಿಕಾರಿಗಳು ಪ್ರಯತ್ನ ಮಾಡಿ ಕೆಲಸ ಮಾಡಿದರೆ ಅದರಿಂದ ದೇಶಕ್ಕೂ ಅನುಕೂಲವಾಗುತ್ತದೆ. ಇಲ್ಲವೇ ಈಗ ಕೈಗಾರಿಕೆಗಳು ನಡೆಯುತ್ತಿರುವಂತೆ ನಷ್ಟವಾಗುತ್ತಿದ್ದರೆ ಅಂತಹ ಕೈಗಾರಿಕೆಗಳನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಇದರ ಬಗ್ಗೆ ಸರಕಾರ ಪರಿಶೀಲನೆ ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಕೃಷ್ಣನ್ ಅವರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ಈ ರಾಜ್ಯದ ಕೈಗಾರಿಕೆಗಳಲ್ಲಿ ಯಾವ ರೀತಿ ನಷ್ಟವಾಗುತ್ತಿದೆ ಮತ್ತು ಕಾರ್ಮಿಕ ವರ್ಗಕ್ಕೆ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ನನ್ನ ಭಾಷಣದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಬಗ್ಗೆ ಹೆಚ್ಚು ಸೀಮಿತಗೊಳಿಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಕಾರ್ಖಾನೆಯಲ್ಲಿ ನಮ್ಮ ಸರ್ಕಾರದ ಪಾಲು ಶೇಕಡ 60ರಷ್ಟು ಮತ್ತು ಕೇಂದ್ರಸರ್ಕಾರದ ಪಾಲು ಶೇಕಡ 40ರಷ್ಟು ಇದೆ. ಈ ಕಾರ್ಖಾನೆಯಲ್ಲಿ ಸತತವಾಗಿ ನಷ್ಟವಾಗುವುದಕ್ಕೆ ಕಾರಣವೇನು ಎಂಬ ಬಗ್ಗೆ ಹಲವಾರು ಬಾರಿ ತನಿಖೆಗಳಾಗಿವೆ. ಈ ಬಗ್ಗೆ ನೇಮಕವಾಗಿದ್ದ ದತ್ ಕಮಿಟಿಯ ವರದಿಯನ್ನು ನಮಗೆ ಒದಗಿಸಬೇಕು. ಈ ರಾಜ್ಯದಲ್ಲಿ ಶ್ರೀಮಾನ್ ಧರ್ಮವೀರರ ಆಡಳಿತ ಇದ್ದಾಗ ಶಿರಾಳಿ ಎಂಬ ಫೈನಾನ್ಸಿಯಲ್ ಅಡ್ವೈಸರನು ನೇಮಕ ಮಾಡಲಾಗಿತ್ತು, ಅವರು ಸಹ ನಷ್ಟವಾಗುತ್ತಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ರಿಪೋರ್ಟ್ ಕೊಟ್ಟಿದ್ದರೂ ಸಹ ಅದನ್ನು ಈ ಸಭೆಯ ಮುಂದೆ ಇಟ್ಟಿಲ್ಲ. ನನಗೆ ಗೊತ್ತಿರುವಂತೆ ಹೈದರಾಬಾದಿನಲ್ಲಿರುವ ಅಡ್ಮಿನಿಸ್ಟ್ರೇಟಿವ್ ಸ್ಟಾಫ್ ಕಾಲೇಜ್‌ನ ಮುಖ್ಯಸ್ಥರೊಬ್ಬರು ಬಂದು ತನಿಖೆ ನಡೆಸಿದರು. ಅದಕ್ಕಾಗಿ ಎರಡು ಲಕ್ಷ ರೂಪಾಯಿಗಳು ಖರ್ಚಾಗಿದೆ. ಅವರು ಕೊಟ್ಟ ರಿಪೋರ್ಟ್ ಎಲ್ಲಿ ಹೋಯಿತು ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಅದನ್ನು ಈ ಸದನದ ಮುಂದೆ ಇಡದೆ ಮರೆಮಾಚುತ್ತಿರುವುದು ಏತಕ್ಕಾಗಿ ಎಂದು ನಾನು ಕೇಳುತ್ತಿದ್ದೇನೆ. ಆರ್. ಕೆ. ಸುಬ್ರಹ್ಮಣ್ಯಂ ಎಂಬುವರು ಕಂಟ್ರೋಲರ್ ಆಫ್ ಅಕೌಂಟ್ಸ್ ಆಗಿದ್ದರು. ಲಾಸ್ ಆಗುತ್ತಿರುವುದಕ್ಕೆ ಕಾರಣ ಕಂಡುಹಿಡಿಯಲು ಇವರನ್ನು ಸಹ ನೇಮಕ ಮಾಡಲಾಗಿತ್ತು. ಇವರು ಕಾನ್ಫಿಡೆನ್ಸಿಯಲ್ ರಿಪೋರ್ಟ್ ತಯಾರು ಮಾಡುತ್ತಿದ್ದರು. ಲಾಸ್ ಆಗುತ್ತಿರುವುದಕ್ಕೆ ಯಾರು ಯಾರು ಕಾರಣ ಕರ್ತರು ಎಂಬುದನ್ನು ಕಂಡುಹಿಡಿದು ಒಂದು ದೊಡ್ಡ ರಿಪೋರ್ಟನ್ನು ತಯಾರು ಮಾಡುತ್ತಿರುವಾಗಲೇ ಸರ್ಕಾರದ ವತಿಯಿಂದ ಸಿಕ್ಕಾಪಟ್ಟೆ ಇಂಟರ್‌ಫಿಯರೆನ್ಸ್ ಬಂದಾಗ ಅವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಈಗ ಅವರು ಮದ್ರಾಸ್‌ನಲ್ಲಿರಬಹುದೆಂದು ಕಾಣುತ್ತದೆ. ಶಿರಾಳಿ ರಿಪೋರ್ಟ್‌ನಲ್ಲಿ ಅಲ್ಲಿ ಏನೇನು ಅನ್ಯಾಯಗಳು ನಡೆದಿವೆ ಎಂಬ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾನು ನನಗೆ ಗೊತ್ತಿರುವುದನ್ನು ಮಾತ್ರ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

ಇಂದು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾಂಪೌಂಡ್‌ನಲ್ಲಿ 3 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಫೆರೋಸಿಲಿಕಾನ್ ಖರ್ಚಾಗದೆ ಹಾಗೆಯೇ ಬಿದ್ದಿದೆ. ಈಗ ಖರ್ಚಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ಆದರೆ ಇದರ ಬಗ್ಗೆ ಕೇಂದ್ರಸರ್ಕಾರದ ಪಾಲಿಸಿ ಆದರೂ ಏನು ಎಂದು ಕೇಳುತ್ತೇನೆ. ಇಲ್ಲಿ ಖರ್ಚಾಗದೆ ಬಿದ್ದಿದ್ದರೂ ಸಹ ಕೇಂದ್ರ ಸರ್ಕಾರದವರು ಬೇರೆ ದೇಶಗಳಿಂದ ಇದನ್ನು ತರಿಸಿಕೊಳ್ಳುವುದಕ್ಕೆ ದೊಡ್ಡ ದೊಡ್ಡ ಮಾರ್ವಾಡಿಗಳಿಗೆ ಲೈಸನ್ಸ್ ಕೊಟ್ಟಿದ್ದಾರೆ. ನಮ್ಮಲ್ಲಿ ಸ್ಟಾಕ್ ಇದ್ದರೂ ಸಹ ಇಂಪೋರ್ಟ್ ಮಾಡಿಕೊಂಡಿದ್ದು ಏತಕ್ಕಾಗಿ ಎಂದು ಕೇಳುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಪಾಲಿಸಿಯಾದರೂ ಏನಿದೆ ಎಂದು ಕೇಳುತ್ತಿದ್ದೇನೆ.

[MR. DEPUTY SPEAKER in the Chair]

ತಾವು ಅಧಿಕಾರಕ್ಕೆ ಬರುವ ಮೊದಲು ಇದು ನಡೆದಿರುವುದು ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು. ಆದರೆ ತಾವು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಹೊರದೇಶಗಳಿಂದ ಫೆರೋಸಿಲಿಕಾನನ್ನು ತರಿಸಿಕೊಳ್ಳುವುದಕ್ಕೆ ಕೇಂದ್ರದವರು ಲೈಸನ್ಸನ್ನು ಕೊಟ್ಟಿದ್ದರ ಪರಿಣಾಮ ಏನಾಯಿತು ಎಂದರೆ, ಈಗ ಈ ಕಾರ್ಖಾನೆಯಲ್ಲಿ ಫೆರೋಸಿಲಿಕಾನನ್ನು ಪ್ರೊಡ್ಯೂಸ್ ಮಾಡುವುದನ್ನು ನಿಲ್ಲಿಸಿ, ಅದರ ವಿಭಾಗವನ್ನು ಪೂರ್ತಿಯಾಗಿ ಮುಚ್ಚಿದ್ದಾರೆ. Furnaces have been completely shut down for want of space for Fer osyllycon which is lying in the factory area and is worth about three crores. ನಮ್ಮಲ್ಲಿ ಇಷ್ಟೊಂದು ಸ್ಟಾಕ್ ಇದ್ದರೂ ಸಹ ಹೊರದೇಶಗಳಿಂದ ತರಿಸಿಕೊಂಡಿದ್ದು ಏತಕ್ಕಾಗಿ ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅಷ್ಟೇ ಅಲ್ಲದೆ ಇದನ್ನು ಮಾರಾಟ ಮಾಡಲು ಕೆಲವು ಏಜೆನ್ಸಿಗಳನ್ನು ತೆಗೆದುಕೊಂಡರು. ಈ ಏಜೆನ್ಸಿ

ಗಳಿಂದ ಒಂದು ಕೋಟಿ ರೂಪಾಯಿಗಳವರೆಗೆ ಬಾಕಿ ಬರುವುದು ಇದೆ. ಕರ್ನಾಟಕ ಎಕ್ಸ್‌ಪೋರ್ಟರ್ಸ್ ನವರು ಈ ಕಾರ್ಖಾನೆಯಿಂದ ಕಡಿಮೆ ರೇಟಿಗೆ ಪಡೆದುಕೊಂಡು ಜಾಸ್ತಿ ರೇಟಿಗೆ ಬೇರೆ ಕಡೆಗೆ ಮಾರಿದ್ದಾರೆ. ಬ್ಲಾಕ್ ಮಾರ್ಕೆಟ್‌ನಲ್ಲಿ 5 ಸಾವಿರದಿಂದ 7 ಸಾವಿರದವರೆಗೆ ಮಾರುತ್ತಿದ್ದಾರೆ. ಕಾರ್ಖಾನೆಯು ಬೆಲೆ ಟನ್‌ಗೆ 3 ಸಾವಿರ ಇದ್ದರೆ ಇವರು ಜಾಸ್ತಿ ರೇಟಿಗೆ ವ್ಯಾಪಾರ ಮಾಡಿದ್ದಾರೆ. ಈ ರೀತಿ ಅನ್ಯಾಯ ನಡೆಯುವುದಕ್ಕೆ ಕಾರಣವೇನು ? ಮಾನ್ಯ ಕೃಷ್ಣ ಅವರು ಮೊನ್ನೆ ಒಂದು ಪತ್ರಿಕಾ ಹೇಳಿಕೆ ಕೊಡುತ್ತಾ ಈ ಕಾರ್ಖಾನೆಯಲ್ಲಿ ಕಳೆದವರ್ಷ 30 ಕೋಟಿ ರೂಪಾಯಿಗಳಷ್ಟು ಸೇಲ್ಸ್ ಆಗಿದ್ದರೆ ಈ ವರ್ಷ 33 ಕೋಟಿ ರೂಪಾಯಿಗಳಷ್ಟು ಆಗಿದೆ ಎಂದು ಹೇಳಿದ್ದಾರೆ. ಆದರೆ ಕರ್ನಾಟಕ ಎಕ್ಸ್‌ಪೋರ್ಟರ್ಸ್ ಅವರು ಏನು ಈ ಕಾರ್ಖಾನೆಯಿಂದ ಫೆರೋಸಿಲಿಕಾನ್ ಮಾಡಲು ಏಜೆನ್ಸಿ ಪಡೆದಿದ್ದರು, ಅದರ ಬಾಬತ್ತು ಇನ್ನೂ ಹಣ ಬಾಕಿ ಬರುವುದನ್ನು ವಸೂಲಿ ಮಾಡದಿರುವುದಕ್ಕೆ ಕಾರಣವಾದರೂ ಏನು ? ಕರ್ನಾಟಕ ಎಕ್ಸ್‌ಪೋರ್ಟರ್ಸ್‌ನ ಪಾರ್ಟನರ್ ಶ್ರೀ ತುಳಸನ್ ಎಂಬುದರಿಂದ 22 ಲಕ್ಷ ರೂಪಾಯಿಗಳಷ್ಟು ಬಾಕಿ ಬರಬೇಕಾಗಿದೆ. ಈತ ಮುಂಬೈ ಮನುಷ್ಯ. ಈ ಕಾರ್ಖಾನೆ ಹೆಚ್ಚಾಗಿ ಹಾಳಾಗುವುದಕ್ಕೆ ಕಾರಣವಾಗಿದ್ದು ಶ್ರೀಮಾನ್ ಎಚ್. ವಿ. ರೆಡ್ಡಿ ಮತ್ತು ಶ್ರೀ ಶಿವನಂಜಪ್ಪನವರು ಈ ಕಾರ್ಖಾನೆಯ ಚೇರ್‌ಮನ್‌ಗಳಾಗಿದ್ದಾಗ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ತುಳಸನ್ ಎಂಬ ಮನುಷ್ಯ ಏನಿದ್ದಾನೆ, he is a pauper, no property in his name, no money in his name.

How are you going to realise money from these persons ? ಕರ್ನಾಟಕ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ಬೆಂಗಳೂರು ಇವರಿಂದ 15,72,442-62 ರೂಪಾಯಿಗಳು ಬಾಕಿ ಬರಬೇಕಾಗಿದೆ. ಈ ರೀತಿ ಒಟ್ಟು 27 ಲಕ್ಷ ರೂಪಾಯಿ ಬಾಕಿ ಬರಬೇಕಾಗಿದೆ. ಇವನ್ನು ಹೇಗೆ ವಸೂಲು ಮಾಡುತ್ತೀರಿ ಎಂದು ನಾನು ಕೇಳುತ್ತೇನೆ. ಗುಪ್ತೆ ಅವರಿಂದ 13 ಲಕ್ಷ ರೂಪಾಯಿ ಬಾಕಿ ಬರಬೇಕಾಗಿದೆ. ಸಾಲದ ಮೇಲೆ ಅವರಿಗೆ ಫೆರೋ ಸಿಲಿಕಾನ್ ಸಪ್ಲೈ ಮಾಡುತ್ತಿದ್ದರು. ಇದರ ಜೊತೆಗೆ ಇನ್ನೂ ಎಷ್ಟೆಷ್ಟೋ ಬಾಕಿ ಬರಬೇಕಾಗಿದೆ. ಈ ಬಾಕಿಗಳ ಬಗ್ಗೆ ಕಲ್ಕತ್ತಾ, ಪಶ್ಚಿಮ ಬಂಗಾಳ ಮತ್ತು ಬಿಹಾರ ಕೋರ್ಟಿನಲ್ಲಿ ಕೇಸುಗಳನ್ನು ಹಾಕಿದ್ದಾರೆ. ಬೆಂಗಳೂರಿನಿಂದ ಆ ಸ್ಥಳಗಳಿಗೆ ಹೋಗಿ ಕೇಸು ನಡೆಸುವುದಕ್ಕೆ ಹಣವನ್ನು ವಿಮಾನದಲ್ಲಿ ಪ್ರಯಾಣ ಮಾಡುವುದಕ್ಕೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದಾರೆ. It is to the tune of 7 crores of rupees.

Sri S. M. KRISHNA.—Who had spent seven crores ? would you please repeat it again ? We ha~e spent seven crores with reference to what ?

3–30 P.M.

Sri S. BANGARAPPA.—I have got a list here. ಅದನ್ನು ನಾನು ತಮಗೆ ಓದಿ ಹೇಳುತ್ತೇನೆ. ಅದರ ವಿವರ ಈ ರೀತಿ ಇದೆ. ಅದರಲ್ಲಿ ಕೆಲವನ್ನು ಮಾತ್ರ ನಾನು ಹೇಳುತ್ತೇನೆ. ಕೇಸ್ ನಂ. 14 ಮೆಸರ್ಸ್ ಶ್ಯಾಮ ಪಿಸ್ಟನ್ಸ್ ಅಂಡ್ ರಿಂಗ್ಸ್ ನ್ಯೂಡಿಲ್ಲಿ 55,523-62 ರೂಪಾಯಿ, ಮೆಸರ್ಸ್ ಭಾರತ್ ಸ್ಟೀಲ್ ರೀರೋಲಿಂಗ್ ಮಿಲ್ಸ್, ಬೆಂಗಳೂರು 4,49,264-01 ರೂಪಾಯಿ ಇದನ್ನು ಶಿವಮೊಗ್ಗ ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಮೆಸರ್ಸ್ ಕರ್ನಾಟಕ ಎಕ್ಸ್‌ಪೋರ್ಟ್ ಲಿಮಿಟೆಡ್, ಬೆಂಗಳೂರು 15,72,442–67 ರೂಪಾಯಿ, ಇದನ್ನು ಶಿವಮೊಗ್ಗ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಮೆಸರ್ಸ್ ರಾಮಕೃಷ್ಣನ್ ಕಾಳವಂತ್ರಾಯ್ ಮದ್ರಾಸ್. 7,08,859–00 ರೂಪಾಯಿ ಇದನ್ನು ಮದ್ರಾಸ್ ಹೈಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಮೆಸರ್ಸ್ ಸ್ಟೀಲ್ ಎಂಟರ್‌ಪ್ರೈಜಸ್ ಲಿಮಿಟೆಡ್, ಮದ್ರಾಸ್ ರೂ 5,63,009–00 ಇದನ್ನು ಸಿವಿಲ್ ಜಡ್ಜ್ ಕೋರ್ಟ್ ಶಿವಮೊಗ್ಗದಲ್ಲಿ ಕೇಸು ಹಾಕಿದ್ದಾರೆ. ಮೆಸರ್ಸ್ ಭಾರತ್ ಸ್ಟೀಲ್ ರೀರೋಲಿಂಗ್ ಮಿಲ್ಸ್ ಬೆಂಗಳೂರು. 9,55,166-20 ರೂಪಾಯಿ. ಇದನ್ನು ಬೆಂಗಳೂರು ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಮೆಸರ್ಸ್ ಶಾಂತಿ ಸ್ಕ್ರ್ಯಾಪ್ ಎಜೆನ್ಸೀಸ್ ಸಿಕಂದರಾಬಾದ್ 2,44,094-26, ಇದನ್ನು ಶಿವಮೊಗ್ಗ ಭದ್ರಾವತಿ ಕೋರ್ಟುಗಳಲ್ಲಿ ಕೇಸು ಹಾಕಿದ್ದಾರೆ. ತಮಿಳುನಾಡು ಸ್ಕ್ರ್ಯಾಪ್ ಏಜೆನ್ಸೀಸ್ ಮದ್ರಾಸ್. 10,16,769 ರೂಪಾಯಿ ಇದನ್ನು ಸಿವಿಲ್ ಜಡ್ಜ್‌ಕೋರ್ಟ್ ಶಿವಮೊಗ್ಗದಲ್ಲಿ ಕೇಸು ಹಾಕಿದ್ದಾರೆ. ಇನ್ನೂ ಬೇರೆ ಬೇರೆ ಕೋರ್ಟಿನಲ್ಲಿ ಕೆಲವು ಕೇಸುಗಳನ್ನು ಹಾಕಿದ್ದಾರೆ. ಅದರ ಲಿಸ್ಟ್ ನನ್ನ ಹತ್ತಿರ ಇದೆ. ನಮ್ಮ ಜೂರಿಸ್‌ಡಿಕ್ಷನ್‌ನಲ್ಲಿ ಇಲ್ಲದ ಬೇರೆ ಬೇರೆ ಸ್ಟೇಟಿನ ಕೋರ್ಟುಗಳಲ್ಲಿ ಕೇಸುಗಳನ್ನು ಹಾಕಿದ್ದಾರೆ. ಸೇಟ್ ನಾನಕ್ ಚಂದ್ ಷದಿರಾಮ, ಮದ್ರಾಸ್

(SRI S. BANGARAPPA)

3,03,066-51 ರೂಪಾಯಿ ಇದನ್ನು ಮದ್ರಾಸ್ ಹೈಕೋರ್ಟಿನಲ್ಲಿ ಕೇಸು ಹಾಕಿದ್ದಾರೆ ಇನ್ನೂ ಅನೇಕರಿಗೆ ಸಾಲದ ಮೇಲೆ ಫೆರೋಸಿಲಿಕಾನ್ ಅನ್ನು ಸಾಲದ ಮೇಲೆ ಸಪ್ಲೈ ಮಾಡಿ ಅದನ್ನು ವಸೂಲು ಮಾಡುವುದಕ್ಕೆ ಕೋರ್ಟುಗಳಲ್ಲಿ ಕೇಸು ಹಾಕಿ ಆ ಕೇಸುಗಳನ್ನು ನಡೆಸುವುದಕ್ಕೆ ವಿಮಾನದಲ್ಲಿ ಮತ್ತು ರೈಲುಗಳ ಮುಖಾಂತರ ಆಯಾ ಸ್ಥಳಗಳಿಗೆ ಹೋಗಿ ಬರುವುದಕ್ಕೋಸ್ಕರ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಾನು ಈಗಾಗಲೇ ತುಳಸನ್ ವಿಷಯ ಹೇಳಿದ್ದೇನೆ. ಅವರಿಂದ 22½ ಲಕ್ಷ ರೂಪಾಯಿಗಳು ಬರಬೇಕಾಗಿದೆ. ತುಳಸನ್ ಮತ್ತು ಕರ್ನಾಟಕ ಎಕ್ಸ್‌ಪೋರ್ಟ್ ಇವರುಗಳು ದಿವಾಳಿಯಾಗಿದ್ದಾರೆ. ಇವರಿಂದ ಹೇಗೆ ಬರಬೇಕಾದ ಬಾಕಿಯನ್ನು ವಸೂಲು ಮಾಡುತ್ತೀರಾ ? ಈಗ ಗಲ್ಫ್ ಭಾರತ್ ಸ್ಟೀಲ್ ರೀರೋಲಿಂಗ್ ಮಿಲ್ಸ್ ಇವರಿಂದ 13 ಲಕ್ಷ ರೂಪಾಯಿಗಳ ಬಾಕಿ ಬರಬೇಕಾಗಿದೆ. ಅವರಿಗೆ ಸ್ಟೀಲ್ ಸಪ್ಲೈ ಮಾಡಿ 5 ವರ್ಷವಾಗಿದೆ. ಈ ಬಗ್ಗೆ ಕಾಂಪ್ರಮೈಜ್ ನಡೆಯುತ್ತಿದೆ. ಅವರಿಗೆ ಏತಕ್ಕೋಸ್ಕರ ಯಾವ ಕಂಡೀಷನ್ ಮೇಲೆ ಸಪ್ಲೈ ಮಾಡಿದ್ದೀರಿ, ಅದನ್ನು ಹೇಗೆ ವಸೂಲು ಮಾಡುತ್ತೀರಿ ? ಅವರ ಜೊತೆಯಲ್ಲಿ ಕಾಂಪ್ರಮೈಜ್ ಮಾಡಿಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ? ಕಾನ್‌ಪುರ ಕೋರ್ಟಿನಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ಹಾಗೆ ಒಂದು ಕೇಸು ಹಾಕಿದ್ದಾರೆ. ಇದು ಲೋನ್ ಬೇಸಿಸ್ ಮೇಲೆ ಸ್ಟೀಲ್ ಸಪ್ಲೈ ಮಾಡಿದ್ದು. ಈ ಕೇಸನ್ನು ನಮ್ಮ ಸ್ಟೇಟಿನಲ್ಲಿ ಹಾಕಿಲ್ಲ. ಕಾನ್‌ಪುರಕ್ಕೆ ಹೋಗಿ ಅಲ್ಲಿನ ಕೋರ್ಟಿನಲ್ಲಿ ದಾವಾ ಹಾಕಿದ್ದಾರೆ. ಅದು ನಮ್ಮ ಸ್ಟೇಟಿನ ಹೊರಗಡೆ ಆಯಿತು. ಆ ಬಗ್ಗೆ ಬೆಂಗಳೂರು ಕೋರ್ಟಿನಲ್ಲಿ ಏತಕ್ಕೆ ಕೇಸು ಹಾಕಲಿಲ್ಲ ?

ಇನ್ನೊಂದು ವಿಷಯ, ಮಲ್ಲಿಕಾರ್ಜುನಯ್ಯ ಎನ್ನುವವರು ಸಿವಿಲ್ ಇಂಜಿನಿಯರ್ ಇದ್ದರು; ಅವರು ಈಗ ರಿಟೈರ್‌ಮೆಂಟ್ ತೆಗೆದುಕೊಂಡಿದ್ದಾರೆ. ಅವರು ಡಿವಿಜನಲ್ ಮ್ಯಾನೇಜರ್ ಚನ್ನಬಸಪ್ಪನವರ ಸಂಬಂಧೀಕರು. It is a fine matter according to me. He took voluntary retirement. he was working in the factory. Having something else in view he took voluntary retirement 2 lakhs of rupees hard cash has been given to him as advance to have trade in the factory. ಅವರು ಶ್ರೀಮಾನ್ ಎಸ್. ನಿಜಲಿಂಗಪ್ಪನವರ ದೂರದ ಸಂಬಂಧೀಕರು.

Mr. DEPUTY SPEAKER.—If the hon. member has got any grievances against individuals would it not be worthwhile to make out a strong case against them and represent it to the Government, for taking stringent measures? If he goes on mentioning a series of names of those persons who are not here to defend themselves too much of it cannot be allowed.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ 2 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಫ್ಯಾಕ್ಟರಿಯವರು ಕೊಟ್ಟಿದ್ದಾರೆ. ಏತಕ್ಕೆಂದರೆ ಅವರು ಬ್ರಿಕ್ಸ್ ತಯಾರು ಮಾಡುವುದಕ್ಕಾಗಿ. ಕಬ್ಬಿಣವನ್ನು ಕಾಯಿಸಿದಾಗ ನೊರೆ ಏನು ಬರುತ್ತದೆ ಆ ನೊರೆಯಿಂದ ಅವರು ಸಿಮೆಂಟ್ ಬ್ರಿಕ್ಸ್ ತಯಾರು ಮಾಡುತ್ತಾರೆ. ಅವರು ಆ ನೊರೆಯನ್ನು ಉಪಯೋಗಿಸಿಕೊಂಡು ಸಿಮೆಂಟ್ ಬ್ರಿಕ್ಸ್ ಮಾಡುವುದಕ್ಕೆ ಕಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಅವರು ಒಂದು ತರಹ ನಾಮಿನಲ್ ರೇಟಿಗೆ ಎಂದರೆ ಒಂದು ಟನ್ ಕಬ್ಬಿಣದ ನೊರೆಗೆ (Slag) ಒಂದು ರೂಪಾಯಿನಂತೆ ಕೊಂಡು ಅವರು ಅದನ್ನು ಹೊರಗಡೆ ಒಂದು ಟನ್ನಿಗೆ 15 ರೂಪಾಯಿಗಳಂತೆ ಮಾರಿದ್ದಾರೆ. ಆದರೂ ಅವರಿಗೆ ಕೊಡುವ ಕಬ್ಬಿಣದ ನೊರೆಯನ್ನು ಫ್ಯಾಕ್ಟರಿಯವರು ನಿಲ್ಲಿಸುವ ಹಾಗಿಲ್ಲ. ಇದರಿಂದ ಭದ್ರಾವತಿ ಕಾರ್ಖಾನೆಗೆ ನಷ್ಟವಾಗಿದೆ, ಆದರೂ ಸಹ ಅದನ್ನು ನಿಲ್ಲಿಸುವ ಹಾಗಿಲ್ಲ. Till this date, this business is going on ; that agreement is in operation. He is making money. He has sold at the rate of 26 rupees per ton. He has purchased for a nominal rate of one rupee per ton. ಅವರು ಪಿ. ಡಬ್ಲ್ಯು. ಡಿ. ಕಂಟ್ರಾಕ್ಟರು, ಹೌಸಿಂಗ್ ಬೋರ್ಡ್ ಕಂಟ್ರಾಕ್ಟರು, ಮತ್ತು ಅವರು ಆ ಫ್ಯಾಕ್ಟರಿಯಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಬಿಲ್ಡಿಂಗ್ ಕಂಟ್ರಾಕ್ಟ್ ಮಾಡಿಕೊಡುತ್ತಾರೆ. ಅವರು ಈಗ ಎರಡು ವರ್ಷಗಳ ಕೆಳಗೆ ರಿಟೈರ್ ಆದ ಶ್ರೀಮಾನ್ ಚನ್ನಬಸಪ್ಪನವರ ಸಂಬಂಧೀಕರು.

ಇನ್ನು ಸುಮಾರು 100 ಜನ ಅಧಿಕಾರಿಗಳನ್ನು ಪರದೇಶಗಳಿಗೆ ಟ್ರೈನಿಂಗ್ ಪಡೆಯುವುದಕ್ಕೋಸ್ಕರ ಕಳಿಸಿದ್ದಾರೆ. ಜರ್ಮನಿ, ಆಸ್ಟ್ರಿಯ, ಜಪಾನ್ ಮುಂತಾದ ದೇಶಗಳಿಗೆ ಇವರನ್ನು ಕಳಿಸಿದ್ದಾರೆ. This is very important. ನೀವು ಪರದೇಶಗಳಲ್ಲಿ ಟ್ರೈನಿಂಗ್ ಪಡೆದು ಬನ್ನಿ ಎಂದು ಇವರನ್ನು ಕಳಿಸಿದ್ದಾರೆ. Several lakhs of rupees have been invested on these people, so that they may acquire technical knowledge and that may be useful to our country. ಆದರೆ ಇವರನ್ನು ಯಾವ ಫೀಲ್ಡಿನಲ್ಲಿ ತರಬೇತಿ ಪಡೆದು ಬರಬೇಕೆಂದು ಕಳಿಸಿದ್ದಾರೋ, ಅವರು ಬಂದಮೇಲೆ ಆ ಫೀಲ್ಡಿನಲ್ಲಿ ಹಾಕದೆ ಬೇರೆ ಫೀಲ್ಡಿನಲ್ಲಿ ಹಾಕಿದ್ದಾರೆ.

One officer trained in Germany Rolling Mills Practices on Rs. 1500 p. m. because he is technically trained and he is working as Labour Welfare Officer. ಏಕೆ ನಿಮಗೆ ಒಬ್ಬ ಬಿ. ಎ ಮಾಡಿದವರನ್ನು ನೇಮಕ ಮಾಡುವುದಕ್ಕೆ ಬರಲಿಲ್ಲವೇ ? Why do you send him abroad to acquire technical knowledge and why do you put him as Labour Welfare Officer ? ಹಾಗಿದ್ದರೆ ಟೆಕ್ನಿಕಲ್ ನಾಲೆಜ್ ಗಳಿಸುವುದಕ್ಕೋಸ್ಕರ ಅಷ್ಟು ಹಣ ಖರ್ಚುಮಾಡಿ ಪರದೇಶಕ್ಕೆ ಏಕೆ ಕಳುಹಿಸಿದ್ದೀರಿ ಎಂದು ಕೇಳುತ್ತೇನೆ.

Another Officer trained in Japan in Rolling Mills practises on Rs. 1400 p.m. and he is working as Traffic Manager. ಮತ್ತೊಂದು ಉದಾಹರಣೆಯನ್ನು ಬೇಕಾದರೆ ಕೊಡುತ್ತೇನೆ. Another officer trained in Sintering plant on Rs. 1400 is working as Tow Administrative Officer in Bhadravathi. ಈ ರೀತಿ ಏಕೆ ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ. ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಅದರ ಉಪಯೋಗ ಪಡೆಯುವುದರ ಬದಲು ಅವರನ್ನು ಬೇರೆ ಯಾವುದೋ ಒಂದು ಲೈನಿನಲ್ಲಿ ಹಾಕಿದರೆ ಪ್ರಯೋಜನವೇನು ? ಇನ್ನು ಕೆಮ್ಮಣ್ಣಗುಂಡಿ ಐರನ್ ಓರ್ ಇರತಕ್ಕಂತಹ ಸ್ಥಳ ತಮಗೆ ಗೊತ್ತಿದೆ. ಇಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವಂತಹ ಮೆಶೀನರಿಗಳನ್ನು ಖರೀದಿ ಮಾಡಿದ್ದಾರೆ.

One crore Rupees worth of machinery has been purchased ಈಗ ಅಲ್ಲಿ ಓರ್ ಸಿಗುವುದಿಲ್ಲವೆಂದು ವರದಿ ಬಂದಿದೆ. Now report goes to show that no further ore will be available in Kemmangundi. ಹಾಗಿದ್ದರೆ ಮೊದಲೇ ಅದರ ರಿಪೋರ್ಟು ಏಕೆ ತರಿಸಿಲ್ಲ ? ಅದನ್ನು ಮಾಡದೆ ಮೆಶಿನರಿಯನ್ನು ಏಕೆ ತರಿಸಿಕೊಂಡಿದ್ದಾರೆ ? ಈಗ ಅಲ್ಲಿರುವ ಓರನ್ನು ಬೇರೆ ಒಬ್ಬ ಪ್ರೈವೇಟ್ ಪಾರ್ಟಿಗೆ ಖರೀದಿ ಮಾಡುವುದಕ್ಕೋಸ್ಕರ ಕೊಡುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂದು ಕೇಳಿದ್ದೇನೆ. M/s. Poddar and Co. They have got an agency here in Bangalore ಇವರಿಗೆ 50 ಪರ್‌ಸೆಂಟ್ ರೆಸ್ಸಿಗೆ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಈ ರೀತಿ ಮಾಡಿ ಇವರು ಸರ್ಕಾರದ ಕಾರ್ಖಾನೆಯನ್ನು ನಷ್ಟಕ್ಕೆ ಒಳಪಡಿಸುತ್ತಿದ್ದಾರೆ. ಇದಕ್ಕೆ ನಮ್ಮವರೇ ಕಾರಣವೆಂದು ಹೇಳುತ್ತೇನೆ. ಇನ್ನೊಂದು ವಿಷಯ. ಈ ಭದ್ರಾವತಿ ಕಂಪೆನಿಯು ನಷ್ಟದಲ್ಲಿ ನಡೆಯುತ್ತಿದೆ. ಆದರೂ ಸಹ ಇಲ್ಲಿಯ ಲೇಬರ್ ಅಸೋಶಿಯೇಶನಿಗೆ ಚುನಾವಣೆ ನಡೆದಿಲ್ಲ. ಮ್ಯಾನೇಜ್‌ಮೆಂಟಿನವರು ಏತಕ್ಕೋಸ್ಕರ ಚುನಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ! ಅಲ್ಲಿ ರೈವಲ್ ಗ್ರೂಪ್ ಇದೆ. ಅಲ್ಲಿ ಫೈಯರಿಂಗ್ ಲಾಕ್‌ಔಟ್ ಎಲ್ಲವೂ ಆಗಿ 7–8 ದಿವಸ ಕಾರ್ಖಾನೆ ಮುಚ್ಚಿತ್ತು. ಇದಕ್ಕೆ ಕಾರಣರು ಯಾರು ? The responsibility is on the management. Rival groups are there. ಸುಪ್ರಿಂ ಕೋರ್ಟ್ ಜಜ್‌ಮೆಂಟ್ ಇದ್ದರೂ ಕೂಡ ಕೆಲಸಗಾರರಿಗೆ ಕೊಡಬೇಕಾದಂತಹ ಡಿ.ಎ. ಯನ್ನು ಕೊಡುವುದಕ್ಕೆ ಮ್ಯಾನೇಜ್‌ಮೆಂಟಿನವರು ಗಮನ ಕೊಟ್ಟಿಲ್ಲ. ಅದರ ಪ್ರಕಾರ ಡಿ.ಎ. ಯನ್ನು ಕೊಟ್ಟಿದ್ದರೆ, ಈ ರೀತಿ ಗಲಾಟೆ ಯಾಗುತ್ತಾ ಇರಲಿಲ್ಲ. ಹಾಗೆ ಕೆಲಸಗಾರರು ಗಲಾಟೆ ಮಾಡಿದ್ದಕ್ಕೋಸ್ಕರ ಅವರ ಮೇಲೆ ಬಂದೂಕು ಚಲಾಯಿಸಿ ಜನರನ್ನು ಕೊಂದಿದ್ದಾರೆ. I charge the management. The Management is responsible because through a decision of the Supreme Court, they were entitled to higher D.A.

The management should be held responsible for all these mistakes committed on the Labour Association. ಇನ್ನು ಒಬ್ಬ ಹೂತ್ ಎನ್ನುವ ಮನುಷ್ಯ ರೂರ್‌ಕೆಲಾದಲ್ಲಿ ಇದ್ದ. ಅವನು ಹೋಗುವುದು ಬರುವುದು ವಿಮಾನದಲ್ಲಿ. ಆತನಿಗೆ 25 ಸಾವಿರ ರೂಪಾಯಿ ತಿಂಗಳಿಗೆ ಕೊಡುತ್ತಿದ್ದಾರೆ. Mr. HOOTHE was formerly working in

(ಶ್ರೀ ಎಸ್. ಬಂಗಾರಪ್ಪ)

Ruerkela. He is getting a salary of Rs. 25,000 p.m. ಅವರ ಚರಿತ್ರೆ ಸಹ ಚೆನ್ನಾಗಿಲ್ಲ. ಆದರೆ ಅವರು ಕೊಡಬೇಕಾದಂತಹ ಇನ್‌ಕಂ ಟ್ಯಾಕ್ಸ್ ಯಾರು ಕೊಟ್ಟದ್ದು ಎಂದು ನೋಡಿದರೆ ಅದನ್ನು ಕಂಪನಿಯವರೇ ಕೊಟ್ಟಿದ್ದಾರೆ. ಅವರು ಕೊಡಬೇಕೆಂದು ಏಕೆ ಅಗ್ರಿಮೆಂಟ್ ಮಾಡಿಕೊಂಡದ್ದು ಎಂದು ಕೇಳುತ್ತೇನೆ. He was not an expert. Though the management knew he was a very bad officer and was not technically sound, he was given Rs. 25,000 ಏಕೆ ಹಾಗೆ ಕೊಡಬೇಕು ? ಮತ್ತು ಅವರನ್ನು ಏಕೆ ಇಟ್ಟುಕೊಳ್ಳಬೇಕು ? Income-tax is now paid to the Income-tax Department by the Company. Why that agreement was made between Mr. Hoothe and the Management of the Factory ? ಇನ್ನೊಂದು ಪಿಗ್ ಐರನ್ ವಿಚಾರ. Pig iron that is required for making steel, sufficient quantities were not available.

MR. DEPUTY SPEAKER.—Sri Bangarappa has taken more time. I cannot give him any more time. It was agreed that he would take 20 minutes, but he has taken double that time. I will take it that he has concluded his speech and I call the next Hon. Member.

ಶ್ರೀ ಎಸ್. ಬಂಗಾರಪ್ಪ.—ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೆ, ಕೈಗಾರಿಕೆಯ ಇಲಾಖೆಯನ್ನು ತರುಣರು ಮತ್ತು ಉತ್ಸಾಹಶಾಲಿಗಳು ಆದ ಮಂತ್ರಿಯವರ ನೇತೃತ್ವದಲ್ಲಿ ಹಾಗೂ ಉತ್ಸಾಹಶಾಲಿ ಕಾರ್ಯದರ್ಶಿಯವರ ಕೈಯಲ್ಲಿ ಕೊಟ್ಟಿದ್ದರಿಂದ ಬಹಳ ಚೆನ್ನಾಗಿ ನಡೆಯುತ್ತದೆ ಎಂಬ ಆಕಾಂಕ್ಷೆ ಇದೆ. ಕಾರ್ಯದರ್ಶಿಯವರು ನಮ್ಮ ಜಿಲ್ಲೆಯಲ್ಲಿ ಡೆಪ್ಯೂಟಿ ಕಮೀಶನರಾಗಿ ಮತ್ತು ಅಸಿಸ್ಟೆಂಟ್ ಕಮೀಶನರಾಗಿ ಕೆಲಸ ಮಾಡಿರುವುದು ನನಗೆ ಹಾಗೂ ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ಚೆನ್ನಾಗಿ ಗೊತ್ತು. ಇವರಿಬ್ಬರಿಗೂ ಜನತೆಗೆ ಏನು ಬೇಕು ಅದನ್ನು ಮಾಡುವುದರಲ್ಲಿ ಹಿಂದೆಂದೂ ಮಾಡದ ಸಾಧನೆ ಮಾಡುತ್ತಾರೆಂದು ನಾನು ನಂಬುತ್ತೇನೆ. ಈ ಇಲಾಖೆ ಬೃಹದಾಕಾರವಾಗಿ ಒಂದು ಗೋಪುರದ ರೀತಿಯಲ್ಲಿ ಬೆಳೆದು ಬಿಟ್ಟಿದೆ.

ಈ ಇಲಾಖೆಯಲ್ಲಿ ಎಲ್ಲಾ ತರಹ ಹೆಗ್ಗಣಗಳೂ, ಎಲ್ಲಾ ತರಹ ಮೊಸಳೆಗಳೂ ಸೇರಿಕೊಂಡಿವೆ. ಅವನ್ನು ಯಾವ ರೀತಿಯಲ್ಲಿ ವಿಷ ಕೊಟ್ಟು ಸರಿ ಮಾಡಬೇಕೆಂಬುದನ್ನು ನೋಡಬೇಕು. ಅಧಿಕಾರ ವರ್ಗದಲ್ಲಿರತಕ್ಕವರೂ ಸಹ ಯಾವ ರೀತಿ ಈ ಇಲಾಖೆಯನ್ನು ಅಭಿವೃದ್ಧಿಗೆ ತರುತ್ತಾರೆಂಬುದನ್ನೂ ಸಹ ಜನ ನೋಡುತ್ತಿದ್ದಾರೆ. ಕೈಗಾರಿಕೋದ್ಯಮ ದೃಷ್ಟಿಯಿಂದ ಯಾವ ರೀತಿಯಲ್ಲಿ ಈ ಇಲಾಖೆಯನ್ನು ಪರಿವರ್ತನೆ ಮಾಡುತ್ತಿದ್ದಾರೆಂದು ಜನರು ಈಗಾಗಲೇ ನಿರೀಕ್ಷಣೆಯನ್ನು ಬಹುತರವಾಗಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನನ್ನ ಸ್ವಂತ ಅನುಭವದ ಎರಡು ಮಾತುಗಳನ್ನು ಹೇಳಬೇಕಾಗಿದೆ. ಹೊಸನಗರ ಊರಿನಲ್ಲಿ ಸುತ್ತಲೂ ನೀರಿನ ಸೌಕರ್ಯವಿದೆ, ಏನಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದು ಅವಶ್ಯಕವೆಂದು ಪದೇಪದೇ ಹೇಳುತ್ತಾ ಇದ್ದಾಗ, ಜನರೂ ಸಹ ಜೀವನೋಪಾಯ ನಡೆಸಲು ಕಷ್ಟ, ಏನಾದರೂ ಸಹಾಯ ಮಾಡಬೇಕೆಂದು ಕೇಳಿದಾಗ, ಅಲ್ಲಿಗೆ ಮಾನ್ಯ ಜಾಯಿಂಟ್ ಡೈರೆಕ್ಟರ್ ಒಬ್ಬರು ಬಂದರು. 1972ನೇ ಇಸವಿಯಲ್ಲಿಯೇ ಅಲ್ಲಿನ ಜನರು ಇಲ್ಲಿ ಏನೋ ಆಗಿಬಿಡುತ್ತದೆ, ಸುವರ್ಣವೃಷ್ಟಿಯಾಗುತ್ತದೆ, ವಿದ್ಯಾರಣ್ಯರ ಕಾಲದಲ್ಲಿದ್ದ ಹಾಗೆ ಅನುಕೂಲವಾಗುತ್ತದೆಂದು ಬೃಹತ್ ದೃಷ್ಟಿಯಲ್ಲಿದ್ದರು. ಅಲ್ಲಿಗೆ ಬಂದಂಥ ಒಬ್ಬ ಜಾಯಿಂಟ್ ಡೈರೆಕ್ಟರಿಗೆ ಬಹಳವಾಗಿ ಸ್ವಾಗತ ಮಾಡಲಾಯಿತು. ತಳಿರು ತೋರಣ, ಚಪ್ಪರ ಹಾಕಿಸಿ ಮಾಡಿದ ಒಂದು ದೊಡ್ಡ ಸ್ವಾಗತವನ್ನು ನೋಡಿದರೆ, ಅದನ್ನು ನಾನು ಯಾವತ್ತೂ ಮರೆಯುವ ಹಾಗೆ ಇಲ್ಲ. ಇವರು ಬಂದಿದ್ದು ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಒಂದು ಕಾಗದವನ್ನು ಬರೆಯಲಿಲ್ಲ. ನಾನು ಶಾಸನಸಭೆಯ ಆಡಳಿತ ಪಕ್ಷದವನಾಗಿ ನಾನು ಹೆಚ್ಚಿಗೆ ಮಾತನಾಡುವುದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಜನಗಳಿಗೆ ಅಧಿಕಾರದಲ್ಲಿ ದ್ರೋಹ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಂತರ ನಮ್ಮ ಪ್ರದೇಶಕ್ಕೆ ಅನೇಕಾನೇಕ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಪದೇಪದೇ ಬಂದರು. ಅವರು ಬಂದಮೇಲೆ ಕೇವಲ ಎ.ಬಿ.ಸಿ.ಡಿ. ಪ್ರಾರಂಭವಾಯಿತೇ ಹೊರತು ಝಡ್ ವರೆಗೂ ಹೋಗಲಿಲ್ಲ. ಇಂತಹ ಎಕ್ಸ್‌ಟೆನ್‌ಷನ್ ಆಫೀಸರ್ಸ್ ತಿಂಗಳಿಗೆ ಎರಡು ಸಾರಿ ಕಷ್ಟಪಟ್ಟು ಬೆಂಗಳೂರಿನಿಂದ ಹೊಸನಗರಕ್ಕೆ ಹೋಗುತ್ತಿದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ 5 ಜನ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಸ್ಟೀಲ್ ಲೈಸೆನ್ಸ್

ಕೊಟ್ಟಿದ್ಧಾರೆಂದು ಹೇಳಿ, ಆ ಜಿಲ್ಲೆಗಳಲ್ಲಿ ಕೈಗಾರಿಕೆ ಬೆಳವಣಿಗೆಯಾಗಿದೆಯೆಂದು ಹೇಳುವ ಪ್ರವೃತ್ತಿ ಬಂದಿದೆ. ಅಲ್ಲಿಗೆ ಬಂದಿದ್ದ ಒಬ್ಬ ಜಾಯಿಂಟ್ ಡೈರೆಕ್ಟರ್ ಏನು ಹೇಳಿದ್ಧಾರೆಂದರೆ, ಹೊಸನಗರಕ್ಕೆ ಹೋದರೆ ಸರ್ಕಾರಕ್ಕೆ ಎಷ್ಟು ಖರ್ಚು ಆದರೂ ಅದರ ಪ್ರತಿಫಲ ಏನಾಯಿತು ಎಂದು ಕೇಳಿದ್ದಾರೆ. ಇದರಿಂದ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ ? ರಿಟೈರ್ಡ್ ಆದ ಮೇಲೆ ಇಂತಹ ಅಧಿಕಾರಿಗಳು ಇದ್ದರು, ಇಂತಹ ಕೆಲಸಗಳನ್ನು ಮಾಡಿಕೊಂಡು ಹೋದರೆಂದು ಹೇಳುವ ಜನರು ಇದ್ದಾರೆ. ಈ ದೇಶದ ಬಡ ಬೋರೇಗೌಡನ ದುಡ್ಡನ್ನು ಅಷ್ಟು ಸಲೀಸಾಗಿ ಚೆಲ್ಲುವುದಕ್ಕೆ ಆಗುವುದಿಲ್ಲ. ಒಬ್ಬ ಜಾಯಿಂಟ್ ಡೈರೆಕ್ಟರಿಗೆ ಕೊಡತಕ್ಕ ಡಿ. ಎ. ಮತ್ತು ಟಿ.ಎ.ಗೆ ಕೇವಲ ಪ್ರಚಾರ ಮಾಡಿಕೊಂಡು ಬರುತ್ತಿದ್ದರು. ಏನೂ ಪ್ರಯೋಜನವಾಗುತ್ತಿರಲಿಲ್ಲ. ನಾನು ಕೇಳುವುದಿಷ್ಟೇ. ಎಕ್ಸ್‌ಟೆನ್‌ಷನ್ ಆಫೀಸರ್ಸ್‌ನ್ನು ಇನ್‌ಸ್ಪೆಕ್ಷನ್‌ಗೆ ಕಳುಹಿಸುವಾಗ ಅವರು ಎಷ್ಟು ಇಂಡಸ್ಟ್ರಿಯಲ್ ಬ್ಯಾಂಕುಗಳನ್ನು ವಿಜಿಟ್ ಮಾಡಿದ್ದಾರೆ, ಎಷ್ಟು ಇಂಡಸ್ಟ್ರಿಯಲ್ ಕೋಆಪರೇಟಿವ್ ಸೊಸೈಟಿಗಳನ್ನು ವಿಜಿಟ್ ಮಾಡಿದ್ದಾರೆ, ಎಷ್ಟು ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪನೆಮಾಡಿದ್ದಾರೆನ್ನುವುದನ್ನು ನಾವು ಪರಿಶೀಲನೆ ಮಾಡದೇ ಹೋದರೆ, ಈ ಎಕ್ಸ್‌ಟೆನ್‌ಷನ್ ಆಫೀಸರ್ಸ್‌ನ್ನು ನೇಮಕಮಾಡಿರುವ ಉದ್ದೇಶ, ಅವರಲ್ಲಿ ಯಾರಿಗೋ ಕೆಲವರಿಗೆ ಪೆನ್‌ಷನ್ ಕೊಡುವುದಕ್ಕೋಸ್ಕರವೇ ಕ್ರಿಯೇಟ್ ಮಾಡಿದ್ದಾರೆಂಬುದು ವ್ಯಕ್ತವಾಗುತ್ತದೆ. ಆ ರೀತಿಯ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ, ನಿಜವಾಗಿ ನಮ್ಮ ಉದ್ದೇಶ ಸಫಲವಾಗುವುದಿಲ್ಲವೆಂದು ನಾನು ಕಳಕಳಿಯಿಂದ ಹೇಳುತ್ತೇನೆ.

ಇನ್ನು ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಈ ಪಬ್ಲಿಕ್ ಸೆಕ್ಟರ್ ಬಗ್ಗೆ ಮಾತನಾಡುತ್ತಾ ಬಹಳ ಕಳಕಳಿಯಿಂದ ಇದನ್ನು ಬೆಳೆಸಬೇಕೆಂದು ಹೇಳಿದರು. ಸಮಾಜವಾದಿ ಸಮಾಜ ರಚನೆಯಾಗಬೇಕಾದರೆ ಅದು ಉದ್ಧಾರವಾಗಬೇಕು ಪಬ್ಲಿಕ್ ಸೆಕ್ಟರ್‌ನಲ್ಲಿ ಉದ್ಧಾರವಾಗಬೇಕಾದರೆ ಮಾನ್ಯ ಶ್ರೀ ಕೃಷ್ಣನ್ ಅವರಂತಹ ಎಲ್ಲಾ ರಾಜಕೀಯ ನಾಯಕರೂ ಸಹ ಕಾರಣರಾಗಬೇಕು. ಪಬ್ಲಿಕ್ ಸೆಕ್ಟರ್‌ನಲ್ಲಿ ಏನು ಕೆಲಸಮಾಡುತ್ತಾರೆ. ಕೆಲಸಗಾರರು ಅವರ ಬೋನಸ್ ಬಗ್ಗೆ ಮತ್ತು ಅವರ ಸಂಬಳ ಸಾರಿಗೆ ಬಗ್ಗೆ ವಿಚಾರಮಾಡಬೇಕು. ಅಲ್ಲಿನ ಕೆಲಸಗಾರರು ಕಾರ್ಖಾನೆಗಳಲ್ಲಿ ಎಷ್ಟು ಗಂಟೆಗಳವರೆಗೆ ಕೆಲಸಮಾಡುತ್ತಾರೆ, ಅಲ್ಲಿ ಎಷ್ಟು ಉತ್ಪನ್ನ ಬಂದಿದೆ ಎಂಬುದನ್ನು ವಿಚಾರಮಾಡಬೇಕಾಗಿದೆ. ಯಾವಾಗಲೂ ಅಲ್ಲಿನ ಉತ್ಪನ್ನದ ಮೇಲೆ ಬೋನಸ್ ತೀರ್ಮಾನಮಾಡಬೇಕೇ ಹೊರತು ಎಲ್ಲಾ ಕಾರ್ಖಾನೆಗಳಲ್ಲಿಯೂ ಒಂದೇ ರೀತಿಯ ಬೋನಸ್ಸನ್ನು ಒಪ್ಪುವುದಕ್ಕಾಗುವುದಿಲ್ಲ. ಇದೇ ಹಿಂದಿನ ಸರ್ಕಾರಕ್ಕೂ ಮತ್ತು ಈಗಿನ ಕಾಂಗ್ರೆಸ್ (ಆರ್)ಗೆ ಇರತಕ್ಕ ವ್ಯತ್ಯಾಸವೆಂದು ಹೇಳಬಹುದು. ನಿಮ್ಮ ಗ್ರಹಚಾರ ಒಳ್ಳೆಯದಾಗಬೇಕಾದರೆ ಶನಿ ದೇವರನ್ನು ಪೂಜೆಮಾಡಿ. ಆದ್ದರಿಂದ ನಾವು ಈಗ ಪಬ್ಲಿಕ್ ಸೆಕ್ಟರ್ ಬೆಳವಣಿಗೆಯ ದೃಷ್ಟಿಯಿಂದ ಯೋಚನೆಮಾಡಬೇಕಾಗಿದೆ. ರಾಜಕಾರಣಿ ಕೆಲಸಗಾರರು ಎಷ್ಟು ಗಂಟೆ ಕಾಲ ಕೆಲಸಮಾಡುತ್ತಾರೆಂಬುದನ್ನು ನಾವು ಈಗ ನೋಡಬೇಕಾಗಿದೆ. ಅಂತಹವರಲ್ಲಿ ಅನೇಕರು ಈ ಸಭೆಯಲ್ಲಿಯೇ ಹೆಚ್ಚು ಕಾಲ ಇರುತ್ತಾರೆಂಬುದನ್ನೂ ಸಹ ನಾವು ಈಗ ಯೋಚನೆ ಮಾಡಬೇಕು. ಆ ರೀತಿಯಾಗಿ ಇರುವುದನ್ನು ಈಗಲೇ ಸರಿ ಮಾಡದೆ ಹೋದರೆ ಈ ದೇಶ ಮುಂದೆ ಬಹಳ ಕಷ್ಟಪಡಬೇಕಾಗುತ್ತದೆ. ಕೇವಲ ಕೂಲಿಗಾರರ ಹಕ್ಕು ಬಾಧ್ಯತೆಗಳನ್ನು ಮಾತ್ರ ನಾವು ನೋಡುತ್ತೇವೆಂದು ಹೇಳಿದರೂ ಕೂಡ ಬಹಳ ಕಷ್ಟವಾಗುತ್ತದೆ. ಆದರೆ ಕೂಲಿಗಾರರ ಬಗ್ಗೆ ಮ್ಯಾನೇಜ್‌ಮೆಂಟಿನವರೂ ಕೂಡ ಅನುಕಂಪವನ್ನು ಇಟ್ಟುಕೊಳ್ಳಬೇಕಾಗಿದೆ. ಒಬ್ಬರಿಗೊಬ್ಬರಿಗೆ ಅನ್ಯೋನ್ಯತೆ ಇರಬೇಕು. ಭದ್ರಾವತಿಯ ಬಗ್ಗೆ ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಕೂಡ ಯಾವುದೇ ಒಂದು ರೀತಿಯ ಅನ್ಯೋನ್ಯದಿಂದ ತೀರ್ಮಾನಮಾಡಬೇಕೆಂದು ಅಲ್ಲಿನ ಮ್ಯಾನೇಜ್‌ಮೆಂಟಿನವರು ಇಟ್ಟುಕೊಂಡಿದ್ದಾರೆ. ಅದರ ಪ್ರಕಾರ ಸುಪ್ರೀಂ ಕೋರ್ಟಿನ ಆದೇಶ ಬಂದಕೂಡಲೆ ಬೋನಸ್ಸನ್ನು ಅವರು ಡಿಕ್ಲೇರ್ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಆ ರೀತಿಯಲ್ಲಿ ಅಲ್ಲಿ ಒಬ್ಬರೊಬ್ಬರ ಅನ್ಯೋನ್ಯತೆಯನ್ನು ಅರಿತುಕೊಂಡು ಕೆಲಸಮಾಡಬೇಕೆಂಬ ದೃಷ್ಟಿ ಇದೆಯೆಂದು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ. ನಾನು ಇನ್ನೊಂದು ವಿಷಯವನ್ನು ಅರಿಕೆಮಾಡಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಕೈಗಾರಿಕೆಗಳಿವೆ ಉದಾಹರಣೆಗೆ ಪೆಟ್ಟು ಹೊಲಿಯುವುದು, ಇಂಥಾ ಕೈಗಾರಿಕೆಗಳಿಗೆ ಸಾಲವನ್ನು ಕೊಟ್ಟರೆ ಅವುಗಳಿಗೆ ಷೂರಿಟಿ ಕೊಡಬೇಕೆಂದು ಕೇಳುತ್ತಾರೆ. ಆತನಿಗೆ ಅಂಗಡಿಯಲ್ಲಿರತಕ್ಕ ಮಾಲಿನ ಮೇಲೆ ಸರ್ಕಾರದವರು ಏಕೆ ಸಾಲ ಕೊಡಬಾರದು ? ಅಂಥಾ ಒಂದು ವ್ಯವಸ್ಥೆಯನ್ನು ಏಕೆ ಜಾರಿಗೆ ತರಬಾರದು? ಇಂಥ ಸಣ್ಣಪುಟ್ಟ ಉದ್ದಿಮೆದಾರರಿಗೆ ಸಾಲ ಕೊಡುವುದಕ್ಕೆ ಒಬ್ಬ ಷೂರಿಟಿಯನ್ನು ಕೇಳಿದರೆ ಅವನು ಎಲ್ಲಿಂದ ತಂದು ಕೊಡಬಲ್ಲ ? ಹೀಗಾದರೆ ನಾವು ಸಮತಾವಾದ ಸಮಾಜವನ್ನು ಕಟ್ಟುವುದು ಯಾವಾಗ ? ನಾವು ಯಾವ ಯಾವ ಬಾಬಿನಲ್ಲೋ ಲಕ್ಷಗಟ್ಟಲೆ ಹಣವನ್ನು ಕಳೆದುಕೊಳ್ಳುತ್ತಿದ್ದೇವೆ. ಅಂಥ ಒಂದು ಅವಕಾಶವನ್ನು ಇವರಿಗೂ ಏಕೆ ಕೊಡಬಾರದು ? ಒಂದು ಸಣ್ಣ

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ಚಾಪೆ ಹೆಣೆಯುತಕ್ಕ ಒಂದು ಸೊಸೈಟಿ, ಅದನ್ನು ರಿಜಿಷ್ಟರ್ ಮಾಡಿಸಬೇಕೆಂದರೆ ಅದರಲ್ಲಿ ನೂರಾರು ನ್ಯೂನತೆಗಳಿವೆ. ಇದರಲ್ಲಿ ಇಷ್ಟೊಂದು ಜಟಿಲವಾದ ಸಮಸ್ಯೆಗಳು ಇರುವಾಗ ಈ ಎಕ್ಸಟನ್‌ಷನ್ ಆಫೀಸರುಗಳೇನಿದ್ದಾರೆ—ಸರ್ಕಾರದಿಂದ ನೇಮಕವಾದವರು ; ಇವರು ಆ ಸೊಸೈಟಿಗಳನ್ನು ರಿಜಿಷ್ಟರ್ ಮಾಡಿಸತಕ್ಕ ಬಗ್ಗೆ ಒಂದು ಗೈಡ್ ಲೈನನ್ನು ಕೊಟ್ಟರೆ ಸಾಕೇ ? ಆ ಜನರಿಗೆ ಈ ಸಹಕಾರ ಸಂಘಗಳನ್ನು ಯಾವ ರೀತಿ ರಿಜಿಷ್ಟರ್ ಮಾಡಿಸಬೇಕೆಂಬುದು ಗೊತ್ತಿಲ್ಲ. ಅವರಿಗೆ ಈ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ತಿಳುವಳಿಕೆಯನ್ನು ಕೊಡತಕ್ಕ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ.

4-00 P.M.

ಇನ್ನೊಂದು ವಿಷಯ — ಈ ವಿದ್ಯಾವಂತ ನಿರುದ್ಯೋಗಿಗಳ ವಿಚಾರ : ಇವರ ಸಂಖ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಇವರಿಗಾಗಿ ಕೇಂದ್ರ ಸರ್ಕಾರದವರ ಒಂದು ಸ್ಕೀಮಿದೆ. ಆದರೆ ಅದು ಇರತಕ್ಕ ಅನೇಕ ಜನ ವಿದ್ಯಾವಂತರಾದ ಆ ತರುಣರಿಗೇ ಗೊತ್ತಿಲ್ಲ. ಶೇ : 80 ರಷ್ಟು ಸಾಲ ಕೊಡತಕ್ಕ ಯೋಜನೆ ಅದು. ಇದರ ಬಗ್ಗೆ ಸಾಕಷ್ಟು ಪ್ರಚಾರ ಬೇಕು. ಉದಾಹರಣೆಗೆ ಸೊರಬದಲ್ಲಿ ಒಬ್ಬ ಎಂ. ಎ. ಗ್ರಾಜುಯೇಟ್ ಆಗಿರತಕ್ಕ ಶ್ರೀಧರ ಎಂಬುವವನು ಶಾಲೆಗಳಿಗೆ ಅಗತ್ಯವಾಗಿ ಬೇಕಾದ ಒಂದು ಎಕ್ವಿಪ್‌ಮೆಂಟನ್ನು ಅಂದರೆ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಅಥವಾ ಒಂದು ಕ್ಲಾಸಿನಿಂದ ಇನ್ನೊಂದು ಕ್ಲಾಸಿಗೆ ವರ್ತಮಾನ ಕಳುಹಿಸಬೇಕಾಗಿದ್ದರೆ ಅನುಕೂಲವಾಗ ತಕ್ಕಂಥ ಒಂದು ಡಿಸೈನನ್ನು ಬಹಳ ಕಷ್ಟಪಟ್ಟು ಈತನು ತಯಾರು ಮಾಡಿದ್ದನು. ಆದರೆ ಎಜುಕೇಷನ್ ಇಲಾಖೆಯವರು ಇದಕ್ಕೆ ತಕ್ಕ ಉತ್ತೇಜನ ಕೊಡದೆ ಆತನು ಪಡಬಾರದ ಕಷ್ಟವನ್ನು ಪಡಬೇಕಾಯಿತು. ಆದುದರಿಂದ ಸರ್ಕಾರದವರು ಇಂಥ ವಿದ್ಯಾವಂತ ತರುಣರಿಗೆ ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕ ಬಗ್ಗೆ ಉತ್ತೇಜನ ಕೊಡುವುದರ ಜೊತೆಗೆ ಅವರು ತಯಾರಿಸತಕ್ಕ ಪದಾರ್ಥಗಳಿಗೂ ಕೂಡ ಒಂದು ಮಾರುಕಟ್ಟೆಯನ್ನು ಒದಗಿಸಬೇಕಾದ್ದು ಅವರ ಕರ್ತವ್ಯ. ಇಷ್ಟನ್ನು ಹೇಳುವುದಕ್ಕೆ ಅಧ್ಯಕ್ಷರು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕೆಯ ಡಿಮ್ಯಾಂಡಿನ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಟ್ಟು ನಾನು ನಿಂತಿದ್ದೇನೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒಂದು ವಿಷಯವನ್ನು ತಿಳಿಯಬಯಸುವುದೇನೆಂದರೆ–ಅನೇಕ ವರ್ಷಗಳಿಂದಲೂ ಅನೇಕರು ಹೇಳುತ್ತಿದ್ದಾರೆ– ಎಲ್ಲ ಬೃಹತ್ ಕೈಗಾರಿಕೆಗಳೂ ಈ ಬೆಂಗಳೂರು ಅಥವಾ ಮೈಸೂರು ನಗರಗಳೆರಡರಲ್ಲೇ ಕೇಂದ್ರೀಕೃತವಾಗುತ್ತಿವೆ, ಇದರಿಂದ ಪಟ್ಟಣಗಳ ವಾತಾವರಣ ಕೆಡುವುದಲ್ಲದೆ, ಜನ ಜೀವನವೂ ಕೂಡ ಬಹಳ ಇಲ್ಲಿ ಕಷ್ಟವಾಗುತ್ತಿದೆ; ಇವುಗಳನ್ನು ಇನ್ನಾದರೂ ಬೇರೆ ಕಡೆಗಳಿಗೆ ಹರಡುವಂತೆ ಮಾಡಬೇಕೆಂದು ಹೇಳುತ್ತಲೇ ಬಂದಿದ್ದರೂ ಆ ಕಾರ್ಯವಿನ್ನೂ ಆಗಲಿಲ್ಲ. ಈ ದಿವಸ ಜಿಲ್ಲಾ ಹಾಗೂ ತಾಲ್ಲೂಕ್ ಮಟ್ಟದಲ್ಲಿ ಹೆಣ್ಣುಮಕ್ಕಳಿಗೆ, ಅನಾಥರಿಗೆ ಅದರಲ್ಲೂ ವಿಧವೆಯರಿಗೆ ಬೇರೆ ಜೀವನಕ್ಕೆ ಏನೂ ಮಾರ್ಗವಿಲ್ಲದೆ ಬಹಳ ತಾಪತ್ರಯ ಪಡುತ್ತಿದ್ದಾರೆ. ಆದುದರಿಂದ ಇನ್ನಾದರೂ ಸರ್ಕಾರದವರು ಕೈಗಾರಿಕೆಗಳನ್ನು ಜಿಲ್ಲಾ ಹಾಗೂ ತಾಲ್ಲೂಕ್ ಮಟ್ಟಗಳಲ್ಲಿ ಸ್ಥಾಪಿಸುವುದಕ್ಕೆ ಏರ್ಪಾಡನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಉದಾಹರಣೆಗೆ ಅರಸೀಕೆರೆ ತಾಲ್ಲೂಕಿನಲ್ಲಿ ನಾರಿನ ಕೈಗಾರಿಕೆಯಲ್ಲಿ ತರಬೇತನ್ನು ಕೊಡತಕ್ಕ ಒಂದು ಸರ್ಕಾರಿ ಟ್ರೈನಿಂಗ್ ಸ್ಕೂಲು ಇದೆ. ಈಗ ಅಲ್ಲಿ ಕೇವಲ 25 ಜನ ಹೆಣ್ಣು ಮಕ್ಕಳಿಗೆ ಮಾತ್ರ ಟ್ರೈನಿಂಗಿಗೆ ಅವಕಾಶ ಮಾಡಿದ್ದಾರೆ, ಅದರಲ್ಲಿ ಕನಿಷ್ಟಪಕ್ಷ ನೂರು ಮಂದಿಗಾದರೂ ಟ್ರೈನಿಂಗ್ ಕೊಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಈ ಟ್ರೈನಿಂಗ್ ಶಾಲೆಯಲ್ಲಿ ಏನು ನಡೆಯುತ್ತಿದೆ ಎಂದರೆ ಅಲ್ಲಿ ಟ್ರೈನಿಂಗಿಗೆ ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕಾಗಿ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿರತಕ್ಕ ಸದಸ್ಯರೆಲ್ಲರೂ ಸರ್ಕಾರಿ ಅಧಿಕಾರಿಗಳು. ಆದುದರಿಂದ ಅವರು ಅಲ್ಲಿ ಶಾಲೆಗೆ ಬರಿ ಅಧಿಕಾರಿಗಳ ಮತ್ತು ಸರ್ಕಾರಿ ನೌಕರಿಗಳಲ್ಲಿರತಕ್ಕ ಜನರ ಮಕ್ಕಳಿಗೆ ಮಾತ್ರ ಅವಕಾಶ ಮಾಡಿಕೊಡುತ್ತಿದ್ದಾರೆ. ಆದರಿಂದ ಬಾಕಿ ಸಾರ್ವಜನಿಕರಿಗೆ ಅಷ್ಟೇನೂ ಹೆಚ್ಚಿನ ಪ್ರಯೋಜನ ದೊರೆಯುತ್ತಿಲ್ಲ. ಅಲ್ಲಿ ಬಡವರಾಗಿರತಕ್ಕವರಿಗೆ ಅನಾಥರಿಗೆ, ವಿಧವೆಯರಿಗೆ ಇಂಥವರಿಗೆ ಅವಕಾಶವೇ ಸಿಗುತ್ತಿಲ್ಲ. ಈರೀತಿಯಾಗಿ ಕಳೆದ 2 ವರ್ಷಗಳಿಂದ ನಡೆದು ಬರುತಿದೆ.

ಇನ್ನು ಮುಂದಕ್ಕಾದರೂ ಈ ಸ್ಕೂಲಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸತಕ್ಕ ಆ ಸಮಿತಿಯಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯ ಸದಸ್ಯರುಗಳಿರುವಂತೆಯೂ ಮತ್ತು ಪುರಸಭೆ ಅಧ್ಯಕ್ಷರು ಅದಕ್ಕೆ ಅಧ್ಯಕ್ಷರಾಗಿರುವಂತೆಯೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಈ ಬೃಹತ್ ಕೈಗಾರಿಕೆಗಳಿಗೆ ಐ.ಎ.ಎಸ್. ಅಧಿಕಾರಿಗಳನ್ನು ಹಾಕುವುದನ್ನು ಇನ್ನಾದರೂ ಸರ್ಕಾರದವರು ಕೈ ಬಿಬೇಕೆಂದು ಹೇಳುತ್ತೇನೆ. ಯಾರು ಕೈಗಾರಿಗಳಲ್ಲಿ ಚೆನ್ನಾಗಿ ತರಪೇತಿ ಪಡೆದಿರುತ್ತಾರೋ ಮತ್ತು ಯಾರು ಕೈಗಾರಿಕೆಗಳನ್ನು ಪ್ರಗತಿ ಮಾರ್ಗದಲ್ಲಿ ಕೊಂಡೊಯ್ಯಬಲ್ಲರೋ ಅಂಥವರನ್ನೇ ಇವುಗಳಿಗೆ ಹಾಕಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ; ಈ ಕೈಗಾರಿಕೆಗಳ ಸ್ಥಾಪನೆ ಇಲ್ಲಿಯವರೆಗೂ ಯಾವರೀತಿ ರಾಜ್ಯದಲ್ಲಿ ಮುಂದುವರಿಯುತ್ತಾ ಬಂದಿದೆ ಎಂದರೆ ಈ ಕೈಗಾರಿಕಾ ಪೋರ್ಟ್‌ಫೋಲಿಯೋ ಯಾರ ಕೈಗೆ ಸೇರುತ್ತದೋ ಅವರ ಚುನಾವಣೆ ಕ್ಷೇತ್ರದಲ್ಲಿ ಇಲ್ಲವೇ ಈ ಮೈಸೂರು ಬೆಂಗಳೂರು ನಗರಗಳಲ್ಲಿ ಮಾತ್ರ ಇವು ಬೆಳೆಯುತ್ತಾ ಬಂದಿವೆ. ಆದರೆ ಇದು ದೇಶದ ಅಭಿವೃದ್ಧಿಯ ದೆಶೆಯಿಂದ ಹೇಳುವುದಾದರೆ ಶುಭಲಕ್ಷಣವಲ್ಲವೆಂದು ಹೇಳಬೇಕಾಗುತ್ತದೆ. ದೇಶದಲ್ಲಿ ಎಲ್ಲೆಲ್ಲಿ ಯಾವ ಯಾವ ಕಚ್ಚಾಮಾಲು ಸಿಕುತ್ತ ಅಲ್ಲಲ್ಲಿ ಆ ಕೈಗಾರಿಗಳು ಬೆಳೆಯಬೇಕಾದ್ದು ನ್ಯಾಯ. ಆದರೆ ಈ ದಿವಸ ರಾಜ್ಯದಲ್ಲಿ ಕೈಗರಿಕಾ ಮಂತ್ರಿಗಳಾಗಿರತಕ್ಕವರು ತಮ್ಮ ಪಾರ್ಲಿಮೆಂಟಿನ ಸದಸ್ಯತ್ವ ಬಿಟ್ಟು ಬರುವಾಗ ನವಿಲನೋಪಾದಿ ಇರತಕ್ಕ ಒಬ್ಬ ತರುಣರ ಕೈಗೆ ಇದು ಹೋಗುತ್ತದೆಂದು ನಾವು ಭಾವಿಸಿದ್ದೆವು. ಇಂದು ಕೈಗಾರಿಕೆಗಳನ್ನು ಉಳಿಸಿ ಬೆಳೆಸಬೇಕು. ಎಲ್ಲಿ ಶ್ರೀಮಂತರಿದ್ದಾರೆ ಅಲ್ಲಿ ಕೈಗಾರಿಕೆ ಸ್ಥಾಪಿಸುವುದು ಬೇಡ, ನಿಜವಾಗಿಯೂ ಕಷ್ಟಪಡುವವರಿರುವ ಕಡೆ ಸ್ಥಾಪಿಸಿ ಒಳ್ಳೆಯ ಹೆಸರು ತರುವುದಕ್ಕೆ ಪ್ರಯತ್ನ ಮಾಡಬೇಕು.

ಕೈಗಾರಿಕೆಗಳ ಸ್ಥಿತಿಯೇನಾಗಿದೆ ಎಂದು ಪದೇ ಪದೇ ಮನವಿ ಮಾಡುತ್ತಿದ್ದೇವೆ. | ಕನ್ನಡಿಗರಿಗೆ ಕೈಗಾರಿಗಳಲ್ಲಿ ಬಹಳ ಕಷ್ಟವಾಗಿದೆ, ಕೆಲವು ದಿವಸಗಳಿಂದ ಎಲ್ಲ ಪಕ್ಷಗಳ ಸದಸ್ಯರೂ ಇದರ ಬಗ್ಗೆ ಮನವಿಮಾಡುತ್ತಿದ್ದಾರೆ; ಕನ್ನಡಿಗರಿಗೆ ಸಾಕಷ್ಟು ಅವಕಾಶ ಸಿಕ್ಕಿಲ್ಲ, ಸಿಕ್ಕಿದರೂ ಬಹಳ ಹಿಂಸೆಯನ್ನನುಭವಿಸುತ್ತಿದ್ದಾರೆ. ಬಿ.ಇ.ಎಲ್‌ನಲ್ಲಿ ಇಂದು ತಮಿಳರ ಹಿಂಸೆ ಜಾಸ್ತಿಯಾಗಿ ಕನ್ನಡಿಗರು ಕಣ್ಣೀರಿಡುವ ಪರಿಸ್ಥಿತಿಯಿದೆ. ಅದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಅಲ್ಲಿ ಕಾರ್ಮಿಕರಿಗೇನು ಕಷ್ಟವಿದೆಯೆಂದು ಮನವರಿಕೆ ಮಾಡಿಕೊಂಡು ಇರುವ ಕಷ್ಟ ನಿವಾರಣೆಮಾಡಲು ಪ್ರಯತ್ನ ಮಾಡಬೇಕು, ಹಾಗೆ ಮಾಡಿ ಕನ್ನಡಿಗರ ಪ್ರೀತಿವಿಶ್ವಾಸಗಳಿಸಬೇಕು. ಕನ್ನಡಿಗರು ವ್ಯಥೆ ಪಡಲು ಅವಕಾಶಮಾಡಬಾರದು ಎಂದು ಮನವಿಮಾಡಿಕೊಳ್ಳುತ್ತೇನೆ. ಕೈಗಾರಿಕೆಗಳು ಪ್ರಗತಿ ಕುಂಠಿತವಾಗುತ್ತಿರುವ ಬಗ್ಗೆ ಒಂದು ಅಂಶವನ್ನು ಗಮನಕ್ಕೆ ತರುತ್ತೇನೆ. ಕಂಪಲಿಯಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದೆ, ಅಲ್ಲಿ ಸುಮಾರು 18 ಲಕ್ಷ ರೂಪಾಯಿಗಳ ದುರುಪಯೋಗವಾದ ನಡೆದಿದೆ. ಕಳೆದ ಸಾರ್ವತ್ರಿಕ ಮಹಾ ಸಭೆಯಲ್ಲಿ ಈ ಅನ್ಯಾಯ ತಡೆಗಟ್ಟಲು ಪ್ರತಿನಿಧಿಗಳಿಗೆ ಅವಕಾಶ ದೊರೆಯಲಿಲ್ಲ. 18ಲಕ್ಷ ರೂಪಾಯಿ ಯಾವರೀತಿ ನಷ್ಟವಾಗಿದೆ ಎಂಬುದನ್ನು ಹೇಳುತ್ತೇನೆ. ರೀಟೈಲ್ ಡಿಪೋದಲ್ಲಿ ಸುಮಾರು 34600 ರೂಪಾಯಿ ನಷ್ಟವಾಗಿದೆ, ಕೋರ್ಟಿಗೆ ತಮ್ಮ ಸ್ವಂತ ಅನುಕೂಲಕ್ಕಾಗಿ ಕೇಸು ಹಾಕಿ ಸುಮಾರು 2ಲಕ್ಷ ಹಾಳು ಮಾಡಿದ್ದಾರೆ; ಲಾರಿಯಿಂದ 40 ಸಾವಿರ ರೂಪಾಯಿ ನಷ್ಟವಾಗಿದೆ, ಅಗ್ರಿಕಲ್ಚರಲ್ ಫಾರಂನಿಂದ ಒಂದು ವರ್ಷಕ್ಕೆ ಸುಮಾರು 20 ಸಾವಿರ ರೂ. ನಷ್ಟವಾಗಿದೆ. ಸ್ಟೋರ್ಸ್ ಮತ್ತು ಸ್ಪೇರ್ಸ್‌ನಿಂದ 14 ಲಕ್ಷ ರೂಪಾಯಿ ನಷ್ಟವಾಗಿದೆ. ಹೀಗಾದರೆ ಈ ಕಾರ್ಖಾನೆ ಬೆಳೆಯಲು ಸಾಧ್ಯವೇ ! ಈ ಸಕ್ಕರೆ ಕಾರ್ಖಾನೆಯಲ್ಲಿ 63,600 ಚಿಲ್ಲರೆ ರೂಪಾಯಿ ಬೆಲೆ ಬಾಳುವ ಒಂದು ಡ್ರೈಯಿಂಗ್ ಮೆಷೀನ್ ಇತ್ತು, ಅದನ್ನು ಉಪಯೋಗವಾಡಿಲ್ಲ, ಹಾಗೆಯೇ ಇದೆ. ಏಕೆ ಇಂಥ ಅವ್ಯವಹಾರ ಮಾಡಬೇಕು ! ಇದರ ಬಗ್ಗೆ ಪ್ರೋಬ್ ಮಾಡಬೇಕು, ಸಮಗ್ರ ತನಿಖೆಮಾಡಿ ಕೈಗಾರಿಕೆಗೆ ಇದು ಕಂಟಕಪ್ರಾಯವಾಗದಂತೆ ನೋಡಿಕೊಳ್ಳಬೇಕು. ಈ ಸಹಕಾರಿ ಸಕ್ಕರೆ ಕಾರ್ಖಾನೆ ಉತ್ತಮವಾದ ಕೆಲಸ ಮಾಡಿ ರೈತರಿಗೆ ಸಹಾಯವಾಗುವಂತಿರಬೇಕಾದರೆ ಈಗಿನ ಆಡಳಿತ ಮಂಡಲಿಯನ್ನು ರದ್ದುಮಾಡಬೇಕು.

ಕೈಗಾರಿಕಾ ಸಹಕಾರಿ ಬ್ಯಾಂಕಿದೆ, ಅದು ಕೈಗಾರಿಕೆಗಳಿಗೆ ಹಣ ಕೊಡುವುದು. ಫೈನಾನ್ಷಿಯಲ್ ಕಾರ್ಪೊರೇಷನ್ ಕೈಗಾರಿಕೋದ್ಯಮಿಗಳಿಗೆ ಸಾಲ ಕೊಡುವಾಗ ಇರುವ ನ್ಯೂನತೆಗಳನ್ನು ಸರಿಪಡಿಸಬೇಕು. ಕೈಗಾರಿಕಾ ಸಹಕಾರಿ ಬ್ಯಾಂಕು ಅಥವ ಮೈಸೂರು ಫೈನಾನಷಿಯಲ್ ಕಾರ್ಪೊರೇಷನ್‌ಗಳಿಗೆ ಸಾಲಕ್ಕೆ ಅರ್ಜಿ ಕೊಟ್ಟರೆ ಅದು ದೊರೆಯಲು ಕೆಲವಾರು ದಿನಗಳಾಗುವುದು. ಬೇರೆ ಕಡೆಯಿಂದ ಮೆಷಿನರಿ ತರಬೇಕಾದರೆ ಅಥವ ಕಟ್ಟಡ ಕಟ್ಟಬೇಕಾದರೆ ಸಾಲ

(ಶ್ರೀ ಎಚ್. ಎಸ್. ಸಿದ್ದಪ್ಪ)

ದೊರೆಯುವುದು ನಿಧಾನವಾಗುವುದೆಂದು ಮೊದಲು ಬೇರೆ ಕಡೆಯಿಂದ ಹಣ ತಂದು ಕೆಲಸಮಾಡಿ ನಂತರ ಸಾಲ ಕೇಳಿದರೆ ಕೊಡುವುದಿಲ್ಲ. ಇದು ಸರಿಯಲ್ಲ. ಅರ್ಜಿ ಹಾಕಿದ ದಿವಸ ಏನಿತ್ತು ಎಂದು ನೋಡಿ ಆದಕ್ಕೆ ತಕ್ಕಂತೆ ಸಾಲ ಕೊಡಲು ವ್ಯವಸ್ಥೆಮಾಡಬೇಕು. ಸಾಲ ಕೊಡುವುದು ತಡವಾದರೆ ಬೇರೆ ಕಡೆಯಿಂದ ಹಣ ತಂದು ಮೆಷೀನರಿ ವಗೈರೆ ಪಡೆಯಬೇಕಾಗುವುದು. ನಿಧಾನ ಮಾಡಿದರೆ ಬೇಕಾದ್ದು ಸಕಾಲದಲ್ಲಿ ಸಿಕ್ಕದಿರಬಹುದು.

ಕಳೆದ ಅಧಿವೇಶನದಲ್ಲಿ ಒಂದು ವಿಷಯ ಪ್ರಸ್ತಾಪವಾಡಿದ್ದೆ. ಅನೇಕ ಕೈಗಾರಿಕೋದ್ಯಮಿಗಳು ಪ್ರಭಾವ ಬೀರಿ ಕೈಗಾರಿಕೆ ಸ್ಥಾಪಿಸುತ್ತೇವೆಂದು ಹಣ ಪಡೆದು ದುರುಪಯೋಗ ಮಾಡಿರುವ ಸದಂರ್ಭಗಳಿವೆ. ಅವರಮೇಲೆ ಕ್ರಮ ತೆಗೆದುಕೊಳ್ಳಲು ವ್ಯವಸ್ಥೆಮಾಡಿದೆಯೆಂದು ಹೇಳಿದರು ಸರಕಾರಿ ಹಣ ಪಡೆದು ಕೈಗಾರಿಕೆ ಸ್ಥಾಪಿಸದೆ ಸುಮಾರು 7 ವರ್ಷವಾಗಿರುವ ಸಂದರ್ಭ ಇದೆ. ಹಣ ವಾಪಸು ಪಡೆಯುವುದಕ್ಕೂ ಸಾಧ್ಯವಾಗಿಲ್ಲ. ಅದು ಬಂದಿದ್ದರೆ ಬೇರೆಯವರಿಗಾದರೂ ಕೊಡಬಹುದಾಗಿತ್ತು. ಇಂಥ ಪ್ರಸಂಗವನ್ನು ಗಮನಕ್ಕೆ ತಂದರೂ ಕ್ರಮ ತೆಗೆದುಕೊಂಡಿಲ್ಲ. ಇದು ಸರಿಯಲ್ಲ. ಈ ಸಂದರ್ಭದಲ್ಲಿ ತಮ್ಮ ಅಧಿಕಾರಿಗಳನ್ನು ಫಲ್ ಅಪ್ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಕಟ್ಟಕಡೆಯದಾಗಿ ಮಂತ್ರಿಗಳಲ್ಲಿ ಒಂದು ಮನವಿ, ಇದನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಹೆಣ್ಣುಮಕ್ಕಳಿಗೆ ಉದ್ಯೋಗ ದೊರೆಯಲು ಅವಕಾಶವಾಗುವಂತೆ ಒಂದು ತರಬೇತಿ ಕೇಂದ್ರ ಮಾಡಿ 1973ರ ವಿಶ್ವೇಶ್ವರಯ್ಯನವರ ಅನುಯಾಯಿ ಎಂದು ಕೀರ್ತಿ ಪಡೆಯಬೇಕು. ಅವರು ಕೇಂದ್ರದಲ್ಲಿ ವಿಶೇಷ ಕೀರ್ತಿ ಪಡೆಯುತ್ತಿದ್ದಾರೆ. ಮಹಿಳೆಯರಿಗೆ ತಾಲ್ಲೂಕುಗಳಲ್ಲಿ ಬಹಳ ಕಷ್ಟವಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ಅವರಿಗಾಗಿ ಒಂದು ತರಪೇತಿ ಕೇಂದ್ರ ಸ್ಥಾಪಿಸಬೇಕೆಂದು ಮನವಿಮಾಡಿಕೊಂಡು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಬಿ ಸತ್ಯನಾರಾಯಣಸಿಂಗ್ (ಹೊಸಪೇಟೆ).—ಉಪಾಧ್ಯಕ್ಷರೆ, ಕೈಗಾರಿಕಾ ಮಂತ್ರಿಗಳು ಇಟ್ಟಿರುವ ಬೇಡಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಕೆಲವೊಂದು ವಿಷಯಗಳ ಬಗ್ಗೆ ಗಮನ ಸೆಳೆಯುತ್ತೇನೆ. ಕೈಗಾರಿಕೆ ಇಲಾಖೆಯ ವರದಿ ನೋಡುವಾಗ ಒಂದು ರೀತಿಯಲ್ಲಿ ಅಶ್ಚರ್ಯವಾಗುತ್ತದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಅದರಲ್ಲೂ ನಮ್ಮ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿರುವ ಕೈಗಾರಿಕೆಗಳ ಬಗ್ಗೆ ಉಲ್ಲೇಖನವಿಲ್ಲ. ಕಬ್ಬಿಣದ ಅದುರಿನ ಕೈಗಾರಿಕೆ ವಿಚಾರ ನಮೂದಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ಕಬ್ಬಿಣದ ಅದುರು ಸಿಕ್ಕುವುದು, ಅದರಲ್ಲಿ ಸೇಕಡ 68–69 ಅಂಶದಷ್ಟು ಕಬ್ಬಿಣವದೆ, ನಮ್ಮ ಭಾಗದಿಂದ ಸುಮಾರು 40 ಲಕ್ಷ ಟನ್ ಹೊರದೇಶಗಳಿಗೆ ಕಳಿಸುವರು. ಇದರಿಂದ ಬೇಕಾದಷ್ಟು ವಿದೇಶೀವಿನಿಮಯ ದೊರೆಯುವುದು. ಆದರೂ ಇದರ ಬಗ್ಗೆ ರಾಜ್ಯ ಸರಕಾರ ಯಾವ ಗಮನವನ್ನೂ ಕೊಟ್ಟಿಲ್ಲ ಎಂದು ವರದಿಯಿಂದ ಕಂಡುಬರುವುದು.

ನಾನಾದರೂ ಈ ಸಂದರ್ಭದಲ್ಲಿ ರಾಜ್ಯಸರ್ಕಾರದವರನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ಇವತ್ತಿನದಿವಸ ಈ ಒಂದು ಉದ್ಯಮದಲ್ಲಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಸ್ಥಾನ ಇದೆ. ಬಳ್ಳಾರಿ ಹೊಸಪೇಟೆಯಲ್ಲಿ ಸಿಕ್ಕುವಂಥ ಕಬ್ಬಿಣ ಆದುರಿಗೆ ಪ್ರಪಂಚದಲ್ಲಿ ಮೂರನೆಯ ಸ್ಥಾನ ಇದೆ. ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕಾದ ಅವಶ್ಯಕತೆ ಮತ್ತು ಕಾಲ ಕೂಡ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 40 ಲಕ್ಷ ಮಿಲಿಯನ್ ಟನ್ ಕಬ್ಬಿಣ ಅದುರನ್ನು 400 ಮೈಲ ಆಚೆ ಇರುವ ಮದ್ರಾಸ್ ಬಂದರಿನಿಂದ ರಫ್ತಾಗುತ್ತದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪಾದನೆ ಸುಮಾರು 8–10 ಮಿಲಿಯನ್ ಟನ್‌ಗೆ ಹೋಗುವ ನಿರೀಕ್ಷೆ ಇದೆ. ದೋಣಿಮಲೆ ಕಬ್ಬಿಣದ ಅದುರು ಕಾರ್ಯಗತವಾಗುವುದಕ್ಕೆ ಪ್ರಾರಂಭ ಮಾಡಿದ್ದಲ್ಲಿ ಈ ಗುರಿಯನ್ನು ಮುಟ್ಟುವ ಅಂಶ ಇದೆ. ಹೀಗೆ ಇರುವಾಗ 8–10 ಮಿಲಿಯನ್ ಟನ್ ಕಬ್ಬಿಣದ ಅದುರು ಕರ್ನಾಟಕರಾಜ್ಯದ ಕಾರವಾರ ಬಂದರಿನ ಮುಖಾಂತರ ತೆಗೆದುಕೊಂಡು ಹೋಗಲು ಅವಕಾಶ ಇದ್ದರೂ ಸಹ 400 ಮೈಲಗಳ ದೂರವಿರುವ ಮದ್ರಾಸಿನ ಬಂದರಿನ ಮೂಲಕ ರಫ್ತು ಮಾಡುತ್ತಾ ಇದ್ದಾರೆ. ಇದರಿಂದ ನಮ್ಮ ದೇಶಕ್ಕೆ ಅನ್ಯಾಯವಾಗುತ್ತದೆ. ಆದ್ದರಿಂದ ನಾನು ರಾಜ್ಯಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ, ತಾವು ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ನಮ್ಮ ಕಬ್ಬಿಣದ ಅದುರನ್ನು ಕಾರವಾರ ಬಂದಿರಿನ ಮೂಲಕವಾಗಲೀ, ಹುಬ್ಬಳಿ—ಧಾರವಾಡದ ರೈಲು ಮಾರ್ಗ ಹಾಕಿ ರಫ್ತು ಮಾಡಿದಲ್ಲಿ ಹೆಚ್ಚಿನ ಲಾಭ ದೊರೆಯುವ ಸಂದರ್ಭ ಇದೆ. ಮಂಗಳೂರು ಬಂದರು ಇದೆ, ಅದಕ್ಕೆ ಸಾಕಷ್ಟು ಕೆಲಸ ಇಲ್ಲ

ಎನ್ನುವ ಕೂಗು ಇದೆ. ಕೊಟ್ಟೂರು—ಹರಿಹರ ರೈಲ್ವೆ ಮಾರ್ಗವನ್ನು ಜೋಡಣೆ ಮಾಡಿದರೆ ಒಂದೂವರೆ ಮಿಲಿಯನ್ ಟನ್ ಕಬ್ಬಿಣದ ಅದುರನ್ನು ಮಂಗಳೂರು ಪೋರ್ಟಿನಿಂದ ತೆಗೆದುಕೊಂಡು ಹೋಗುವ ಸಾಧ್ಯತೆ ಇದೆ. ಇದರ ಬಗ್ಗೆ ರಾಜ್ಯಸರ್ಕಾರದವರು ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಈ ರೈಲ್ವೆ ಮಾರ್ಗಗಳು ಆಗುವಂತೆ ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ನಮ್ಮ ಕಬ್ಬಿಣದ ಅದುರಿಗೆ ಕೈಗಾರಿಕೆಯಲ್ಲಿ ಕರ್ನಾಟಕದವರಿಗೆ ಹೆಚ್ಚಿನ ಮಟ್ಟದಲ್ಲಿ ಅನ್ಯಾಯವಾಗುತ್ತಾ ಇದೆ. ಬಳ್ಳಾರಿ ಹೊಸಪೇಟೆ ವಿಭಾಗದಲ್ಲಿ ಕಬ್ಬಿಣದ ಅದುರು ಕಚೇರಿ ಮದ್ರಾಸ್‌ನಲ್ಲಿದೆ. ಅಲ್ಲಿಂದ ಅವರು ಆಡಳಿತ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮೈಸೂರು ರಾಜ್ಯದವರು ಒತ್ತಾಯತಂದು ಅದು ಮೈಸೂರು ರಾಜ್ಯದಲ್ಲಿ ಇರಬೇಕು ಎಂದು ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊದಲನೆಯದಾಗಿ, ಕೇಂದ್ರಸರ್ಕಾರದ ಮೈಸೂರು ಮಿನರಲ್ಸ್ ಟ್ರೇಡಿಂಗ್ ಕಾರ್ಪೊರೇಷನ್ ಏನು ಇದೆ ಅದರಲ್ಲಿ ಕನ್ನಡಿಗರಿಗೆ ಸರಿಯಾದ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ನಮಗೆ ಬಹಳ ಅನ್ಯಾಯವಾಗಿದೆ, ಈ ಒಂದೂ ಕೆಲಸಕ್ಕೂ ಕೂಡ ರಾಜ್ಯಸರ್ಕಾರದವರು ಕೇಂದ್ರಸರ್ಕಾರದ ಮೇಲೆ ಒತ್ತಾಯತಂದು ಇದನ್ನು ಮಾಡಬೇಕಾದ್ದು ಬಹಳ ಅವಶ್ಯಕ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಕಬ್ಬಿಣದ ಅದುರಿನ ಬಗ್ಗೆ ಹೇಳುವಾಗ, ನಮ್ಮ ರಾಜ್ಯಸರ್ಕಾರದ ಮೈಸೂರು ಮಿನರಲ್ಸ್ ಇಲಾಖೆ, ತಮ್ಮ ಅಧೀನದಲ್ಲಿದ್ದ ಕೆಲವೊಂದು ಏರಿಯಾವನ್ನು ಗೋವೆಯ ಸಲಗಾಂಕರ್ ಪಾರ್ಟಿಗೆ ತನ್ನ ಕೆಲಸ ಮಾಡಲಿಕ್ಕೆ ಕೊಟ್ಟಿದ್ದಾರೆ. ಅವರು ತುಂಗಭದ್ರ ಮಿನರಲ್ಸ್ ಎಂಬ ಹೆಸರಿನಿಂದ ಅದನ್ನು ನಡೆಸುತ್ತಿದ್ದಾರೆ. ಈ ವಿಷಯವನ್ನು ನಾನು ಆಗಲೇ ಒಂದು ಕಡೆ ಪ್ರಸ್ತಾಪ ಮಾಡಿದ್ದೇನೆ. ಈ ಒಂದು ಏರಿಯಾಕ್ಕೆ. ಎಂಟು ಆಣೆ ರಿಯಾಯಿತಿ ದರದ ಮೇಲೆ ಅವರಿಗೆ ಕೊಟ್ಟಿದ್ದಾರೆ. ಆ ಭಾಗದಲ್ಲಿ ಎಡರು ರೂಪಾಯಿ ರಿಯಾಯಿತಿ ದರದಮೇಲೆ ಕೆಲಸ ಮಾಡಲಿಕ್ಕೆ ಜನರು ಸಿದ್ಧರಾಗಿರುವಾಗ ಎಂಟು ಆಣೆ ದರದ ಮೇಲೆ ಕೊಟ್ಟಿರುವುದು ಅನ್ಯಾಯ.

ಎರಡನೆಯದಾಗಿ' ಕಂಪನಿಯು ಷರತ್ತಿನ ಪ್ರಕಾರ, ಮೂರು ವರ್ಷದಲ್ಲಿ ಪೆಲಿಟೈಸೇಷನ್ ಪ್ಲಾಂಟ್ ಹಾಕಲಿಕ್ಕೆ ಸಾಧ್ಯವಾಗಬೇಕು. ಎರಡು ವರ್ಷವಾಗಿದೆ, ಇದರ ಬಗ್ಗೆ ಯಾವ ಕೆಲಸ ಕೂಡ ಅಲ್ಲಿ ಆಗಿಲ್ಲ ಎಂದು ತಿಳಿದು ಬಂದಿದೆ. ಷರತ್ತು ಪೂರ್ಣವಾಗುವ ಸಂಭವ ಇಲ್ಲ. ನಾವು ನೋಡುತ್ತಾ ಇರುವಂತೆ ಅವರು ಎಲ್ಲಿಯವರೆಗೆ ಇದ್ದರೆ ಅಲ್ಲಿಯವರಿಗೆ ಕೆಲಸ ಮಾಡಿ ಫ್ಲೋಟ್ ಓರ್ ತೆಗೆದುಕೊಂಡು ಹೋಗುವಂಥ, ಸನ್ನಿವೇಶ ಸರ್ಕಾರದವರ ಎದುರು ಬರಬಹುದು. ಸರ್ಕಾರದವರು ಇದರ ಬಗ್ಗೆ ಎಚ್ಚರಿಕೆವಹಿಸಿ, ಷರತನ್ನು ಪೂರ್ಣಗೊಳಿಸುವಂತೆ ಒತ್ತಾಯಮಾಡಬೇಕು, ಇಲ್ಲದಿದ್ದರೆ ಅಗ್ರಿಮೆಂಟ್ ಅನ್ನು ರದ್ದು ಮಾಡುವುದಕ್ಕೆ ಮುಂದೆಬರಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲ ಬಳ್ಳಾರಿ ಹೊಸಪೇಟೆ ವಿಭಾಗದಲ್ಲಿ ಖಾಸಗೀ ಕಂಪನಿಯವರಿರೆ ಐರನ್ ಪ್ಲಾಂಟ್ ಹಾಕುವುದಕ್ಕೆ ಅರ್ಜಿ ಹಾಕಿದ್ದಾರೇ ಅದು ಕಾರ್ಯಗತವಾಗದೆ ಹಾಗೆಯೇ ಉಳಿದಿದೆ. ಅದು ಆದಷ್ಟು ಬೇಗ ಕಾರ್ಯಗತವಾಗಿ ಉದ್ಯಮ ಪ್ರಾರಂಭವಾಗುವುದಕ್ಕೆ ರಾಜ್ಯಸರ್ಕಾರ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ವಿಭಾಗದಲ್ಲಿ, ಕೇಂದ್ರಸರ್ಕಾರದವರು ದೋಣಿಮಲೈ ಬೃಹತ್ ಯೋಜನೆಯನ್ನು ಮಾಡುತ್ತಾ ಇದ್ದಾರೆ. ಅಲ್ಲಿ ಕನ್ನಡಿಗರಿಗೆ ಆಗತಕ್ಕ ಅನ್ಯಾಯವನ್ನು ಯಾರಿಂದಲೂ ಸಹಿಸಲು ಸಾಧ್ಯವಿಲ್ಲ. ಇಂಥ ಬೃಹತ್ ಯೋಜನೆಯಲ್ಲಿ 10–15 ಜನ ಕನ್ನಡಿಗರಿಗೆ ಮಾತ್ರ ಕೆಲಸ ಸಿಕ್ಕಿದೆ. ಇದನ್ನು ನೋಡಿದರೆ ನಿಜವಾಗಿಯೂ ದುಃಖವಾಗುತ್ತದೆ. ಈ ಯೋಜನೆಗೆ ಸಿಬ್ಬಂದಿಯನ್ನು ಪೂರ್ತಿ ಮಾಡುವ ವಿಚಾರದಲ್ಲಿ ರಾಜ್ಯಸರ್ಕಾರದವರು ತಮ್ಮ ಪ್ರಾತಿನಿಧ್ಯವನ್ನು ಪಡೆಯುವುದರ ಮೂಲಕ ಸ್ಥಳದಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ದೊರಕುವಂತೆ ಮಾಡಬೇಕು ಎಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಕಮಲಾಪುರ ಭಾಗದಲ್ಲಿ ಡಾಕ್ಟರ್ ನಾಗನಗೌಡರು ಶಾಸಕರಾಗಿರುವಾಗ ವಿಜಯನಗರದ ಸಕ್ಕರೆ ಕಾರ್ಖಾನೆ ಆಗಬೇಕು ಎಂದು ಬಹಳ ಶ್ರಮ ಪಟ್ಟಿದ್ದಾರೆ. ಆಗಿನ ರಾಜಕೀಯ ವಾತಾವರಣದಲ್ಲಿ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಅನುಕೂಲವಾದ ವಾತಾವರಣ ಇದೆ, ನಮ್ಮ ರಾಜ್ಯಸರ್ಕಾರದವರು ಹತ್ತು ಸಕ್ಕರೆ ಕಾರ್ಖಾನೆಗಳನ್ನು ಮಾಡುವುದಕ್ಕೆ ಹೊರಟ್ಟಿದ್ದಾರೆ, ಹಾಗೆ ಮಾಡುವಾಗ ಕಮಲಾಪುರದ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ಅಲ್ಲಿಗೆ ಒಂದು ಸಕ್ಕರೆ ಕಾರ್ಖಾನೆಯನ್ನು ದಯಪಾಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ, ಅನೇಕ ಕಡೆ ಬಹಳವಾಗಿ ಸಂಶಯಾತ್ಮಕವಾದ ವಾತಾವರಣ ದಿನೇ ದಿನೇ ಕೇಳಿ ಬರುತ್ತಾ ಇದೆ. ಪತ್ರಿಕೆಗಳ ವರದಿಗಳನ್ನು ನಾವು ನೋಡುತ್ತಿರುವಂತೆ, ಇದರ ಬಗ್ಗೆ ಅನುಮಾನ ಬರುವ ರೀತಿಯಲ್ಲಿ ಅನೇಕ ವಿಷಯಗಳು ಬರುತ್ತಿವೆ. ನಾನಾದರೂ ರಾಜ್ಯಸರ್ಕಾರದವರನ್ನು ಕೇಳುತ್ತೇನೆ· ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು

(ಶ್ರೀ ಬಿ. ಸತ್ಯನಾರಾಯಣಸಿಂಗ್)

ಏನು ಎಂದು ತಿಳಿಸಬೇಕಾದುದು ಅಗತ್ಯ ಎಂದು. ಇವತ್ತಿನದಿವಸ ಮೈಸೂರು ರಾಜ್ಯದ ಜನರು ಅದರಲ್ಲೂ ಬಳ್ಳಾರಿ ಜಿಲ್ಲೆಯ ಜನರು ಕಾರ್ಖಾನೆಯ ಬಗ್ಗೆ ಹೆಚ್ಚಿನ ಆಶೆ ಇಟ್ಟುಕೊಂಡು ಎದುರು ನೋಡುತ್ತಿದ್ದಾರೆ. ಆದ್ದರಿಂದ ರಾಜ್ಯಸರ್ಕಾರದವರು ಉಕ್ಕಿನ ಕಾರ್ಖಾನೆಯ ಬಗ್ಗೆ ಸ್ಪಷ್ಟವಾದ ನಿಲುವು ಏನು ಎಂದು ತಿಳಿಸಬೇಕು. ಮಾನ್ಯ ಮಂತ್ರಿಗಳು ಕಾರ್ಖಾನೆ ಬರುತ್ತದೆ ಬರುತ್ತದೆ ಎಂದು ಪದೇ ಪದೇ ಹೇಳುತ್ತಾ ಇದ್ದಾರೆ. ತೋರಣಗಲ್‌ನಲ್ಲಿ ಒಂದು ಬೋರ್ಡನ್ನು ಮಾತ್ರ ಹಾಕಿದ್ದಾರೆ. ವಿಜಯನಗರ ಕಾರ್ಖಾನೆಯ ಕಾರ್ಯಕ್ರಮ ಪ್ರಾರಂಭವಾಗುವಂತೆ ಒತ್ತಾಯ ಮಾಡಬೇಕು. ವಿಜಯನಗರ ಸ್ಟೀಲ್‌ಪ್ಲಾಂಟ್ ಬರುವ ಬಗ್ಗೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಕಾರ್ಖಾನೆ ಬೇಕಾದ ವಸ್ತುಗಳನ್ನು ತಯಾರು ಮಾಡುವುದಕ್ಕೆ ಆನ್‌ಫ್ರೋನ್ ಸ್ಟ್ರಕ್ಚರ್ ಏನು ಇದೆ ಅದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಲು ತಾವು ಏರ್ಪಾಡು ಮಾಡಬೇಕು. ಸ್ಟೀಲ್ ಪ್ಲಾಂಟ್ ಬಂದನಂತರ, ಅನ್‌ಫ್ರೋನ್ ಸ್ಟ್ರಕ್ಚರ್ ತರಿಸುವುದಕ್ಕೆ ಪ್ರಯತ್ನ ಮಾಡಿದರೆ, ಅದು ಕಾಲ ತೆಗೆದುಕೊಳ್ಳಬಹುದು. ಇದರಿಂದ ಸ್ಟೀಲ್ ಜನಕ್ಕೆ ಒದಗದೆ ಹೋಗಬಹುದು, ಆದ್ದರಿಂದ ಸ್ಟೀಲ್ ಪ್ಲಾಂಟ್ ಬರುವುದಕ್ಕೆ ಮುಂಚೆ, ಸಣ್ಣ ಕಾರ್ಖಾನೆಗೆ ಬೇಕಾದ ಆನ್‌ಫ್ರೋನ್ ಸ್ಟ್ರಕ್ಚರ್ ಅನ್ನು ಕೂಡಲೇ ಒದಗಿಸಬೇಕು ಎಂದು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಇವತ್ತಿನದಿವಸ್ಕ್ಯ ಯಾವ ಅಭಿವೃದ್ಧಿಯೂ ಅಲ್ಲಿ ಆಗುತ್ತಿಲ್ಲ. ಕೇವಲ ಅಸಿಸ್ಟೆಂಟ್ ಡೈರೆಕ್ಟರನ್ನು ಜಿಲ್ಲಾ ಮಟ್ಟದಲ್ಲಿಟ್ಟಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್‌ಅನ್ನು ಇಟ್ಟಿದ್ದಾರೆ. ಅವರು ಯಾವರೀತಿಯ ಕೆಲಸ ಮಾಡದೆ ತಮ್ಮ ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ. ಏನಾದರೂ ಒಂದು ಟಾರ್ಗೆಟ್ ಹಾಕಿ, ಹೊಸ ಉದ್ಯಮಗಳನ್ನು ಸ್ಥಾಪನೆ ಮಾಡುವುದರಲ್ಲಿ ಹೆಚ್ಚಿನ ಅನುಕಂಪ ಹುಟ್ಟುವಂತ ಯೋಜನೆಯನ್ನು ಹಾಕಬೇಕು ಎಂದು ರಾಜ್ಯಸರ್ಕಾರದವರನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

4-30 P.M.

ಸಣ್ಣ ಪ್ರಮಾಣದ ಕೈಗಾರಿಕೆ ಬಗ್ಗೆ ಹೇಳುವುದಾದರೆ ಕೈಗಾರಿಕೆಗಳು ಕೇವಲ ಬೆಂಗಳೂರು ಮೈಸೂರು ಮತ್ತು ದೊಡ್ಡ ಪಟ್ಟಣಗಳಲ್ಲಿ ಸುತ್ತಮುತ್ತ ಬೆಳೆಯುವುದು ಆಗಿದೆ. ರಾಜ್ಯದ ಒಳಭಾಗದಲ್ಲಿ ಹೆಚ್ಚಿನ ಬೆಳವಣಿಗೆ ಕಾಣುತ್ತಾ ಇಲ್ಲ. ಜಿಲ್ಲಾ ಒಳಭಾಗದಲ್ಲಿ ಬೆಳೆಯುವುದಕ್ಕೆ ಅವಕಾಶಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಭೂಗರ್ಭ ಗಣಿ ಬಗ್ಗೆ ಹೇಳುವುದಾದರೆ ಆ ಡೈರೆಕ್ಟರಿಗೆ ಮೂರು ಕೆಲಸ ಕೊಟ್ಟಿದ್ದಾರೆ, ಚಿತ್ರದುರ್ಗದ ಕಾಪರ್ ಮೈನಿಂಗ್ ಕಂಪನಿ, ಮ್ಯಾನೇಜಿಂಗ್ ಡೈರೆಕ್ಟರ್, ಅಂಡರ್ ಗ್ರೌಂಡ್ ವಾಟರ್ ಸೆಲ್ ಇವುಗಳನ್ನು ಇವರಿಗೆ ವಹಿಸಿದ್ದಾರೆ. ಹೀಗಾಗಿ ಅವರಿಗೆ ಯಾವ ಒಂದು ಡಿಪಾರ್ಟ್‌ಮೆಂಟಿನ ಆಡಳಿತದ ಬಗ್ಗೆ ಹೆಚ್ಚಿನ ಗಮನ ಕೊಡಲು ಸಮಯವಿಲ್ಲ. ಆದ್ದರಿಂದ ಇದನ್ನೆಲ್ಲಾ ಬೇರೆ ಬೇರೆ ನಾಡಿ ಅಧಿಕಾರಿಗಳು ಹೆಚ್ಚಿನ ಗಮನಕೊಟ್ಟು ಉದ್ಯಮವನ್ನು ಬೆಳೆಸಲು ಅನುಕೂಲವಾಗುವಂತಹ ವಾತಾವರಣ ಉಂಟುಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೂಡಲೇ ಈ ಕಾರ್ಯಕ್ರಮ ರಾಜ್ಯ ಸರ್ಕಾರ ತೆಗೆದುಕೊಂಡು ಇದನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಉಪಸಭಾಪತಿಗಳೇ, ಇವೊತ್ತಿನ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಇವೊತ್ತು ಮೈಸೂರು ರಾಜ್ಯದಲ್ಲಿ ಎಷ್ಟು ಉದ್ಯೋಗ ಪ್ರಗತಿಯಾಗಬೇಕು ಎಂದು ಎಷ್ಟು ಹೇಳಿಕೆ ಕೊಟ್ಟರು ಸಹಿತ ಅದು ಆಗಿಲ್ಲ. ಬಿಜಾಪುರ ಜಿಲ್ಲೆ ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆ. ಉದ್ಯಮದ ಬೆಳವಣಿಗೆ ಅಲ್ಲಿ ಯಾವುದು ಆಗದೆ ಇರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ನೇಕಾರರಿಗೆ ಬೇಕಾದ ನೂಲನ್ನು ಪುರವಠೆ ಮಾಡುವುದರಲ್ಲಿ ಸಾಕಷ್ಟು ಅವಕಾಶ ಇದ್ದರೂ ಸಹಿತ ಜನರಿಗೆ ನೂಲನ್ನು ಪುರವಠೆ ಮಾಡುವುದಕ್ಕೆ ಸಾಧ್ಯವಾಗದೆ ಜನ ಅಲ್ಲಿ ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಇಲ್ಲಿಯವರೆಗೆ ಸಾಕಷ್ಟು ನೂಲನ್ನು ಒದಗಿಸಿ ಉದ್ಯೋಗಾವಕಾಶ ಮಾಡುತ್ತೇವೆಂದು ಹೇಳಿದರು. ಆದರೆ ಆ ರೀತಿ ಇಲ್ಲಿಯವರೆಗೂ ಒದಗಿಸದೆ ಇರುವುದಕ್ಕೆ ವಿಷಾದಪಡುತ್ತೇನೆ. ಅವರಿಗೆ ಬೇಕಾದದ್ದು 40 ಕೌಂಟ್ಸ್ ಮತ್ತು 60 ಕೌಂಟ್ಸ್. ಅದಕ್ಕೆ ಬದಲಾಗಿ ಅವರಿಗೆ ಕೆಲವೊಂದು ಸಲ ಒದಗಿ

ಸಿದ್ದು 20 ಕೌಂಟ್ಸ್. ಅದನ್ನು ತೆಗೆದುಕೊಂಡು 'ರಗ್ ಮಾಡಬೇಕೇ ಮತ್ತೆ ಏನು ತಯಾರು ಮಾಡಬೇಕು ? ಏತಕ್ಕೆಂದರೆ ಅವರಿಗೆ ಕೊಟ್ಟಂತ ನೂಲನ್ನು ಮಗ್ಗಗಳಿಗೆ ಹಾಕುವುದಕ್ಕೆ ಬರುವುದಿಲ್ಲ. ಅವರಿಗೆ 60 ಕೌಂಟ್ಸ್ ನೂಲು ಬೇಕಾಗುತ್ತದೆ. ಇಂಥ ಕೌಂಟ್ ನೂಲು ಕೊಟ್ಟರೆ ಹೇಗೆ ಉದ್ಯೋಗ ಮಾಡುವುದು ಇದನ್ನು ಎಚ್ಚರಿಕೆಯಿಂದ ನೋಡಿಕೊಳ್ಳತಕ್ಕದು ಆಗಬೇಕು. ಇವೊತ್ತು ಅದರ ಬಗ್ಗೆ ಇಲ್ಲಿಯವರೆಗೆ ಪ್ರಗತಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಹೇಳಬೇಕು, ಬಣ್ಣದ ಮಳಿಗೆಗಳನ್ನು ತೆಗೆದು ಎಲ್ಲಾ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಸರ್ಕಾರದವರು ಹೇಳಿಕೆ ಕೊಡುತ್ತಾರೆ, ಅಲ್ಲಿ ಏನೂ ಮಾಡಿರುವುದಿಲ್ಲ. ಇದು ಎಲ್ಲಾ ಸತ್ಯಕ್ಕೆ ದೂರವಾದ ಘೋಷಣೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಅದರ ಬಗ್ಗೆ ಪ್ರಗತಿ ಕೆಲಸ ಇಲ್ಲಿಯವರೆಗೆ ಏನು ಮಾಡುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಅಲ್ಲದೆ ಇಂಥ ಡೈ ಹೌಸ್ ಬಗ್ಗೆ ರಬಕವಿ ಮತ್ತು ಬನಹಟ್ಟಿಯಲ್ಲಿ ನೇಕಾರರುಗಳಿಗೆ ಉದ್ಯೋಗ ಒದಗಿಸುವುದಕ್ಕೆ ಅವರಿಗೆ ಹೆಚ್ಚಿನ ಒಂದು ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು. ಕನಿಷ್ಠಪಕ್ಷ 10 ಸಾವಿರ ನೇಕಾರರು ಇದ್ದಾರೆ, ಅಲ್ಲಿಗೂ ಸಹಿತ ಬಣ್ಣದ ಮಳಿಗೆಗಳನ್ನು ಹಾಕಿ ನೂಲನ್ನು ಒದಗಿಸಲು ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಮೈಸೂರು ಭಾಗದಲ್ಲಿ ಲೆದರ್ ಇಂಡಸ್ಟ್ರೀಸ್ ಬೋರ್ಡು ಸ್ಥಾಪನೆ ಮಾಡಬೇಕು. ಅದಕ್ಕಾಗಿ ಚರ್ಮದ ಕೆಲಸಗಾರರಿಗೆ ಬೇಕಾದ ಸೌಕರ್ಯ ಮಾಡಿಕೊಟ್ಟು ಉಪಕಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅದಕ್ಕೆ ನಾನು ಈ ಹೌಸಿನಲ್ಲಿ ಲೆದರ್ ಬೋರ್ಡ್ ಬಿಲ್ಲು ತಂದೆ. ಅದನ್ನು ತಂದಾಗ ಮುಖ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಈ ಉದ್ಯೋಗದ ಸಲುವಾಗಿ ಮತ್ತು ಜನರಿಗಾಗಿ ಎಲ್ಲಾ ತರಹದ ಸೌಕರ್ಯಗಳನ್ನು ಮಾಡುತ್ತೇವೆ ಮತ್ತು ಹಣದ ವ್ಯವಸ್ಥೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು, ಲೆದರ್ ಇಂಡಸ್ಟ್ರೀಸ್ ಬೋರ್ಡು ಮಾಡಿದರು ಆದರೆ ಆ ಲೆದರ್ ಇಂಡಸ್ಟ್ರೀಸ್ ಬೋರ್ಡಿಗೆ ಹಾಕಿದಂತಹ ಜನರು ಯಾರು ಎಂದು ವಿಚಾರ ಮಾಡಿದರೆ ಯಾರು ಆ ಉದ್ಯೋಗಗಳಿಗೆ ಯಾವ ರೀತಿಯಿಂದಲೂ ಏನೂ ಗೊತ್ತಿಲ್ಲವೋ ಅಂತಹ ಏನೂ ಗೊತ್ತಿಲ್ಲದ ಜನರನ್ನು ಆ ಬೋರ್ಡಿಗೆ ಹಾಕಿದರೆ ಉದ್ಯೋಗದ ಬಗ್ಗೆ ಸಲಹೆಗಳನ್ನು ಕೊಡುವುದು ಹೇಗೆ ? ಬರೀ ರಾಜಕೀಯ ಧೋರಣೆಯಿಂದ, ಕೆಲವು ಜನರನ್ನು ಸಮಾಧಾನ ಮಾಡಬೇಕು ಎಂದು ಕೆಲವು ಜನರ ಪ್ರಭಾವದಿಂದ, ಅವರಿಗೆ ಅನುಕೂಲ ಮಾಡತಕ್ಕ ದೃಷ್ಟಿಯಿಂದ ಈ ಉದ್ಯಮಕ್ಕೆ ಪ್ರಯೋಜನವಾಗುವುದಿಲ್ಲ. ಇಂಥ ಜನಗಳನ್ನು ಆ ಉದ್ಯಮಗಳಲ್ಲಿ ಎಷ್ಟು ಜನರನ್ನು ಹಾಕಿದರೂ ಸಹಿತ ಗೊತ್ತಿಲ್ಲದೆ ಇರುವ ಜನ ಹಾಕಿದರೆ ಯಾವ ಕೆಲಸ ಮಾಡುವುದಕ್ಕೂ ಆಸ್ಪದ ಇರುವುದಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಆ ಜನರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಬೇಕೆಂದು ನನ್ನ ಅಭಿಪ್ರಾಯವಲ್ಲ. ಆ ಉದ್ಯೋಗದಲ್ಲಿ ಗೊತ್ತಿಲ್ಲದೆ ಇರುವ ಜನರನ್ನು ಹಾಕಿರುವುದರಿಂದ ಅಲ್ಲಿರುವ ಚೇರ್‌ಮನ್, ಬೋರ್ಡ್ ಆಫ್ ಡೈರೆಕ್ಟರ್ಸ್ ಯಾವ ರೀತಿ ಕೆಲಸಮಾಡಬೇಕು ? ಇಲ್ಲಿಯವರೆಗೂ ಆ ಜನರು ಇವರ ಪ್ರಗತಿಯ ಬಗ್ಗೆ ಯಾವ ಸಲಹೆ ಸೂಚನೆಗಳನ್ನು ಕೊಡುವುದಕ್ಕೂ ಅಸಮರ್ಥರು ಇದ್ದಾರೆ ಎಂದು ಸ್ಪಷ್ಟವಾಗಿ ಹೇಳಬಹುದು. ಲೆದರ್ ಬೋರ್ಡ್ ಸ್ಥಾಪನೆ ಮಾಡಿ 4 ತಿಂಗಳು ಆಯಿತು. ಇಲ್ಲಿಯವರೆಗೆ ಚೇರ್‌ಮನ್‌ಗೆ ಆಫೀಸ್ ಇಲ್ಲ, ಇಲ್ಲಿಯವರೆಗೆ ಒಂದು ಕಮಿಟಿ ಕರೆದಿಲ್ಲ. ನಾಮಕವಾಸ್ತೆ ಕಣ್ಣು ಒರೆಸುವುದಕ್ಕೆ ಇದನ್ನು ಸರ್ಕಾರ ಮಾಡಿದೆ ಎಂದು ಹೇಳಬೇಕಾಗುತ್ತದೆ, ಲೆದರ್ ಇಂಡಸ್ಟ್ರೀಸ್ ಬೋರ್ಡು ಬಗ್ಗೆ ತಮಗೆ ಅಷ್ಟು ಕಳಕಳಿ ಇದ್ದಿದ್ದರೆ ಇಲ್ಲಿಯವರೆಗೆ ಅದನ್ನು ಈ ರೀತಿ ಬಿಡುತ್ತಾ ಇರಲಿಲ್ಲ, ಇಷ್ಟು ಸಮಯವನ್ನು ಕಳೆಯುತ್ತಾ ಇರಲಿಲ್ಲವೆಂದು ಸ್ಪಷ್ಟವಾಗಿ ಸರ್ಕಾರದ ಮೇಲೆ ಟೀಕೆ ಮಾಡುತ್ತಾ ಇದ್ದೇನೆ.

ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸರ್ವೀಸ್ ಇನ್‌ಸ್ಟಿಟ್ಯೂಟ್ ಸಮ್ಮೇಳನ ಕರೆದಾಗ ಮಾನ್ಯ ಮಂತ್ರಿಗಳನ್ನು ಆಹ್ವಾನಿಸಿದರು. ಆಗ ಸಾಕಷ್ಟು ಸಲಹೆಗಳನ್ನು ಇಟ್ಟರು. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸಮಸ್ಯೆಗಳನ್ನು ವಿವರಿಸುತ್ತಾ ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ ಲೆದರ್ ಕಾರ್ಪೊರೇಷನ್‌ನನ್ನು ನಾವು ಇಷ್ಟರಲ್ಲೇ ಪ್ರಾರಂಭ ಮಾಡುತ್ತೇವೆಂದು ಹೇಳಿ ಭರವಸೆ ಕೊಟ್ಟರು. ಆ ಬಗ್ಗೆ ಇಲ್ಲಿಯವರೆಗೆ ತಾವು ಏನು ಮಾಡಿದಿರಿ ಎಂದು ನಿಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಸಲುವಾಗಿ ಏನು ಮಾಡಿದ್ದೀರಿ ! ಆ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿದ್ದರೆ ಯಾರು ಕೆಳ ಮಟ್ಟದಲ್ಲಿ ಇದ್ದಾರೆ, ಹರಿಜನರು ಅವರು ಏನು ತಿಳಿದುಕೊಳ್ಳಬೇಕು? ಆ ದೃಷ್ಟಿಯಿಂದ ಅದರ ಬಗ್ಗೆ ನಿಜವಾಗಿ ನಾನು ಬಹಳ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಕ್ರೋಮ್ ಟ್ಯಾನಿಂಗ್ ಫ್ಯಾಕ್ಟರಿ ಇದೆ ಅವರಲ್ಲಿ ನಮ್ಮ ಸರ್ಕಾರ ನೂರಕ್ಕೆ ಎಪ್ಪತ್ತರಷ್ಟು ಬಡ್ಡಿಗೆ ತಂದ ಹಣವನ್ನು ವಿನಿಯೋಗಿಸಿದೆ. ಇವೊತ್ತಿನವರೆಗೂ ಟೆಕ್‌ನೀಷಿಯನ್ಸ್, ಕೈಗಾರಿಕೆ ತರಪೇತಿ ಹೊಂದಿದಂತಹ ತಾಂತ್ರಿಕ ಮನುಷ್ಯ ಅವರಲ್ಲಿ ಇದ್ದಾನೆಯೇ ಎಂದು

(ಶ್ರೀ ಜೆ. ಎಲ್. ಕಬಾಡಿ)

ವಿಚಾರ ಮಾಡಿದರೆ ಯಾರು ಇಲ್ಲ. 150 ರೂಪಾಯಿ ಸಂಬಳ ಕೊಟ್ಟು, ರಿಟೈರ್ಡ್ ಆಫೀಸರ್ ಇಟ್ಟು, ಆ ಉದ್ಯೋಗವನ್ನು ಹಾಳು ಮಾಡುತ್ತಿದ್ದಾರೆ. ಇಲ್ಲಿಯುವರೆಗೆ ಕ್ರೋಮ್ ಟ್ಯಾನಿಂಗ್ ಫ್ಯಾಕ್ಟರಿ ಆಶಾದಾಯಕವಾದ ಸ್ಥಿತಿಯಲ್ಲಿ ಇಲ್ಲವೆಂದು ಸ್ಪಷ್ಟಪಡಿಸುತ್ತೇನೆ. ದೇಶದಲ್ಲಿ ಅಖಿಲ ಭಾರತ ಮಟ್ಟದಲ್ಲಿ ತಾಂತ್ರಿಕ ಮನುಷ್ಯರು ಯಾರು ಇದ್ದಾರೆ, ನಮ್ಮ ದೇಶದ ಪ್ರಗತಿ ಆಶಾದಾಯಕವಾಗಿದೆಯೇ, ಈ ಉದ್ಯಮ ಬೆಳವಣಿಗೆ ಆದೀತೆ ಎನ್ನುವುದನ್ನು ಯೋಚನೆ ಮಾಡಬೇಕು, ಅಲ್ಲದೆ ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ಇವೊತ್ತು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ, ತಾಲ್ಲೋಕು ಮಟ್ಟದಲ್ಲಿ ಸ್ಥಾಪನೆಮಾಡಬಹುದಾದ ಅತ್ಯುತ್ತಮವಾದ ಫ್ಯಾಕ್ಟರಿಗಳನ್ನು ಸಜೆಸ್ಟ್ ಮಾಡಿದ್ದೇವೆ. ಇಡೀ ದೇಶಕ್ಕೆ ಉಪಯುಕ್ತವಾದ ಅತಿ ಉತ್ತಮವಾದ ಸಿಮೆಂಟ್ ಕಾರ್ಖಾನೆಯನ್ನು ಬಿಜಾಪುರದ ಅತಿ ಸಮೀಪದಲ್ಲಿ ಇರುವ ಮುದ್ದೇಬಿಹಾಳದಲ್ಲಿ ಮಾಡಬೇಕು. ಈ ಒಂದು ಉತ್ತಮವಾದ ಸ್ಕೀಮನ್ನು ತೆಗೆದುಕೊಂಡು ಮಾಡಿದ್ದೇ ಆದರೆ ದೇಶದ ಒಂದು ಸಿಮೆಂಟಿನ ಅಭಾವವನ್ನು ದೂರ ಮಾಡಬಹುದು ಎನ್ನುವುದನ್ನು ಪದೇ ಪದೇ ಬಿಜಾಪುರದ ಜನರು ಹೇಳುತ್ತಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆ ಯಾವಾಗಲೂ ಹಿಂದುಳಿದಿವೆ. ಈ ಹಿಂದುಳಿದ ಜಿಲ್ಲೆಗೆ ಪ್ರಥಮ ಪ್ರಾಶಸ್ತ್ಯ ಕೊಡುತ್ತಾರೆಂದು ನಾನು ಆಶೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಈವೊತ್ತು ಚರ್ಮದ ಮಂಡಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಖಾಸಗಿಯವರಿಗೆ ಸೂಕ್ತವಾದ ಸ್ಥಳ ಕೊಟ್ಟು ಅದು ಇನ್ನು 8—10 ದಿವಸದಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಉಪಾಧ್ಯಕ್ಷರೇ, ಈವೊತ್ತಿನ ದಿವಸ ಕೈಗಾರಿಕಾ ಮಂತ್ರಿಗಳು ಇಟ್ಟಂಥ ಬೇಡಿಕೆಗಳಿಗೆ ನಾನು ಸಂಪೂರ್ಣವಾಗಿ ಬೆಂಬಲ ನೀಡಿ ಆ ವಿಷಯದ ಬಗ್ಗೆ ಹಲಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ನಾನು ಕೈಗಾರಿಕಾ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ನಮ್ಮ ಮುಧೋಳ್ ತಾಲ್ಲೂಕಿನ ಸೇಡಾಪುರ ಸೋಮಯ್ಯ ಷುಗರ್ ಫ್ಯಾಕ್ಟರಿ ಏನು ಇದೆ ಅಲ್ಲಿ ಕನ್ನಡಿಗರಿಗೆ ಸಾಕಷ್ಟು ಅನ್ಯಾಯವಾಗಿದೆ. ಆ ಸಕ್ಕರೆ ಕಾರ್ಖಾನೆಯಲ್ಲಿ ಯಾವ ಅಫೀಸರನ್ನು ನೋಡಿದರೂ ಕೂಡ ಮುಖ್ಯ ಪೋಸ್ಟ್‌ಗಳಿಗೆ ಮಹಾರಾಷ್ಟ್ರದವರನ್ನೇ ತಂದಿದ್ದಾರೆ ಮತ್ತು ಮ್ಯಾನ್ಯುಯಲ್ ಲೇಬರ್‌ಸ್‌ಗೂ ಮಹಾರಾಷ್ಟ್ರದವರನ್ನೇ ತಂದಿದ್ದಾರೆ ಮತ್ತು ಸಾವಿರಾರು ಬುಲಕ್ ಮತ್ತು ಚಕಡಿಗಳನ್ನು ಅಲ್ಲಿಂದಲೇ ತಂದಿದ್ದಾರೆ. ಮತ್ತು 2 ಸಾವಿರ ಕೂಲಿಗಾರರನ್ನು ಕೂಡ ಮಹಾರಾಷ್ಟ್ರದಿಂದಲೇ ತಂದಿದ್ದಾರೆ. ಆ ಕಾರ್ಖಾನೆ ಬಂದ್ ಆಗುವ ಸಮಯದಲ್ಲಿ 3 ನೇ ಕ್ಲಾಸ್ ನೌಕರರನ್ನು ಜಮಖಂಡಿ ಮತ್ತು ಮುಧೋಳ್ ತಾಲ್ಲೂಕಿನಿಂದ ತೆಗೆದುಕೊಂಡಿದ್ದಾರೆ. ಅವರಿಗೂ ಕೂಡ ನೋಟೀಸ್ ಕೊಟ್ಟು ಇನ್ನು ಮುಂದೆ ಆ ನೌಕರರನ್ನು ವಜಾ ಮಾಡಿದ್ದಾರೆ, ಆದುದರಿಂದ ನಮ್ಮ ಸರ್ಕಾರದವರು ಅವರಿಗೆ ಯಾವ ರೀತಿಯಾಗಿಯೂ ಸಹಾಯ ಮಾಡಕೂಡದು ಎಂದು ಈ ಸಮಯದಲ್ಲಿ ನಾನು ಹೇಳುತ್ತೇನೆ.

ಇನ್ನು 2ನೇದಾಗಿ ಫಾಲಿಫೈಬರ್ ಮತ್ತು ಪೇಪರ್ ಕಾರ್ಖಾನೆ ಹರಿಹರದಲ್ಲಿದೆ. ಈ ಕಾರ್ಖಾನೆ ಬಗ್ಗೆ ಮಾತನಾಡುವುದಾದರೆ ಆ ಪ್ರದೇಶದಲ್ಲಿ ಕನ್ನಡಿಗರು ಇದ್ದರೂ ಕೂಡ ಆ ಕಾರ್ಖಾನೆಗೆ ಟೈಪಿಸ್ಟ್ ಮತ್ತು ಮುಖ್ಯಾಧಿಕಾರಿಗಳನ್ನು ರಾಜಾಸ್ತಾನ ಮತ್ತಿತರ ಕಡೆಗಳಿಂದ ತಂದಿದ್ದಾರೆ. ಅವರೆಲ್ಲರೂ ಕೂಡ ಕನ್ನಡ ಭಾಷೆ ಅರಿಯದೇ ಇರುವವರು. ಆ ಕಾರ್ಖಾನೆಯಲ್ಲಿ ಫಾಲಿಫೈಬರ್ ಆಗಲಿ, ಪೇಪರ್ ಆಗಲಿ ಮನುಫ್ಯಾಕ್ಚರ್ ಆಗುವುದಿಲ್ಲ. ಅಲ್ಲಿ ಸಾವಿರಾರು ಮರಗಳನ್ನು ಕಡಿದು ಅದರಿಂದ ಪೌಡರ್ ಮಾಡಿ, ಬ್ಲೀಚ್ ಮಾಡಿ ಚೀಲಗಳಲ್ಲಿ ತುಂಬಿ ಅದನ್ನು ಬಿರ್ಲಾ ಕಂಪನಿಯವರಿಗೆ ಮಹಾರಾಷ್ಟ್ರಕ್ಕೆ ಕಳುಹಿಸುತ್ತಾರೆ. ಇದರಿಂದ ಸೇಲ್ಸ್ ಟ್ಯಾಕ್ಸ್ ಕೂಡ ದೊರೆಯುವುದಿಲ್ಲ. ಇದು ವಿಷಾದದ ಸಂಗತಿ.

ಇನ್ನು ಪಾಲಿಫೈಬರ್ ಕಾರ್ಖಾನೆಯವರು ಕನ್ನಡಿಗರಿಗೆ ಬಹಳಷ್ಟು ತ್ರಾಸ ಕೊಡುತ್ತಿದ್ದಾರೆ. ಆ ಕಾರ್ಖಾನೆಯಿಂದ ಸರ್ಕಾರಕ್ಕಾಗಲಿ, ಕನ್ನಡಿಗರಿಗಾಗಲಿ ಏನೂ ಉಪಯೋಗವಿಲ್ಲಾ. ಮತ್ತು ಆ ಕೊಳಚೆ ನೀರಿನಿಂದ ಜನಗಳಿಗೆ ಬಹಳಷ್ಟು ದೋಷವಾಗಿದೆ. ಅದುದರಿಂದ ಮಾನ್ಯ ಕೈಗಾರಿಕಾ ಮಂತ್ರಿಗಳು ಆ ಕಾರ್ಖಾನೆಯನ್ನು ಸಾಕಷ್ಟು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ನೇಕಾರರ ವಿಷಯ ಹೇಳಬೇಕಾದರೆ ಹಿಂದೂಸ್ತಾನದಲ್ಲಿ ಅವರಿಗೆ ಇದು ಒಂದು ಮುಖ್ಯ ಉದ್ಯೋಗ. ನೂರಾರು ಜನರು ಈ ಉದ್ಯೋಗವನ್ನು ಅವಲಂಬಿಸಿ ವಸ್ತ್ರಗಳನ್ನು ನೇಯುತ್ತಿದ್ದರು. ಈ ಉದ್ಯೋಗವನ್ನು ಗಂಡುಮಕ್ಕಳು, ಹೆಣ್ಣುಮಕ್ಕಳು ಎಲ್ಲರೂ ಕಲಿತುಕೊಂಡಿದ್ದರು. ಯಾರು ಕಲಿಸದೇ ಇದ್ದರೂ ಕೂಡ ಅವರೇ ಕಲೆತುಕೊಂಡು ಮನೆಮನೆಯಲ್ಲೂ ಈ ಕೆಲಸ ಮಾಡುತ್ತಿದ್ದರು. ಇದು ನೂರಾರು ವರ್ಷ ನಡೆದುಕೊಂಡು ಬಂದಿದೆ. ನೇಕಾರರಿಗೆ ನೇಯುವುದನ್ನು ಯಾರು ಕಲಿಸುವ ಹಾಗಿಲ್ಲ. ಇಂಥಾ ಒಂದು ಕೈಗಾರಿಕೆ ಈವೊತ್ತಿನ ದಿವಸ ಅವನತಿಗೆ ಇಳಿಯುತ್ತಿದೆ. ಈವೊತ್ತಿನ ದಿವಸ ಈ ಉದ್ಯೋದಗಲ್ಲಿ ತೊಡಗಿರುವವರು ಮೈಸೂರು ರಾಜ್ಯದಲ್ಲಿ 1,37,000 ಜನರು ತೊಡಗಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ 32,000 ಜನರು ತೊಡಗಿದ್ದಾರೆ. ಮೊದಲು ಮಗ್ಗಗಳು ಬಿಜಾಪುರ ಜಿಲ್ಲೆಯಲ್ಲಿ ಇತ್ತು. ಅನಂತರ ಬೆಳಗಾಂಗೆ ಹೋಯಿತು. ಈಗ ಬೆಳಗಾಂ ಜಿಲ್ಲೆಯಲ್ಲಿ 25 ಸಾವಿರ ಮಗ್ಗಗಳು ಇವೆ. ಎಲ್ಲಿಕಿಂತಲೂ ಕಡಿಮೆ ಎಂದರೆ ಕೂರ್ಗ ಜಿಲ್ಲೆ. ಆ ಜಿಲ್ಲೆಯಲ್ಲಿ 250 ಮಗ್ಗಗಳು ಇವೆ. ಯಾವತ್ತೂ ಕೂಡ ಬಿಜಾಪುರಜಿಲ್ಲೆ ಬರಗಾಲ ಪೀಡಿತ ಪ್ರದೇಶವಾಗಿದೆ ಎಂದು ಹೇಳಿದರೂ ಕೂಡ ಸಾಕಷ್ಟು ನಿಗಾ ಕೊಟ್ಟಿಲ್ಲ. ಆದುದರಿಂದ ನಮ್ಮ ಕೈಗಾರಿಕಾ ಮಂತ್ರಿಗಳು ಈ ಉದ್ಯಮದ ಬಗ್ಗೆ ಸಾಕಷ್ಟು ನಿಗಾ ಕೊಡಬೇಕು ಎಂದು ಹೇಳ ಬಯಸುತ್ತೇನೆ. ಮತ್ತು ಈ ಉದ್ಯಮಕ್ಕೆ ಒಂದು ಪ್ರತ್ಯೇಕವಾದ ಡೈರಕ್ಟರ್ ಆಫ್ ಹ್ಯಾಂಡ್‌ಲೂಮ್ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೂ ಆ ಬಗ್ಗೆ ವ್ಯವಸ್ಥೆ ಆಗಿಲ್ಲ. ಈ ಬಡ್ಜೆಟ್ಟಿನಲ್ಲಿ ಯಾವಹಣವನ್ನೂ ಕೂಡ ಅದಕ್ಕೆ ಹಿಡಿದಿಲ್ಲ. ಈ ವಿಚಾರವಲ್ಲಿ ನಾನು ಪದೇ ಪದೇ ಮನವಿ ಮಾಡಿಕೊಂಡಿದ್ದೇನೆ. ಅವರೂ ಏನೂಉಪಯೋಗವಾಗಿಲ್ಲ.

ಇನ್ನು ಸರ್ಕಾರದವರು ಯಾರನ್ ಡಿಪೋ ತೆಗೆಯುತ್ತೇವೆ ಎಂದು ಹೇಳಿದರು. ಆ ಪ್ರಕಾರ 7 ಯಾರನ್ ಡಿಪೋಗಳನ್ನು ಸರ್ಕಾರದವರು ತೆರೆದು ನೂಲನ್ನು ವಿತರಣೆ ಮಾಡಿದರು ಆದರೆ ಅವರು ಆ ನೂಲಿನ ವಿತರಣೆಯನ್ನು ಸರಿಯಾಗಿ ಮಾಡಲಿಲ್ಲಾ.

ಇನ್ನು ಈಗ ನೇಕಾರರು ಲೂಮ್ ಏನು ಇಟ್ಟಿದ್ದಾರೆ ಅವರಿಂದ ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ. ಏತಕ್ಕೆಂದರೆ ಅವರಿಗೆ ಸಾಕಾದಷ್ಟು ನೂಲನ್ನು ಕೊಟ್ಟಿಲ್ಲ. ಮತ್ತು ಈ ಬಗ್ಗೆ 15 ಸಾಮಾನ್ಯ ವೀವಿಂಗ್ ಸೆಂಟರ್ಸನ್ನು ತೆರೆಯುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಆ ಬಗ್ಗೆ ನಿಗಾ ಕೊಟ್ಟಿಲ್ಲಿ. ಮತ್ತು ಬನಹಟ್ಟಿ ಮತ್ತು ಇಡ್ಕಿಯಲ್ಲಿ ಒಂದು ಸೆಂಟರ್ ಮಾಡುತ್ತೇವೆಂದು ಹೇಳಿದ್ದರು. ಇಂದಿನವರೆಗೂ ಕೂಡ ಅದು ಆಗಲಿಲ್ಲ.

ಇನ್ನು ಡಿಸ್‌ಪ್ಲೇಸ್ಡ್ ವೀವರ್ಸ್‌ಗೆ 4 ಲಕ್ಷ ರೂಪಾಯಿ ಸಾಲವನ್ನು ಕೊಡುತ್ತೇವೆ ಎಂದು ಸರ್ಕಾರದವರು ಅಷ್ಯೂರೆನ್ಸ್ ಕೊಟ್ಟಿದ್ದರು. ಇಂದಿನವರೆಗೂ ಕೂಡ ಆ ನೇಯ್ಗೆಯವರಿಗೆ ಒಂದು ಪೈಸಾನೂ ಕೊಟ್ಟಿಲ್ಲ.

ಇನ್ನು ಬನಹಟ್ಟಿಯಲ್ಲಿ 9ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಸೈಜಿಂಗ್ ಪ್ಲಾಂಟ್ ಹಾಕುತ್ತೇವೆ ಎಂದು ಹೇಳಿದ್ದರು. ಆ ಬಗ್ಗೆ ಇಂದಿನವರೆಗೂ ಯಾವ ವ್ಯವಸ್ಥೆಯೂ ಆಗಲಿಲ್ಲಾ.

ಇನ್ನು ರಾಜ್ಯ ಮಂತ್ರಿಗಳಾದ ಶ್ರೀಮಾನ್ ರಾಥೋಡ್‌ರವರು ಮುಖ್ಯಮಂತ್ರಿಗಳ ಸಲಹೆ ಮೇಲೆ 4,5 ಮತ್ತು 6 ನೇ ತಾರೀಖು ಬಿಜಾಪುರ ತಾಲ್ಲೂಕಿನಲ್ಲಿ ಸಂಚಾರ ಮಾಡಿದರು. ರಾಮಾಪುರ, ಹುನಗುಂದ್, ಬನಹಟ್ಟಿ, ಚರ್ಚಲ್ ಬನಹಟ್ಟಿ, ಒಳಗೊಂಡ ಗ್ರಾಮಗಳಿಗೆ ಹೋಗಿ ಅವರ ಪರಿಸ್ಥಿತಿಯನ್ನು ಅರಿತುಕೊಂಡರು. ಅವರ ಜೊತೆಗೆ ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರನ್ನೂ ಕೂಡ ಕರೆದುಕೊಂಡು ಬಂದಿದ್ದರು. ಆಗ ಅವರು ಒಂದು ವರ್ಗಕ್ಕೆ 15 ಕೆ. ಜಿ. ನೂಲನ್ನು ವಿತರಣೆ ಮಾಡುತ್ತೇವೆ ಎಂದು ವಚನ ಕೊಟ್ಟು 15ದಿವಸ ಆದರೂ ಕೂಡ ಅದರ ವ್ಯವಸ್ಥೆ ಆಗಿಲ್ಲ. 5 ಪೌಂಡ್ ಕೂಡ ಸಿಕ್ಕುತ್ತಾ ಇಲ್ಲ. ಅವರು ಅಲ್ಲಿಗೆ ಬಂದಾಗ ಒಂದು ಮಾತು ಹೇಳಿದರು ಮೀನುಗಾರಿಕೆಗೆ ಯಾವ ರೀತಿಯಾಗಿ ಪ್ರತಿಯೊಂದು ಕುಟುಂಬಕ್ಕೆ ಇಂಟರೆಸ್ಟ್ ಫ್ರೀ ಲೋನ್ ಆಗಿ 250 ರೂಪಾಯಿ ಕೊಡುತ್ತಾರೋ ಅದೇ ರೀತಿಯಾಗಿ ನಿಮಗೆ ಕೊಡುವುದು ಅವಶ್ಯಕ ಎಂದು ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಅದು ಇಂದಿನವರೆಗೂ ನೇಕಾರರಿಗೆ ಆ ವ್ಯವಸ್ಥೆ ಆಗಲಿಲ್ಲ. ಮತ್ತು ಈ ಬಗ್ಗೆ ಮುಖ್ಯ ಮಂತ್ರಿಗಳಿಗೆ ಶ್ರೀಮಾನ್ ರಾಥೋಡ್‌ರವರು ಏನು ಒಂದು ರಿಪೋರ್ಟನ್ನು ಕೊಟ್ಟಿದ್ದಾರೋ ಅದರ ಪ್ರಸ್ತಾಪವೇ ಆಗಿಲ್ಲ. ಅವರ ಡಿಟೇಲ್ಸ್ ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಷಾರ್ಟ್ ನೋಟೀಸ್ ಕೊಶ್ಚನ್ ಕೂಡ ಕೊಟ್ಟಿದ್ದೇನೆ.

ಇನ್ನು ಗಂಜೀ ಕೇಂದ್ರಗಳನ್ನು ಬನಹಟ್ಟಿಯಲ್ಲಿ ತೆರೆದಿದ್ದಾರೆ. ಒಂದು ಸಂತೋಷದ ಸಂಗತಿ ಏನೆಂದರೆ ಇದಕ್ಕೆ ಮುಖ್ಯ ಮಂತ್ರಿಗಳ ರಿಲೀಫ್ ಫಂಡ್‌ನಲ್ಲಿ 3500 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಈಗ 500—700 ಜನ ನೇಕಾರರು ಫ್ರೀ ಕಿಚನ್ ಮಾಡುವ ಉದ್ಯಮದಲ್ಲ ಇದ್ದಾರೆ.

(ಶ್ರೀ ಪಿ. ಎಂ. ಬಂಗಿ)

ಆದುದರಿಂದ ಈ ಸಂದರ್ಭದಲ್ಲಿ ನಾನು ಸೂಚನೆ ಮಾಡುವುದು ಏನೆಂದರೆ ಅಂಬರ್ ಚರಕಾವನ್ನು ಪ್ರತಿಯೊಂದು ಹಳ್ಳಿಗೂ ಒದಗಿಸಿ ಕೊಟ್ಟು 40ನೇ ನಂಬರ್ ನೂಲನ್ನು ತೆಗೆಯುವ ಒಂದು ವ್ಯವಸ್ಥೆಯನ್ನು ಸಾಧ್ಯವಾದ ಮಟ್ಟಿಗೆ ಕೈಗಾರಿಕಾ ಮಂತ್ರಿಗಳು ಮಾಡ ಬೇಕೆಂದು ಈ ಸಮಯದಲ್ಲಿ ಅವರನ್ನು ಬೇಡಿಕೊಳ್ಳುತ್ತೇನೆ.

ಕೈಗಾರಿಕೆ ವಿಷಯದಲ್ಲಿ ಡ್ಯೂಯಲ್ ಕಂಟ್ರೋಲ್ ಇದ್ದ ಕಾರಣದಿಂದ ಕೈಗಾರಿಕಾ ಸೊಸೈಟಿ ಗಳು ಹಾಳಾಗುತ್ತಿರುತ್ತವೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಮತ್ತು ಕೋಆಪರೇಟಿವ್ ಡಿಪಾ ರ್ಟ್‌ಮೆಂಟ್, ಎರಡೂ ಡಿಪಾರ್ಟ್‌ಮೆಂಟ್‌ಗಳ ಹಿಡಿತ ಕೈಗಾರಿಕಾ ಸೊಸೈಟಿಗಳ ಮೇಲೆ ಇದ್ದ ಕಾರಣ ಕೈಗಾರಿಕ ಸಹಕಾರ ಸಂಘಗಳಲ್ಲಿ ನಷ್ಟವಾಗಲಿಕ್ಕೆ ಹತ್ತಿದೆ. ಎರಡು ಇಲಾಖೆಗಳ ಹಿಡಿತ ವನ್ನು ತಪ್ಪಿಸಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನ ಹಿಡಿತ ಮಾತ್ರ ಇಂಡಸ್ಟ್ರಿ ಸೊಸೈಟಿಗಳ ಮೇಲೆ ಇಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಡಿಸ್ಟ್ರಿಕ್ಟ್ ಪ್ಲಾನಿಂಗ್ ನಡೆದಿವೆ. ಆ ಕಾಲಕ್ಕೆ ಕೈಗಾರಿಕಾ ಮಂತ್ರಿಗಳು ಡಿಸ್ಟ್ರಿಕ್ಟ್ ಆಫೀಸರ್ ಗಳ ಪೈಕಿ ಕೈಗಾರಿಕಾ ತಜ್ಞರನ್ನು ಟ್ರೈನಿಂಗಿಗೆ ಕಳುಹಿಸಬೇಕು ಪ್ರತಿಯೊಂದು ತಾಲ್ಲೂಕಿನಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ, ಪ್ರತಿಯೊಂದು ನೇಕಾರರು ಇದ್ದ ಸ್ಥಳದಲ್ಲಿ ನೇಕಾರರ ಏಳಿಗೆಗೋಸ್ಕರ ಒಂದು ಯೋಜನೆ ಮಾಡಿ ಸಮಗ್ರ ಯೋಜನೆಯನ್ನು ಐದು ವರ್ಷಗಳಲ್ಲಿ ಕಾರ್ಯಾಚರಣೆಯಲ್ಲಿ ತರ ಬೇಕು ಎನ್ನುವ ಪ್ರೋಗ್ರಾಂ ಮಾಡಬೇಕೆಂದು ತಿಳಿಸಿ ನನಗೆ ಸ್ವಲ್ಪ ಸಮಯ ಕೊಟ್ಟಿದ್ದಕ್ಕೆ ಅಧ್ಯಕ್ಷ ರಿಗೆ ಆಭಾರ ಮನ್ನಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ, ಈ ಹೊತ್ತಿನ ದಿವಸ ಮಾನ್ಯ ಕೈಗಾರಿಕಾ ಮಂತ್ರಿಗಳು ತಮ್ಮ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ಕೆಲವು ಕಾರಣಗಳಿಂದ ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಮೊದಲನೆಯದಾಗಿ ನಮ್ಮ ದೇಶದಲ್ಲಿ ಈ 25 ವರ್ಷಗಳ ಜಾಡು, ದಾರಿ, ಯಾವ ರೀತಿ ನಡೆದು ಬಂದಿದೆಯೋ ಅದೇ ರೀತಿಯಲ್ಲಿ ಚಾಚೂ ತಪ್ಪದೆ ಮಾನ್ಯ ಕೈಗಾರಿಕಾ ಮಂತ್ರಿಗಳು ಕೂಡ ಅದೇ ಜಾಡಿನಲ್ಲಿ, ಅದೇ ದಾರಿಯಲ್ಲಿ ಪ್ರಯಾಣ ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ದೇಶದಲ್ಲಿ ರುವ ಬಂಡವಾಳಸ್ಥರ ಆಸ್ತಿ, ಅವರ ಬಂಡವಾಳ ಯಾವ ರೀತಿ ಬೆಳೆಯುತ್ತಿವೆ ಎನ್ನುವುದನ್ನು ಯಾರಾದರೂ ಅಲ್ಪಸ್ವಲ್ಪ ಮತಿ ಇರುವವರು ನೋಡಿದರೆ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ರುವ ಕೋಟ್ಯಾಂತರ ರೂಪಾಯಿ ಬಂಡವಾಳಸ್ಥರ ಆಸ್ತಿಯಾಗಿ, ಅವರ ಮನೆ ಬಾಗಿಲನ್ನು ಕಾಯು ತಕ್ಕ ಪರಿಸ್ಥಿತಿ ಬಂದಿದೆ. ಹೊಸ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದಮೇಲೆ ಅದನ್ನು ಬದಲಾವಣೆ ಮಾಡುವ ಪ್ರಯತ್ನವನ್ನು ಮಾಡಿದೆಯೇ ಎಂದರೆ ಇವರಿಂದ ಅದು ಖಂಡಿತ ಸಾಧ್ಯವಾಗಿಲ್ಲ. ಆ ಕಡೆ ಒಂದು ಸಣ್ಣ ಪ್ರಯತ್ನವನ್ನಾದರೂ ಈ ರಾಜ್ಯದ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲಿ ಮಾಡಿಲ್ಲ. ಅದಕ್ಕೆ ಬದಲಾಗಿ ನಾವು ಉದಾಹರಣೆಗಳಿಂದ ಹೇಳುವುದಾದರೆ ಗುತ್ತಿಗೆದಾರರಿಗೆ, ಬಂಡವಾಳದಾರರಿಗೆ ಯಾವ ರೀತಿ ಪ್ರೋತ್ಸಾಹ ಕೊಡಬೇಕು, ಯಾವ ರೀತಿ ಅವರ ಬಂಡವಾಳವನ್ನು ಬೆಳಸಬೇಕು ಎನ್ನುವುದು ಯಥೇಷ್ಟವಾಗಿ, ನಿರ್ಭಯವಾಗಿ ನಡೆಯುತ್ತಿದೆ. ಈ ಹೊತ್ತು ಬೆಳಗಾ ವಿಯಲ್ಲಿ ಒಂದು ಅಲ್ಯೂಮಿನಿಯಂ ಕಾರ್ಖಾನೆ ಇದೆ. ಅದಕ್ಕೆ ಒಂದು ಯೂನಿಟ್ಟಿಗೆ ಒಂದೂವರೆ ಪೈಸೆಯಂತೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದೆ. ಅದೇ ರೀತಿ ಬಿರ್ಲಾ ಕಂಪನಿಗಳಿಗೆ, ಪ್ರೋಲ ಫೈಬರ್ ಕಂಪೆನಿಗಳಿಗೆ ಯೂಕಲಿಪ್ಟಸ್ ಆಯಿಲ್ ಮರಗಳನ್ನು ಒಂದು ಟನ್ನಿಗೆ 24 ರೂಪಾಯಿಗಳಂತೆ ಕೊಡುತ್ತಿದೆ ಮತ್ತು ವೆಸ್‌ಕೋಸ್ಟ್ ಪೇಪರ್ ಮಿಲ್ಸ್‌ಗೆ ಯಾವ ರೀತಿಯಿಂದ ಬೊಂಬನ್ನು ಕೊಡುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ, ಅವರು ಬಂಡವಾಳವನ್ನು ಎಲ್ಲಿಂದ ತರುತ್ತಿದ್ದಾರೆಂದರೆ ರಿಸರ್ವ್ ಬ್ಯಾಂಕ್‌ನಿಂದ, ಯೂನಿಟ್ ಟ್ರಸ್ಟ್‌ನಿಂದ, ಎಲ್.ಐ.ಸಿ. ಯಿಂದ ತರುತ್ತಿದ್ದಾರೆ. ಸಾರ್ವಜನಿಕ ಸ್ವತ್ತನ್ನು ಅವರು ಸ್ವತ್ತನ್ನಾಗಿ ಮಾಡಿಕೊಂಡು ಅವರ ಬಂಡವಾಳ ವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಕಳ್ಳನಿಗೆ ಒಂದು ಪಿಳ್ಳೆ ನೆಪ ಎನ್ನುವಂತೆ ಇಂಡಸ್ಟ್ರಿಯಲೈಸೇಷನ್ ಮಾಡುವುದಕ್ಕೆ ಎಲ್ಲ ರಾಜ್ಯಗಳಲ್ಲಿಯೂ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಕೊಡಬಾರದೆ ಇರುವ ರಿಯಾಯಿತಿಗಳನ್ನು ಕೊಟ್ಟು, ಬಂಡವಾಳವನ್ನು ಕೊಟ್ಟು, ಕಚ್ಚಾ ಮಾಲು ಕೊಟ್ಟು ದೇಶ ದಲ್ಲಿರುವ ಸಂಪತ್ತನ್ನು ಸೂರೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಸಮಾಜವಾದದಲ್ಲಿ ಈ ಸರ್ಕಾರಕ್ಕೆ ನಂಬಿಕೆ ಇರುವುದಾದರೆ ಇವುಗಳನ್ನೆಲ್ಲ ಸರ್ಕಾರದ ವಶಕ್ಕೆ ತೆಗೆದುಕೊಂಡು ಗುತ್ತೇದಾರಿ

ಬಂಡವಾಳದಾರಿ ಪದ್ಧತಿಗೆ ಕೊನೆ ಕಾಣಿಸುತ್ತಾರೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಹೊರದೇಶಗಳಲ್ಲಿರುವ ಬಂಡವಾಳಸ್ಥರು ಕೂಡ ನಮ್ಮ ದೇಶವನ್ನು ಹಿಂದಿನಂತೆಯೇ ಸೂರೆ ಮಾಡುತ್ತಿದ್ದಾರೆ. ಇದನ್ನೆಲ್ಲ ತಡೆಗಟ್ಟಲು ಯಾವ ಹೆಜ್ಜೆಯನ್ನೂ ಇಟ್ಟಿಲ್ಲ. ಇವರು ದಿಟ್ಟ ಹೆಜ್ಜೆಯನ್ನು ಇಡುತ್ತೇವೆಂದು ಏನು ಜನತೆಗೆ ಹೇಳಿದ್ದಾರೆ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಇದ್ದರೆ ಎಲ್ಲವನ್ನೂ ರಾಷ್ಟ್ರೀಕರಣ ಮಾಡಿ ರಾಜ್ಯದ ಸ್ವತ್ತನ್ನಾಗಿ, ಜನತೆಯ ಸ್ವತ್ತನ್ನಾಗಿ ಮಾಡಬೇಕು ಎಂದು ಸೂಚಿಸುತ್ತೇನೆ.

ರಾಜ್ಯ ಸರ್ಕಾರ ಕೂಡ ಅನೇಕ ಕಾರ್ಖಾನೆಗಳನ್ನು ನಡೆಸುತ್ತಿದೆ. ಇದರಲ್ಲಿ ಒಂದು ಉದಾಹರಣೆ ಮಾಡಬೇಕು ಎಂದರೆ ಬೆಂಗಳೂರು ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೋರೇಟರಿಯನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಆ ಕಾರ್ಖಾನೆ ಬೆಂಗಳೂರಿನಲ್ಲಿ ಇರುವುದಿಲ್ಲ, ಹೈದರಾಬಾದಿಗೆ ಹೋಗುತ್ತಿದೆ ಎಂದು ಗೊತ್ತಾಗಿದೆ. ಇದು ದುರ್ದೈವ. ಅದೇ ರೀತಿಯಲ್ಲಿ ಈ ಹೊತ್ತು ಅನೇಕ ಕಾರ್ಖಾನೆಗಳಲ್ಲಿರುವ ಅಧಿಕಾರಿಗಳು ಕೂಡ ಅವರಲ್ಲಿ ನಂಬಿಕೆಯನ್ನು ಹೊಂದಿಲ್ಲ. ಸಮಾಜವಾದದಲ್ಲಿ ನಂಬಿಕೆ ಇಲ್ಲದ ಜನರನ್ನು ಇಟ್ಟಿರುವುದರಿಂದ, ಅವರು ಕಾರ್ಖಾನೆಗಳ ಅಭಿವೃದ್ಧಿಗೆ ದುಡಿಯದೆ ಇರುವುದರಿಂದ ಅನೇಕ ಕಾರ್ಖಾನೆಗಳು ಮುಚ್ಚುವಂಥ ಸ್ಥಿತಿಗೆ ಬರುತ್ತಿವೆ. ಇದರಲ್ಲಿ ಶ್ರೀ ಕೃಷ್ಣನ್ ಅವರು ಹೇಳಿದಂತೆ ರೇಂಕೋ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ? ಇದಕ್ಕೆ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ತತ್ವವೇ ಕಾರಣ ಎನ್ನುವುದನ್ನು ಸರ್ಕಾರ ಗಮನಿಸಬೇಕು. ಕೆಲವು ಕಾರ್ಖಾನೆಗಳಲ್ಲಿ ಉತ್ಪಾದನೆ ಕೂಡ ಚೆನ್ನಾಗಿ ಆಗುತ್ತಿದೆ. ಮುಖ್ಯವಾಗಿ ಎನ್.ಜಿ.ಎಫ್.ನಲ್ಲಿ ಪಂಪ್ ಸೆಟ್ ಟ್ರಾನ್ಸ್‌ಫಾರ್ಮರುಗಳು ಇವುಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಇವನ್ನೆಲ್ಲ ಇತರರಿಗೆ ಮಾರಾಟ ಮಾಡುತ್ತಿದ್ದಾರೆ, ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದಕ್ಕೆ ಬದಲಾಗಿ ಕ್ವಾಸಿ ಗವರ್ನ್‌ಮೆಂಟ್ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಇವುಗಳಿಗೆಲ್ಲ ಕಡ್ಡಾಯವಾಗಿ ಸರ್ಕಾರಿ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ವಸ್ತುಗಳನ್ನೇ ಉಪಯೋಗಿಸಬೇಕು, ಅವುಗಳನ್ನು ಕೊಂಡುಕೊಳ್ಳಬೇಕು ಎನ್ನುವ ನೀತಿಯನ್ನು ಸರ್ಕಾರ ಅನುಸರಿಸಬೇಕೆಂದು ನಾನು ಸೂಚಿಸುತ್ತೇನೆ.

ಗುತ್ತೇದಾರರಿಂದ ರಾಷ್ಟ್ರದ ಮತ್ತು ರಾಜ್ಯದ ಜನತೆಯ ಆರೋಗ್ಯಕ್ಕೆ ಅನಾಹುತವಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯಿಂದ ಅದರ ಐದಾರು ಮೈಲಿ ಸುತ್ತ ಇರುವ ಪ್ರದೇಶದಲ್ಲಿ ಸಿಮೆಂಟ್ ಧೂಳು ತುಂಬಿ ತೆಂಗಿನ ಮರಗಳಾಗಲಿ, ಯಾವುದೇ ಬೆಳೆಯಾಗಲಿ ಸರಿಯಾಗಿ ಆಗದೆ ಇರುವಂಥದ್ದನ್ನು ನೋಡಿದ್ದೇವೆ. ಆ ಕಂಪೆನಿಯವರು ಮೂರು ನಾಲ್ಕು ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಪ್ಲಾಂಟ್ ಹಾಕುವುದಕ್ಕೆ ತಂದಿದ್ದಾರೆ, ಅದನ್ನು ಹಾಕಿ ಸಿಮೆಂಟ್ ಧೂಳು ಬಾರದೆ ಇರುವ ಹಾಗೆ ಮಾಡುತ್ತಾರೆಂದು ಹೇಳಿದ್ದಾರೆ. ಈ ಕಾರ್ಖಾನೆಯಿಂದ ಸಿಮೆಂಟ್ ಧೂಳು ಹೊರಗೆ ಬಾರದ ಹಾಗೆ ಮಾಡಬೇಕೆಂದು ಒಂದು ನಿಬಂಧನೆಯನ್ನು ಹೊರಿಸಿ ಅವರು ಆ ನಿಬಂಧನೆಗಳಿಗೆ ಕಟ್ಟು ಬೀಳುವ ಹಾಗೆ ಮಾಡಿ ಸುತ್ತ ಮುತ್ತ ಇರತಕ್ಕ ರೈತರಿಗೆ ಅನುಕೂಲವಾಗುವಂತೆ ಏಕೆ ಮಾಡಬಾರದು ಎಂದು ಕೇಳುತ್ತೇನೆ. ಅದೇ ರೀತಿ ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಹುಳುಗಳಿಂದ ಎಣ್ಣೆ ತೆಗೆಯತಕ್ಕ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಹೊರಟಿದ್ದಾರೆ, ಅಲ್ಲಿಯ ಜನತೆ ನಮಗೆ ಇಂಥ ಕಾರ್ಖಾನೆ ಬೇಕಾಗಿಲ್ಲ, ನಮ್ಮ ಊರಿನ ಪಕ್ಕದಲ್ಲಿ ಎರಡು ಮೂರು ಫರ್ಲಾಂಗ್ ದೂರದಲ್ಲಿ ಈ ಕಾರ್ಖಾನೆ ಇರುವುದರಿಂದ ನಮ್ಮ ಆರೋಗ್ಯಕ್ಕೆ ಕೂಡ ತೊಂದರೆಯಾಗುವುದಲ್ಲದೆ ನಮಗೆ ರೇಷ್ಮೆ ಹುಳ ಕೂಡ ಸಾಕುವುದಕ್ಕೆ ಆಗುವುದಿಲ್ಲವೆನ್ನುವ ದೂರನ್ನು ಸರ್ಕಾರಕ್ಕೆ ಕೊಟ್ಟರೂ ಕೂಡ ಅಧಿಕಾರಿಗಳು ಸುಳ್ಳು ಮಾಹಿತಿಯನ್ನು ಒದಗಿಸಿ ಕಾರ್ಖಾನೆಗೆ ಅವಕಾಶ ಕೊಟ್ಟಿದ್ದಾರೆ.

5-00 P. M.

ನಮ್ಮ ಕ್ಷೇತ್ರದ ಬಳಿ ಪ್ಯೂಪಾ ಆಯಿಲ್ ಫ್ಯಾಕ್ಟರಿ ಇದೆ. ಇದರಿಂದ ಇಲ್ಲಿನ ರೈತರಿಗೆ ಅನಾಹುತಗಳಾಗುತ್ತಿವೆ. ಇದನ್ನು ಸರಿಯಾಗಿ ವ್ಯವಸ್ಥಿತವಾಗಿ ನಡೆಯುವಂತೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಎರಡು ಮೂರು ಕಡೆಗಳಲ್ಲಿ ಬೆಂಗಳೂರನ್ನು ಬಿಟ್ಟು ಕೈಗಾರಿಕೆಗಳನ್ನು ಮಾಡಲು ಅವಕಾಶಗಳಿವೆ. ಹಾಗೆ ಕೈಗಾರಿಕೆ ಸ್ಥಾಪನೆ ಮಾಡಲು ಮುಂದೆ ಬರುವವರಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ನಮ್ಮ ರಾಜ್ಯದಲ್ಲಿರುವ ಸಿರಿಕಲ್ಚರು ಇಂಡಸ್ಟ್ರೀ ಫಾರಿನ್ ಎಕ್ಸ್‌ಚೇಂಜು ಸಂಪಾದನೆ ಮಾಡಿಕೊಡುವಂತಹ ಕೈಗಾರಿಕೆಯಾಗಿದೆ, ಇದಕ್ಕಾಗಿ ನಮ್ಮ ರೇಷ್ಮೆ ಬೆಳೆಯುವವರಿಗೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಡು

(ಶ್ರೀ ಸಿ. ಬೈರೇಗೌಡ)

ವುದು ಅಗತ್ಯ, ಹಾಗೆ ಮಾಡಿದರೆ ರೇಷ್ಮೆಯನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಬೆಳೆಯಲು ಸಾಧ್ಯವಾಗುತ್ತದೆ, ಕೇಂದ್ರ ಸರ್ಕಾರದವರು ರೇಷ್ಮೆ ಅಭಿವೃದ್ಧಿಗಾಗಿ ಸುಮಾರು 80 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದರ ಮೂಲಕ ರಾಜ್ಯ ಸರ್ಕಾರದವರೂ ಸಹಾಯ ಪಡೆದು ರೇಷ್ಮೆ ಅಭಿವೃದ್ಧಿಗೆ ಸಾಕಷ್ಟು ಉತ್ತೇಜನ ಕೊಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಹಾಗೆ ಮಾಡದೇ ಹೋದರೆ ರೇಷ್ಮೆ ಕೈಗಾರಿಕೆ ಮುಂದೆ ಬರಲು ಸಾಧ್ಯವಿಲ್ಲ. ಈ ಕ್ರಾಷ್ ಪ್ರೋಗ್ರಾಂನ್ನು ನಮ್ಮ ರಾಜ್ಯದಲ್ಲೂ ಆದಷ್ಟು ಜಾಗ್ರತೆ ತಂದು ಇದರ ಮೂಲಕ ರೀಲರುಗಳಿಗೆ ಹಾಗೂ ಮೂರು ನಾಲ್ಕು ಕೋಟಿ ಗೂಡುಗಳನ್ನು ಇಟ್ಟುಕೊಂಡಿರುವ ಬೇಸಾಯಗಾರರಿಗೆ ಸಹಾಯ ಮಾಡಬೇಕು ಮತ್ತು ಇವರಿಗೆ ಬೇಕಾಗುವ ಎಲ್ಲ ಸಹಾಯ ಸೌಲಭ್ಯಗಳನ್ನು ಒದಗಿಸಿ ಕೊಟ್ಟರೆ ನಮ್ಮ ದೇಶಕ್ಕೆ ಹೆಚ್ಚು ಫಾರೀನ್ ಎಕ್ಸ್‌ಚೇಂಜು ಸಿಗಲು ಅವಕಾಶವಾಗುತ್ತದೆ ಮತ್ತು ಹೆಚ್ಚು ರೇಷ್ಮೆ ಉತ್ಪಾದನೆ ಮಾಡಲು ಅವಕಾಶವಾಗುತ್ತದೆ, ನಮ್ಮ ಇಂಡಿಯಾ ದೇಶದಲ್ಲೇ ಶೇಕಡಾ ಎಂಬತ್ತರಷ್ಟು ರೇಷ್ಮೆ ನಮ್ಮ ಮೈಸೂರು ರಾಜ್ಯದಲ್ಲಿ ಬೆಳೆಯುತ್ತದೆ, ಇದಕ್ಕೆ ಹೆಚ್ಚು ಸಹಾಯ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುವುದು ಅವಶ್ಯಕವಾಗಿದೆ. ರೇಷ್ಮೆಯಂತೆ ನಮ್ಮ ಕೋಲಾರದ ಸುತ್ತಮುತ್ತ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದಾರೆ, ಇವರಿಗೆ ಸಾಕಷ್ಟು ರಕ್ಷಣೆ ಕೊಟ್ಟು ಇದನ್ನೂ ಅಭಿವೃದ್ಧಿ ಮಾಡಿದರೆ ಇದರಿಂದ ಹೆಚ್ಚು ಅನುಕೂಲವಾಗುತ್ತದೆ. ಇಷ್ಟು ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗೋಪಿನಾಥ್ ಆರ್. ಸಾಂದ್ರ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಶೀಲ ಸಂಪನ್ನರೂ ಹಾಗೂ ಕುಶಲರಾಗಿರುವ ಯುವಕರೂ ಆಗಿ ಹೊಸ ಕೈಗಾರಿಕಾ ಖಾತೆಯ ಹೊರೆಯನ್ನು ಹೊತ್ತಿರುವ ಶ್ರೀಮಾನ್ ಕೃಷ್ಣರವರು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಮತ್ತು ಅವರಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಹಾಗೆ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಸರಕಾರದ ಮುಂದೆ ಇಡಬೇಕೆಂದು ಆಶಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಔದ್ಯೋಗಿಕ ಪ್ರಗತಿ ನಮ್ಮ ರಾಜ್ಯದಲ್ಲಾಗಬೇಕಾದರೆ ಇದರ ಬಗ್ಗೆ ಸರ್ವೆ ಮಾಡಬೇಕಾಗಿದೆ. ಇಂತಹ ಸರ್ವೆ ಕೆಲಸವನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ವುಡ್ ಬೇಸ್ಡ್ ಇಂಡಸ್ಟ್ರೀ ಅಗ್ರಿಕಲ್ಚರು ಬೇಸ್ಡ್ ಇಂಡಸ್ಟ್ರೀ ಹಾಗೂ ಇನ್ನಿತರ ಇಂಜಿನೀಯರಿಂಗು ಇಂಡಸ್ಟ್ರೀಗಳು ಯಾವ ಯಾವ ಊರಿನಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಪ್ರಾರಂಭಿಸಬೇಕು ಅವುಗಳ ಒಂದು ಯೋಜನೆ ಮಾಡಬೇಕು, ಮತ್ತು ಅಂತಹ ಕೈಗಾರಿಕೆಗಳಲ್ಲಿ ಜನರಿಗೆ ಉದ್ಯೋಗಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಯಾವುದೇ ಯೋಜನೆಯನ್ನು ತಂದರೂ ಅದನ್ನು ಕಾರ್ಯರೂಪದಲ್ಲಿ ಬರುವಂತೆ ಮಾಡಬೇಕು. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಜನ ಔದ್ಯೋಗಿಕ ಕ್ಷೇತ್ರದಲ್ಲಿ ಉದ್ಯಮಗಳನ್ನು ಪ್ರಾರಂಭಿಸಬೇಕೆಂದು ಹವಣಿಸುತ್ತಿದ್ದಾರೆ, ಆದರೆ ಅವರಿಗೆ ಬೇಕಾದ ಸಹಾಯ ಸವಲತ್ತುಗಳನ್ನು ಸಕಾಲದಲ್ಲಿ ಒದಗಿಸಿಕೊಡುತ್ತಿಲ್ಲ ಇದರಿಂದ ಅವರಿಗೆ ಸಹಾಯ ಸಿಗುತ್ತಿಲ್ಲ. ಯಾವುದೇ ಕ್ಷೇತ್ರ ನೋಡಲಿ, ಮೇಜರು ಇಂಡಸ್ಟ್ರೀಗಳು ಡೆವಲಪ್ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮೇಜರ್ ಇಂಡಸ್ಟ್ರೀ ಆಗಬಾರದು ಎಂದು ಹೇಳುತ್ತಿಲ್ಲ. ಆದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳನ್ನು ನಮ್ಮ ರಾಜ್ಯದಲ್ಲಿ ಮಾಡಿದರೆ ಅದರಿಂದ ಸಾಕಷ್ಟು ಪ್ರಮಾಣದಲ್ಲಿ ಜನರಿಗೆ ಉದ್ಯೋಗಾವಕಾಶಗಳು ಸಿಗುತ್ತವೆ. ಆದರೆ ಇಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀನಲ್ಲಿ ಕೆಲಸ ಮಾಡುವ ಅಧಿಕಾರಿಗಳಿಂದ ಜನರಿಗೆ ಸಾಕಷ್ಟು ಸಹಾಯ ಸೌಕರ್ಯಗಳು ದೊರಕುತ್ತಿಲ್ಲ. ಯಾರಾದರೂ ಉದ್ಯಮಿಗಳು ಒಂದು ಸಣ್ಣ ಇಂಡಸ್ಟ್ರೀ ಮಾಡಬೇಕೆಂದು ಸಲಹೆ ಕೇಳಲು ಅಧಿಕಾರಿಗಳ ಬಳಿಗೆ ಬಂದರೆ ಅವರಿಗೆ ನಿಮ್ಮ ಇಂಡಸ್ಟ್ರಿ ಸರಿಯಾಗಿ ಆಗುತ್ತೋ ಇಲ್ಲವೋ ಮತ್ತು ಎಷ್ಟು ಹಣ ಇದಕ್ಕೆ ನೀವು ಹಾಕುತ್ತೀರಿ ಎಂದು ಅವರನ್ನೇ ಕೇಳುತ್ತಾರೆ ಮತ್ತು ಅವರಿಗೆ ಸರಿಯಾದ ಸಲಹೆಗಳನ್ನು ಕೊಡುತ್ತಿಲ್ಲ. ಅಧಿಕಾರಿಗಳು ಯಾವ ಯಾವ ಕಡೆಗಳಲ್ಲಿ ಎಂತಹ ಇಂಡಸ್ಟ್ರಿಗಳು ಆಗಬೇಕು ಎನ್ನುವುದರ ಒಂದು ಸಮಗ್ರ ಯೋಜನೆಯನ್ನು ಇಲ್ಲಿ ತಯಾರು ಮಾಡಿ ಇಟ್ಟರೆ ಇದರಿಂದ ಉದ್ಯಮ ಮಾಡಲು ಬರುವವರಿಗೆ ಇದರ ಎಲ್ಲ ವಿವರಗಳನ್ನೂ ಕೊಡಲು ಅನುಕೂಲವಾಗುತ್ತದೆ ಮತ್ತು ಯಾವ ವೃತ್ತಿ ಎಲ್ಲಿ ಮಾಡಬಹುದು ಎನ್ನುವುದೂ ಅವರಿಗೆ ತಿಳಿಯಲು ಅನುಕೂಲವಾಗುತ್ತದೆ. ಆದರೆ ಇಂದು ಕೈಗಾರಿಕಾ ಇಲಾಖೆಗಳಲ್ಲಿರುವ ಅಧಿಕಾರಿಗಳಲ್ಲಿ ಒಂದು ರೀತಿಯಾದ ಹೊಸ ಮನೋ ವೃತ್ತಿ ಬೆಳೆಯುತ್ತಿದೆ ಎಂದು ನಾನು ಕೇಳುತ್ತೇನೆ. ಇದನ್ನು ಸರಿಪಡಿಸಿ ಎಲ್ಲ ಉದ್ಯಮಿಗಳಿಗೂ ಸರಿಯಾದ ಸಹಕಾರ ಸೌಕರ್ಯಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕೆಂದು ಪ್ರಯತ್ನಗಳು ಆಗಿರುತ್ತಿರುವುದು ಕಂಡು ಬರುತ್ತಿದೆ. ಹೊಸದಾಗಿ ಸಕ್ಕರೆ ಕಾರ್ಖಾನೆ ಮಾಡಬೇಕಾದರೆ ಅದರ ಬಗ್ಗೆ ಅನೇಕ ವಿಚಾರಗಳನ್ನು ಪರಿಶೀಲಿಸಬೇಕಾಗಿದೆ. ಉತ್ತರ ಪ್ರದೇಶದಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳಿವೆ, ಇಂದು ಸಕ್ಕರೆ ಕಾರ್ಖಾನೆ ಆಗಬೇಕಾದರೆ ಇದಕ್ಕೆ ಕಬ್ಬು ಬೆಳೆ ಹೆಚ್ಚಾಗಬೇಕು ಮತ್ತು ಈ ಬೆಳೆಗೆ ಸಾಕಷ್ಟು ನೀರು ಹೆಚ್ಚು ಬೇಕಾಗುತ್ತದೆ. ಇಂದು ಈ ಪ್ರದೇಶದಲ್ಲಿ ಎಷ್ಟು ಅಕ್ಕಿ ಹಾಗೂ ಗೋಧಿ ಬೆಳೆ ಮಾಡಬೇಕೆಂದು ಅದಕ್ಕೆ ನೀರು ಉಪಯೋಗಿಸಿ ಮಾಡುತ್ತಿದ್ದರೋ ಅದನ್ನು ಬಿಟ್ಟು ಕಬ್ಬು ಬೆಳೆಯುವ ಪ್ರದೇಶವನ್ನು ಹೆಚ್ಚು ಮಾಡಿ ಅದಕ್ಕೆ ನೀರು ಒದಗಿಸಿದುದರಿಂದ ಇಲ್ಲಿ ಅಕ್ಕಿ ಹಾಗೂ ಗೋಧಿಯ ಉತ್ಪತ್ತಿ ಕಡಿಮೆಯಾಯಿತು. ಕಬ್ಬು ಬೆಳೆಯೇನೋ ಹೆಚ್ಚು ಬಂತು. ಇಂದು ನಮ್ಮ ರಾಜ್ಯದಲ್ಲಿ ಶೇಕಡಾ 13 ರಷ್ಟು ಮಾತ್ರ ನೀರಾವರಿ ಪ್ರದೇಶಗಳಾಗಿವೆ. ಇನ್ನು ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ತಿ ಮಾಡಿದರೂ ಮುಂದೆ ಇದು ಶೇಕಡಾ 20 ಅಥವಾ 21 ರಷ್ಟು ಆಗಬಹುದು. ಒಂದು ಎಕರೆಯಲ್ಲಿ ಕಬ್ಬು ಬೆಳೆಯಬೇಕಾದರೆ ಇದಕ್ಕೆ 12 ತಿಂಗಳ ಕಾಲವೂ ನೀರನ್ನು ಒದಗಿಸಿ ಕಬ್ಬು ಬೆಳೆ ಮಾಡಬೇಕು, ಆದರೆ ಗೋಧಿ ಅಥವಾ ಇನ್ನಿತರ ಬೆಳೆಗಳನ್ನು ಮಾಡಬೇಕಾದರೆ ನಾಲ್ಕೈದು ತಿಂಗಳು ನೀರು ಕೊಟ್ಟರೆ ಇದರ ಬೆಳೆ ಮಾಡಲು ಅನುಕೂಲವಾಗುತ್ತದೆ. ಇದಕ್ಕೆ ಹೆಚ್ಚು ನೀರಿನ ಅವಶ್ಯಕತೆ ಇಲ್ಲ. ಸಕ್ಕರೆ ಕಾರ್ಖಾನೆಗಳನ್ನು ಮಾಡುವುದಕ್ಕೆ ಪೂರ್ವದಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇನ್ನೂ ಮಾಡಬೇಕು ಇದಕ್ಕೆ ಸಾಕಷ್ಟು ನೀರು ಸಿಗುತ್ತದೆಯೋ ಇಲ್ಲವೇ, ಇದರಿಂದ ಬೇರೆ ಬೆಳೆಗಳಿಗೆ ಯಾವುದೇ ರೀತಿಯಾದ ಧಕ್ಕೆ ಆಗುತ್ತದೆಯೋ ಇವನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿಕೊಂಡು ಇಂತಹ ಸಕ್ಕರೆ ಕಾರ್ಖಾನೆಗಳನ್ನು ಮಾಡಲು ಅನುಮತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಂಡಸ್ಟ್ರೀಗಳು ಆಗಿರುವುದು ಕಡಿಮೆ. ಇಲ್ಲಿ ಇಂಡಸ್ಟ್ರೀಗಳು ಆಗಲು ಅವಕಾಶವನ್ನು ಕಲ್ಪನೆ ಮಾಡಿಕೊಡಬೇಕು, ಗ್ರಾಮಾಭಿವೃದ್ಧಿ ಯೋಜನೆಗಳನ್ನು ಮಾಡಿಕೊಂಡು ಅದರಂತೆ ಇಂಡಸ್ಟ್ರೀಗಳನ್ನೂ ಮಾಡಬೇಕು. ಮುಖ್ಯವಾಗಿ ನಾನು ಇಲ್ಲಿ ನೇಕಾರರ ಸಮಸ್ಯೆ ಬಗ್ಗೆ ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಸರಕಾರದವರು ನೇಕಾರರಿಗೆ ಸಾಕಷ್ಟು ಪ್ರಮಾಣದಲ್ಲಿ ಸಹಾಯ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ, ಹೀಗೆ ಪ್ರಯತ್ನ ಮಾಡುವುದರ ಜೊತೆಗೆ ಬಿಜಾಪುರ ಹಾಗೂ ಧಾರವಾಡ ಜಿಲ್ಲೆಯಲ್ಲಿರುವ ಹಳ್ಳಿಗಳಲ್ಲಿ ಇರುವ ನೇಕಾರರುಗಳಿಗೆ ಸಾಕಷ್ಟು ಸೌಲಭ್ಯಗಳು ಇಂದು ಸಿಗುತ್ತಿಲ್ಲ. ಇದುವರೆಗೆ ಯಾವ ರೀತಿ ಸಹಾಯ ಸಿಗಬೇಕಾಗಿತ್ತೋ ಅಂತಹ ಸಹಾಯ ಸೌಕರ್ಯಗಳು ನೇಕಾರರುಗಳಿಗೆ ಸಿಗಲಿಲ್ಲ, ಯಾವರೀತಿ ದೊರಕಬೇಕಾಗಿತ್ತೋ ಅದಕ್ಕೆ ತಕ್ಕಂತೆ ಸೌಲಭ್ಯ ಸಿಗುತ್ತಿಲ್ಲ, ಎಲ್ಲ ಪ್ರದೇಶಗಳಲ್ಲಿರುವ ನೇಕಾರರುಗಳಿಗೂ ಸಹಾಯ ದೊರಕಬೇಕು, ಈ ದೃಷ್ಟಿಯಿಂದ ನಾನು ಸರಕಾರದಲ್ಲಿ ವಿನಂತಿ ಮಾಡುವುದು ನೂಲಿನ ವಿತರಣೆ ಸರಿಯಾಗಿ ಆಗುತ್ತಿಲ್ಲ. ಆದುದರಿಂದ ನೇಕಾರರು ಎಲ್ಲಿಯೋ ಇರಲಿ ಕೆಲಸ ಮಾಡಲಿ ಮಾಡದೇ ಇರಲಿ ಅವರಿಗೆಲ್ಲಾ ಸರಿಯಾಗಿ ನೂಲು ವಿತರಣೆಯಾಗುವಂತೆ ಸರಕಾರ ಸರಿಯಾದ ವ್ಯವಸ್ಥೆ ಮಾಡಬೇಕು, ಇದರ ಕಡೆಗೆ ಸರಕಾರ ಹೆಚ್ಚು ಲಕ್ಷ ಕೊಡಬೇಕು.

ಇನ್ನು ಇದರ ಜೊತೆಗೆ ಕರ್ನಾಟಕ ಕ್ಯಾಲೆಂಡರಿಂಗ್ ಅಂಡ್ ಫಿನಿಷಿಂಗ ಪ್ಲಾಂಟು ಇದೆ. ಇದರ ಮೂಲಕ ನೇಕಾರರನ್ನು ಅಭಿವೃದ್ಧಿ ಮಾಡಲು 11 ಲಕ್ಷದ ಯೋಜನೆ ಮಾಡಿ ಇದಕ್ಕಾಗಿ ಕರ್ನಾಟಕ ಕ್ಯಾಲೆಂಡರಿಂಗ್ ಅಂಡ್ ಫಿನಿಷಿಂಗ್ ಸೊಸೈಟಿ ಎಂದು ಒಂದು ಸಂಸ್ಥೆ ಮಾಡಿ ಇದರ ಮೂಲಕ ಈಗಾಗಲೇ ಆರು ಲಕ್ಷ ರೂಪಾಯಿ ಸಹಾಯ ಕೊಟ್ಟಿದ್ದಾರೆ, ಇನ್ನೂ ಮೂರು ನಾಲ್ಕು ಲಕ್ಷ ಕೊಟ್ಟಿಲ್ಲ. ಇದರಿಂದ ಸುಮಾರು ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳಷ್ಟು ಹೊರೆ ಇವರ ಮೇಲೆ ಬರುತ್ತದೆ. ಇದರಿಂದ ನೈನರು ಕೆಲಸಗಳನ್ನು ಮಾಡಲು ಸಹಾಯವಾಗಿದೆ, ಇನ್ನೂ ಹೆಚ್ಚು ಪ್ರೊಡಕ್ಷನ್ ಮಾಡಬೇಕಾದರೆ ನೇಕಾರರುಗಳಿಗೆ ಹೆಚ್ಚು ಸಹಾಯ ಸೌಲಭ್ಯಗಳನ್ನು ಒದಗಿಸಲು ಇಂತಹ ಕೋಆಪರೇಟಿವ್ ಸೊಸೈಟಿಯನ್ನು ಜಾಸ್ತಿ ಮಾಡಿ ಹೆಚ್ಚು ಹಣ ಒದಗಿಸಬೇಕೆಂದು ಮತ್ತು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಮೈಸೂರು ಸ್ಟೇಟು ಡೆವಲಪ್‌ಮೆಂಟು ಕಾರ್ಪೋರೇಷನ್ ಎಂದು ಮಾಡಿದ್ದಾರೆ, ಇದರ ಮೂಲಕ ಹಣದ ಸಹಾಯ ಕೆಲವು ಕಡೆಗಳಿಗೆ ಮಾತ್ರ ಸಿಗುತ್ತಿದೆ. ಇದಕ್ಕೆ ಅನುಕೂಲವಾಗುವಂತೆ ಇಂತಹ ಸ್ಟೇಟು ಇಂಡಸ್ಟ್ರಿಯಲ್ ಕಾರ್ಪೋರೇಷನ್‌ನ ಬ್ರಾಂಚನ್ನು ಬೇರೆ ಕಡೆಗಳಲ್ಲಿ ಮಾಡಬೇಕೆಂದು ಸಲಹೆ ಮಾಡಿದ್ದೇವೆ, ಈಗಾಗಲೇ ಧಾರವಾಡದಲ್ಲಿ ಒಂದು ಬ್ರಾಂಚು ಮಾಡಿದ್ದಾರೆ, ಇದರಿಂದ ಇಲ್ಲಿನ ಉದ್ಯಮಿಗಳಿಗೆ ಸ್ವಲ್ಪಮಟ್ಟಿಗೆ ಸಹಾಯವಾಗಿದೆ, ಇದರಂತೆ ಒಂದು ಬ್ರಾಂಚನ್ನು ಹುಬ್ಬಳ್ಳಿಯಲ್ಲೂ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡುತ್ತೇನೆ, ಬೆಳಗಾಂನಲ್ಲಿ ಕೂಡ ಒಂದು ಬ್ರಾಂಚು ಮಾಡಬಹುದು, ಇದರಿಂದ

(ಶ್ರೀ ಗೋಪಿನಾಥ್ ಆರ್. ಸಾಂದ್ರ)

ಅಲ್ಲಿನ ಉದ್ಯಮಿಗಳಿಗೆ ಬಹಳ ಸಹಾಯವಾಗುತ್ತದೆ, ಆದುದರಿಂದ ಇಂಡಸ್ಟ್ರಿಯಲ್ ಫೈನಾನ್ಷಿಯಲ್ ಕಾರ್ಪೋರೇಷನ್‌ನ ಒಂದು ಬ್ರಾಂಚನ್ನು ಇತರ ಜಿಲ್ಲೆಗಳಲ್ಲೂ ಆರಂಭ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇದರ ಜೊತೆಗೆ ಮತ್ತೊಂದು ಮುಖ್ಯವಾದ ಅಂಶವೆಂದರೆ, ಇಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕ್‌ಗಳು ಇವೆ, ಆದರೆ ಇವುಗಳ ಆರ್ಥಿಕ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿದೆ. ಯಾರಾದರು ಉದ್ಯಮ ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಕೊಡಲು ಇವರಲ್ಲಿ ಹಣ ಇಲ್ಲವಾಗಿದೆ, ಈ ಕಾರಣದಿಂದ ಈ ಬ್ಯಾಂಕ್‌ಗಳಿಗೆ ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸುವ ಒಂದು ಕಾರ್ಯವನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ

ಇವತ್ತಿನ ದಿವಸ ನೇಕಾರರ ಒಂದು ಬವಣೆಯನ್ನು ನಾವು ಹೋಗಲಾಡಿಸಲೇಬೇಕಾಗಿದೆ. ಇಲ್ಲದಿದ್ದರೆ ಮಾನ್ಯ ಕಬಾಡಿಯವರು ಹೇಳಿದಂತೆ ಇನ್ನು ಹತ್ತು ಹದಿನೈದು ದಿವಸಗಳಲ್ಲಿ ಅವರು ಸಾಯುವ ಪರಿಸ್ಥಿತಿಗೆ ಬರಬಹುದು. ಇಂದು ಅವರು ಚಳುವಳಿ ಮಾಡುತ್ತಿದ್ದಾರೆ ಮತ್ತು ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಕಾರಣದಿಂದ ಅವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಅವರ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ನೇಕಾರರ ಮುಖಂಡರನ್ನು ಕರೆಸಿಕೊಂಡು ಅವರ ಬೇಡಿಕೆಗಳನ್ನು ತಿಳಿದುಕೊಂಡು ಪರಿಹಾರ ಒದಗಿಸಬೇಕೇ ಹೊರತು, ಅಧಿಕಾರಿಗಳು ತಯಾರು ಮಾಡಿದ ಯೋಜನೆಯನ್ನು ಏನಾದರು ಕಾರ್ಯರೂಪಕ್ಕೆ ತಂದರೆ ಅದರಿಂದ ಟೀಕಿಗೆ ಗುರಿಯಾಗಬೇಕಾಗುತ್ತದೆಂದು ಹೇಳಬಯಸುತ್ತೇನೆ. ನೇಕಾರರ ಅನುಕೂಲಕ್ಕಾಗಿ ಒಂದು ಪ್ರತ್ಯೇಕ ಡೈರೆಕ್ಟೋರೇಟ್‌ನ್ನು ಮಾಡಬೇಕೆಂದು ಸರ್ಕಾರದವರು ಏನು ತೀರ್ಮಾನ ಮಾಡಿದ್ದಾರೆ ಅದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಆದರೆ ಆ ಮಾತನ್ನು ಇನ್ನೂ ಕೃತಿಯಲ್ಲಿ ತಂದಿಲ್ಲ. ತಕ್ಷಣ ಅದನ್ನು ಜಾರಿಗೆ ತರಬೇಕು. ನೇಕಾರರ ಅನುಕೂಲಕ್ಕಾಗಿ ಒಂದು ಹ್ಯಾಂಡ್‌ಲೂಮ್ ಬೋರ್ಡನ್ನು ರಚನೆ ಮಾಡಬೇಕಲ್ಲದೆ, ಅವರಿಗೆ ನೂಲನ್ನು ಹಂಚುವುದಕ್ಕಾಗಿ ಒಂದು ಕಮಿಟಿಯನ್ನು ರಚನೆ ಮಾಡುವುದರ ಮೂಲಕ ಅವರ ಬವಣೆಯನ್ನು ನೀಗಿಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ಚಿರಋಣಿಯಾಗಿದ್ದೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ನಮ್ಮ ರಾಜ್ಯ ಕೈಗಾರಿಕಾ ಕ್ಷೇತ್ರದಲ್ಲಿ ಭಾರತದ ಮ್ಯಾಂಚೆಸ್ಟರ್ ಎಂದು ಹೆಸರು ಗಳಿಸಿತ್ತು. ಭಾರತ ರತ್ನ ಸರ್, ಎಂ. ವಿಶ್ವೇಶ್ವರಯ್ಯನವರು ಅವರ ಕಾಲದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಒಳ್ಳೆಯ ಕೀರ್ತಿಕಳಸವನ್ನು ತಂದುಕೊಟ್ಟರು. ಅವರ ನಂತರ ಅಧಿಕಾರಗದ್ದುಗೆಗೆ ಬಂದವರು ಮತ್ತು ಸ್ವಾತಂತ್ರ್ಯ ನಂತರ ಅಧಿಕಾರ ಗದ್ದುಗೆಗೆ ಬಂದವರು ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ. ಅವರ ಕಾಲದಲ್ಲಿ ಉತ್ತಮವಾದಂಥ ಭದ್ರಾವತಿ ಕಾರ್ಖಾನೆ ಪ್ರಾರಂಭವಾಯಿತು. ಅದರ ನಂತರ ಅದರ ಅಂಗಾಂಗಗಳೋಪಾದಿಯಲ್ಲಿ ಅನೇಕ ಇತರ ಕಾರ್ಖಾನೆಗಳು ಆರಂಭವಾದವು. ಇದನ್ನು ನಾವು ನೆನೆದಾಗ ಅವರು ಕೈಗಾರಿಕಾಭಿವೃದ್ಧಿಯ ಬಗ್ಗೆ ಮಾಡಿದಂಥ ಸೇವೆ ನಮಗೆ ಅರ್ಥವಾಗುತ್ತದೆ. ಒಂದು ಕೆಲಸವನ್ನಂತೂ ಈ ಸರ್ಕಾರಗಳು ಮಾಡಿಕೊಂಡು ಬಂದಿವೆ. ಅದೇನೆಂದರೆ, ಸರ್ಕಾರೀ ವಲಯದಲ್ಲಿ ಹೆಚ್ಚಾಗಿ ಕಾರ್ಖಾನೆಗಳನ್ನು ಪ್ರಾರಂಭ ಮಾಡದಿದ್ದರೂ ಸಹ ಇರುವ ಸರ್ಕಾರೀ ವಲಯದ ಕಾರ್ಖಾನೆಗಳಲ್ಲಿ ಯಾವ ತರಹದ ಲಾಭವೂ ಬರದ ಹಾಗೆ ನೋಡಿಕೊಂಡು ಬಂದಿವೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಈ ಕಾಂಗ್ರೆಸ್ ಸರ್ಕಾರದವರು ಸಮಾಜವಾದದ ಹೆಸರಿನಲ್ಲಿ ಮತ್ತು ಬಡತನದ ಉದ್ಧಾರಕ್ಕಾಗಿ ಮಾಡಿರುವ ಕೈಗಾರಿಕೀಕರಣ ಎಷ್ಟು ಎಂದು ಯೋಚನೆ ಮಾಡಬೇಕಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರು ಆಡಳಿತಕ್ಕೆ ಬಂದಮೇಲೆ ಟಾಟಾ ಮತ್ತು ಬಿರ್ಲಾ ಅವರಿಗೆ 300 ಹೊಸ ಲೈಸನ್ಸ್‌ಗಳನ್ನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ಇಲ್ಲಿ ಎಷ್ಟು ಜನ ಖಾಸಗೀಯವರಿಗೆ ಲೈಸನ್ಸ್ ಕೊಟ್ಟಿದ್ದಾರೆಂಬ ಬಗ್ಗೆ ಒಂದು ಪಟ್ಟಿಯನ್ನು ಸಭೆಯ ಮುಂದೆ ಮಂಡನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಮಾಜವಾದದ ಹೆಸರನ್ನು ಹೇಳುವ ಇವರು ಮತ್ತು ಎಲ್ಲ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುವ

ಇವರು ಇಂದು ದ್ವಿಮುಖ ನೀತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಅಂದರೆ ಒಂದು ಕಡೆ ತಾತ ಬಿರ್ಲಾ ಅವರಿಗೆ ಹೊಸದಾಗಿ ಲೈಸೆನ್ಸ್ ಕೊಡುತ್ತಿರುವುದು, ಇನ್ನೊಂದು ಕಡೆ ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿರುವುದು. ಇದು ಮಾಯಾಬಜಾರ್ ಆಗಿಬಿಟ್ಟಿದೆ. ಮುಗ್ಧ ಜನರನ್ನು ವಂಚಿಸಿ ಸುಳ್ಳು ಹೇಳುವುದು ಒಂದು ಕಡೆಯಾದರೆ, ಸಮಾಜವಾದದ ಹೆಸರಿನಲ್ಲಿ ಬಂಡವಾಳಷಾಹಿಗಳ ಬೊಜ್ಜು ಬೆಳೆಸುವುದು ಇನ್ನೊಂದು ಕಡೆ ನಡೆಯುತ್ತಿದೆ. ಈ ಒಂದು ದ್ವಿಮುಖ ನೀತಿ ಕೇವಲ ಕೇಂದ್ರಕ್ಕೆ ಸೀಮಿತವಾಗಿಲ್ಲ, ರಾಜ್ಯದಲ್ಲಿಯೂ ಬೆಳೆದು ಬಂದಿದೆ ಎಂದು ನಾನು ತಿಳಿಯುತ್ತೇನೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವ ಗಾದೆಯಂತೆ, ಬೇರೆ ಬೇರೆ ರಾಜ್ಯಗಳ ಬಂಡವಾಳಷಾಹಿಗಳನ್ನು ನಮ್ಮ ರಾಜ್ಯಕ್ಕೆ ಬನ್ನಿ ಎಂದು ಆಹ್ವಾನಿಸುತ್ತಿರುವುದರ ಉದ್ದೇಶವಾದರೂ ಏನು ? ಯಾವ ಬಂಡವಾಳಷಾಹಿಗಳು ಇಂದು ಕಲ್ಕತ್ತಾ ಮತ್ತು ಮುಂಬೈ ನಗರಗಳಲ್ಲಿ ಬಡ ಜನರ ರಕ್ತವನ್ನು ಹೀರಿ ಕ್ರಾಂತಿಗೆ ಕಾರಣಕರ್ತರಾಗಿದ್ದಾರೋ ಮತ್ತು ಜನರನ್ನು ಹಿಂಸೆ ಮಾಡುವುದರ ಮೂಲಕ ತಮ್ಮ ಬೊಜ್ಜನ್ನು ಬೆಳೆಸಿಕೊಂಡಿದ್ದಾರೋ, ಅದೇ ಜನರನ್ನು ಕರ್ನಾಟಕ ರಾಜ್ಯಕ್ಕೆ ಕರೆಯುವುದಾದರೆ, ಇದರ ಹಿಂದೆ ಇರುವ ತತ್ವವಾದರೂ ಏನು ಎಂದು ಕೇಳುತ್ತೇನೆ. ತಮ್ಮಲ್ಲಿ ಹಣವಿಲ್ಲವಾದ್ದರಿಂದ ಖಾಸಗಿಯವರು ಮುಂದೆ ಬರಲಿ ಎಂದು ತಾವು ಹೇಳುತ್ತೀರಿ. ಅದು ಸರಿಯಲ್ಲ, ತಮ್ಮಲ್ಲಿ ಹಣ ಇಲ್ಲದಿದ್ದರೆ ತಮ್ಮ ಸರ್ಕಾರವನ್ನು ಹರಾಜು ಹಾಕಿ. ಮತ್ತು ನಿಮಗೆ ಸಾಧ್ಯವಿರುವುದನ್ನು ಮಾಡಿ. ಸಮಾಜವಾದದ ಘೋಷಣೆಯನ್ನು ತಾವು ಮಾಡಿ ಕೂಡ ತಮಗೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲ ಎನ್ನುವುದಾದರೆ ಅಧಿಕಾರ ಗದ್ದುಗೆಯನ್ನು ಬಿಟ್ಟು ಕೆಳಗೆ ಇಳಿಯಿರಿ ಎಂದು ಹೇಳುತ್ತೇನೆ. ವಿಧಾನಸೌಧವನ್ನು ಯಾರೋ 8 ಕೋಟಿ ರೂಪಾಯಿಗಳಿಗೆ ಕೇಳಿದರಂತೆ. ಇನ್ನು ಮುಂದೆ ಸರ್ಕಾರದ ಕೆಲಸಗಳನ್ನು ನೋಡಿಕೊಳ್ಳಲು ಸಹ ಕಂಟ್ರಾಕ್ಟ್ ಕೊಡುವ ಕಾಲ ಬರಬಹುದೆಂದು ಕಾಣುತ್ತದೆ. ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ಆದರೆ 1935ನೇ ಇಸವಿಯಲ್ಲಿಯೇ ಮೈಸೂರು ಬ್ಯಾಂಕ್‌ನ್ನು ಸರ್ಕಾರೀ ವಲಯದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಪ್ರಾರಂಭ ಮಾಡಿದರು. ಹಾಗೆಯೇ ಭದ್ರಾವತಿ ಕಾರ್ಖಾನೆಯನ್ನು ಸರ್ಕಾರೀ ವಲಯದಲ್ಲಿ ಪ್ರಾರಂಭ ಮಾಡಿದರು. ಆದರೆ ಇಂದು ತಾವು ಖಾಸಗೀ ಬಂಡವಾಳಷಾಹಿಗಳಿಗೆ ಬೆಂಬಲ ಕೊಡುತ್ತಿರುವುದರ ಜೊತೆಗೆ ಅವರ ಜೊತೆಯಲ್ಲಿ ಷೇರ್ ಹಾಕಿ ಅವರಿಗೆ ಪ್ರೋತ್ಸಾಹ ಕೊಡುವ ನೀತಿಯನ್ನು ಅನುಸರಿಸುವುದು ಏನಿದೆ, ಇದರಿಂದ ನಿಮಗೆ ಮುಂದೆ ನಿಮ್ಮ ಭವಿಷ್ಯದಲ್ಲಿ ದೊಡ್ಡ ಅಪಘಾತ ತಪ್ಪಿದ್ದಲ್ಲ ಅನ್ನ ತಕ್ಕಂಥದ್ದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಇವೊತ್ತಿನ ದಿವಸ ಸರ್ಕಾರೀ ವಲಯದಲ್ಲಿರುವ ಕಾರ್ಖಾನೆಗಳಲ್ಲಿ ಲಾಭ ಬರದಿರುವುದಕ್ಕೆ ಕಾರಣವೇನು ಎಂಬುದನ್ನು ಪರಿಶೀಲನೆ ಮಾಡಿದ್ದೀರಾ ? ನಿಮ್ಮ ಅಧಿಕಾರಿಗಳು ಎಷ್ಟು ಶುದ್ಧಹಸ್ತದಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ನೀವು ನೋಡಬೇಕಾಗಿದೆ. ಖಾಸಗೀ ವಲಯದ ಕೈಗಾರಿಕೆಗಳಲ್ಲಿ ಲಾಭ ಬರುತ್ತಿರಬೇಕಾದರೆ, ಸರ್ಕಾರೀ ವಲಯದಲ್ಲಿರುವ ಕೈಗಾರಿಕೆಗಳಲ್ಲಿ ಬರದಿರುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ಕಾರಣವನ್ನು ಮೂಲಭೂತವಾಗಿ ಕಂಡುಹಿಡಿದು ಅದಕ್ಕೆ ತಕ್ಕ ಶಸ್ತ್ರ ಚಿಕಿತ್ಸೆಯನ್ನು ಮಾಡಬೇಕು. ಆ ಒಂದು ಶಕ್ತಿಸಾಮರ್ಥ್ಯ ನಿಮಗೆ ಇದೆಯೇ ಎಂದು ನಾನು ಕೇಳಬೇಕಾಗಿದೆ. ಮಾನ್ಯ ಕೃಷ್ಣ ಅವರು ಈ ಇಲಾಖೆಯನ್ನು ಕಳೆದ ವರ್ಷ ವಹಿಸಿಕೊಂಡಾದಗ ಮೇಲೆ ಇಲ್ಲಿಯವರೆಗೆ ಒಂದು ಹೊಸ ಹೆಜ್ಜೆಯನ್ನು ಮುಂದೆ ಇಟ್ಟಿದ್ದನ್ನು ನಾನು ನೋಡಿಲ್ಲ. ಇವರ ಕಾಲದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯಾಗುತ್ತದೆಂದು ವಿಶ್ವಾಸ ಇಟ್ಟಿದ್ದವರಲ್ಲಿ ನಾನೂ ಸಹ ಒಬ್ಬ. ಅದು ಈಗಲೂ ಇದೆ. ಮಾನ್ಯ ಕೃಷ್ಣ ಅವರಿಗೆ ಒಂದು ವರ್ಷದ ಹಿಂದೆ ಇದ್ದ ಹುರುಪು ಹುಮ್ಮಸ್ಸು, ಕ್ಷಾತ್ರ, ತೇಜಸ್ಸು ಇಂದು ಮುಳುಗಿ ಹೋಗಿದೆ. ಮತ್ತು ಅದು ಅಡಗಿ ಹೋಗಿದೆ. ಕಾಂಗ್ರೆಸ್ ಪಕ್ಷವನ್ನು ಅವರು ಸೇರುವ ಮೊದಲು ಇದ್ದ ಹುಮ್ಮಸ್ಸು, ಶಕ್ತಿ ಇಂದು ಉಡುಗಿ ಹೋಗಿದೆ. ನಿಮ್ಮಲ್ಲಿ ಮೊದಲು ಇದ್ದ ಒಂದು ತೇಜಸ್ಸು, ಕ್ಷಾತ್ರ, ಹುಮ್ಮಸ್ಸು ಮತ್ತು ಕೆಲಸ ಮಾಡಬೇಕೆಂಬ ಕಳಕಳಿ ಅಲ್ಲಿ ಹೋಗಿ ಕುಳಿತ ಮೇಲೆ ಇಲ್ಲದಿರುವುದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ.

ಅವರನ್ನು ಮತ್ತೊಮ್ಮೆ ಹೃತ್ಪೂರ್ವಕವಾಗಿ ಈ ಕಡೆಗೆ ಸ್ವಾಗತಿಸಿ ಇಷ್ಟು ಮಾತನ್ನು ಹೇಳುತ್ತೇನೆ. ಅವರಿಗೆ ನೇರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಖನಿಜಗಳ ಅನ್ವೇಷಣೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೈಸೂರು ಮಿನರಲ್ ಬೋರ್ಡ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಶಿವಮೊಗ್ಗ, ತೀರ್ಥಹಳ್ಳಿಯಲ್ಲಿ ಇರತಕ್ಕ ಮೈನಿಂಗ್ ಏರಿಯಾದಲ್ಲಿ ಬಂಡವಾಳಶಾಹಿಗಳಿಗೆ ಕೊಟ್ಟು ಮ್ಯಾಂಗನೀಸನ್ನು ತೆಗೆಯುತ್ತಿದ್ದಾರೆ. ಅಲ್ಲಿ ಸಿಕ್ಕ ತಕ್ಕಂಥಾ ಅದುರಿನಲ್ಲಿ 40 ರಿಂದ 60 ಪರ್ಸೆಂಟ್ ಐರನ್ ಕಂಟೆಂಟ್ಸ್ ಇದೆಯೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆ

(ಶ್ರೀ ಕೋಣಂದೂರು ಲಿಂಗಪ್ಪ)

ಮೈನಿಂಗ್ ಏರಿಯಾದಲ್ಲಿ ಏನು ಭ್ರಷ್ಟಾಚಾರ ನಡೆಯುತ್ತದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಮ್ಮ ಸಹೋದ್ಯೋಗಿಗಳಾದ ಶ್ರೀಮಾನ್ ಘೋರ್ಪಡೆಯವರಿಗೆ, ಸೊಂಡೂರು ಮೈನಿಂಗ್ ಕಂಪೆನಿಗೆ ಏನು ಲೀಜ ಕೊಟ್ಟಿದ್ದೀರಿ ಅದನ್ನು ಏತಕ್ಕೆ ಬಂದ್ ಮಾಡಬಾರದು ? ಸಮಾಜವಾದವನ್ನು ಹೇಳತಕ್ಕವರು ಬಂಡವಾಳ ಶಾಹಿಗಳಿಗೆ ಬೆಂಬಲ ಕೊಡುವುದನ್ನು ಖಂಡಿತವಾಗಿ ನಿಲ್ಲಿಸಿಬೇಕೆಂದು ನಾನು ಹೇಳುತ್ತೇನೆ.

ಇನ್ನು ಫಿಲಂ ಇಂಡಸ್ಟ್ರಿ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮುಖಾಂತರ ಚಲನಚಿತ್ರ ನಿರ್ಮಾಪಕರಿಗೆ ನೆರವು ಸಿಕ್ಕಬೇಕು. ನಮ್ಮ ರಾಜ್ಯದಲ್ಲಿ ಇರತಕ್ಕ ಚಲನ ಚಿತ್ರ ಮಂದಿರಗಳನ್ನು ಮೊದಲು ರಾಷ್ಟ್ರೀಕರಣ ಮಾಡಬೇಕು. ಮತ್ತು ಯಾರು ಚಲನಚಿತ್ರವನ್ನು ತಯಾರು ಮಾಡುತ್ತಾರೆಯೋ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಚಲನಚಿತ್ರ ಕೈಗಾರಿಕೆಯಲ್ಲಿರತಕ್ಕ ಕಾರ್ಮಿಕರಿಗೆ ಎಲ್ಲಾ ಸವಲತ್ತುಗಳನ್ನೂ ಮೊದಲು ಒದಗಿಸಬೇಕು. ಶ್ರೀಮಾನ್ ಕೃಷ್ಣನ್ ಅವರಿಂದ ನಾವು ಏನು ನಿರೀಕ್ಷೆ ಮಾಡಿದ್ದೆವೋ ಅದರಂತೆ ಅವರು ಹೆಜ್ಜೆಯನ್ನು ಇಡಬೇಕು. ಸಮಾಜವಾದದ ಪ್ರಕಾರ ಪ್ರಾಮಾಣಿಕವಾಗಿ ನುಡಿದಂತೆ ನಡೆದು ಈ ಕೈಗಾರಿಕಾ ರಂಗದಲ್ಲಿ ಕ್ರಾಂತಿಕಾರಕವಾದ ವಾತಾವರಣವನ್ನುಂಟು ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಉದ್ದಿಮೆ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ತಾಲ್ಲೂಕುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ದಿಮೆ ಅಭಿವೃದ್ಧಿಯಾಗಬೇಕಾದರೆ ತಾಲ್ಲೂಕು ಮಟ್ಟದಲ್ಲಿ ಕೆಲವೊಂದು ಸಮಿತಿಗಳನ್ನು ನೇಮಿಸಬೇಕು. ಅವರು ಆಯಾ ತಾಲ್ಲೂಕುಗಳಲ್ಲಿ ಸಿಕ್ಕತಕ್ಕಂಥಾ ಖನಿಜಸಂಪತ್ತನ್ನು ಕಂಡುಕೊಂಡು ಅಲ್ಲಿ ಯಾವ ಯಾವ ಉದ್ದಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಎಂಬುವನ್ನು ನಿರ್ಧಾರ ಮಾಡಿ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿಯಿಂದ ತಾಲ್ಲೂಕು ಮಟ್ಟದಲ್ಲೇ ಉದ್ದಿಮೆ ಬೆಳೆಯುವಂತೆ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಕೈಗಾರಿಕೆಯನ್ನು ಮಾಡಬಹುದು, ಅದಕ್ಕೆ ಸರ್ಕಾರದವರು ಯಾವ ಸೌಕರ್ಯ ಮತ್ತು ಸವಲತ್ತುಗಳನ್ನು ಕೊಡುತ್ತಾರೆ, ಅವರಿಗೆ ಯಾವ ಸಬ್ಸಿಡಿ, ಗ್ರಾಂಟ್ ಸರ್ಕಾರದಿಂದ ಸಿಕ್ಕುತ್ತದೆ ಎನ್ನುವ ವಿಷಯ ಗೊತ್ತಿರುವುದಿಲ್ಲ. ಆದ್ದರಿಂದ ಉದ್ದಿಮೆಗಳ ವಿಷಯ ಮತ್ತು ಸರ್ಕಾರದಿಂದ ಉದ್ದಿಮೆಗಳಿಗೆ ಸಿಕ್ಕತಕ್ಕಂಥಾ ಸಾಲ ಮತ್ತು ಇತರ ಸೌಲಭ್ಯಗಳು ಇವುಗಳ ಪ್ರಚಾರ ಜನಗಳಿಗೆ ಪತ್ರಿಕೆಗಳ ಮುಖಾಂತರ ಮತ್ತು ಪುಸ್ತಕಗಳ ಮುಖಾಂತರ ಆಗಬೇಕು ಎಂದು ನಾನು ಸೂಚಿಸುತ್ತೇನೆ. ಯಾವುದಾದರೂ ಒಂದು ಮಟ್ಟದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪಾಠದಲ್ಲಿ ಉದ್ದಿಮೆ ವಿಷಯಗಳ ಬಗ್ಗೆ ಒಂದು ಪಾಠ ಇರಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಉದ್ದಿಮೆಗಳ ಬಗ್ಗೆ ಜನಗಳಿಗೆ ವಿಶೇಷವಾದ ಪ್ರಚಾರವಾಗಬೇಕು. ತಾಲ್ಲೂಕು ಬೋರ್ಡಿನಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಎಂದು ನೇಮಕ ಮಾಡಬೇಕು. ಆ ಆಫೀಸರು ಕೈಗಾರಿಕೆಗಳ ಕೆಲಸಗಳನ್ನು ನೋಡಿಕೊಳ್ಳುವ ಜೊತೆಗೆ ತಾಲ್ಲೂಕು ಬೋರ್ಡಿನಲ್ಲಿ ಇತರ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳಬೇಕು. ಜನತೆಗೆ ಸರ್ಕಾರದವರು ಕೊಡುವಂತಹ ಪ್ರತಿಯೊಂದು ಸಾಮಾನುಗಳೂ ಸಮಿತಿಗಳ ಮುಖಾಂತರವಾಗಿಯಾಗಲೀ, ಸೊಸೈಟಿಗಳ ಮುಖಾಂತರವಾಗಲೀ ವಿತರಣೆಯಾಗಬೇಕು ; ಇಲ್ಲದಿದ್ದರೆ ದೊಡ್ಡ ದೊಡ್ಡ ಶ್ರೀಮಂತರು ಉದ್ದಿಮೆದಾರರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ.

ಎರಡನೆಯದು ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳವರು ಉದ್ದಿಮೆಗಳನ್ನು ಹಾಕಿಕೊಂಡು ಆ ಉದ್ದಿಮೆಗಳಿಗೆ ಕೆಲಸಗಾರರನ್ನು ಬೇರೆ ರಾಜ್ಯಗಳಿಂದಲೇ ಕರೆದುಕೊಂಡು ಬರುತ್ತಾರೆ. ಆದ್ದರಿಂದ ಇಂಥಾ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಸವಲತ್ತು ಸಿಕ್ಕುವಂತೆ ಮಾಡಬೇಕು. ಕನ್ನಡಿಗರಿಗೆ ಉದ್ದಿಮೆಗಳಲ್ಲಿ ಕೆಲಸ ಸಿಕ್ಕುವಂತೆ ಮಾಡಬೇಕು. ಉದ್ದಿಮೆಗಳ ಬಗ್ಗೆ ಜನಗಳಿಗೆ ತಾಲ್ಲೂಕು ಮಟ್ಟದಲ್ಲಾಗಲೀ, ಜಿಲ್ಲಾ ಮಟ್ಟದಲ್ಲಾಗಲೀ ತರಪೇತಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಕನ್ನಡಿಗರು ಕೈಗಾರಿಕೆಗಳಲ್ಲಿ ದುಡಿಯುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಆ ರೀತಿ ಮಾಡುವುದಾದರೆ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಮತ್ತು ಕಾಟೇಜ್ ಇಂಡಸ್ಟ್ರಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಈ ದೃಷ್ಟಿಯಿಂದ ಹೇಳುವುದಾ

ದರೆ ಮುದ್ದೇಬಿಹಾಳ್ ಹತ್ತಿರ ಒಂದು ಕಡೆ ಖಾದಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಂತಹ ಸರ್ಟಿಫಿಕೇಟನ್ನು ಬೆಂಗಳೂರಿನಲ್ಲಿರುವ ಸರ್ಟಿಫಿಕೇಟ್ ಕಮಿಟಿಯವರು ಕೊಡಬೇಕೆಂದು ಮಾಡಿದ್ದಾರೆ. ಆ ಸರ್ಟಿಫಿಕೇಟ್ ಕಮಿಟಿಯವರು ಮುದ್ದೇಬಿಹಾಳ್ ಹತ್ತಿರ ಈ ಖಾದಿ ಇಂಡಸ್ಟ್ರೀಸ್ ಸ್ಥಾಪನೆ ಮಾಡಲು ಸರ್ಟಿಫಿಕೇಟ್ ಕೊಡುವುದಕ್ಕೆ ಅನುಮಾನ ಮಾಡುತ್ತಿದ್ದಾರೆ. ಅದು ಸರಿಯಲ್ಲ. ಈ ಸರ್ಟಿಫಿಕೇಟ್ ಕಮಿಟಿಯವರು ವಿಲೇಜ್ ಇಂಡಸ್ಟ್ರಿ ಮತ್ತು ಕಾಟೇಜ್ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡುವುದಕ್ಕೆ ಪರವಾನಿಗೆ ಕೊಟ್ಟು ಅದಕ್ಕೆ ಪ್ರೋತ್ಸಾಹ ಸಿಕ್ಕುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಬಿಜಾಪುರ ಜಿಲ್ಲೆಯು ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ಮೈಸೂರು ರಾಜ್ಯ ಎಲ್ಲಾ ದೃಷ್ಟಿಯಿಂದಲೂ ಅತಿ ಹಿಂದುಳಿದಿರುವುದು ದುರ್ದೈವ. ಅದರಲ್ಲಿಯೂ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ನಾನು ಇದನ್ನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಹಿಂದೂಸ್ಥಾನ ಸರ್ಕಾರಕ್ಕೆ ಕೂಡಲೇ ಶಿಫಾರಸ್ಸು ಮಾಡಿ ನಮ್ಮ ಮೈಸೂರು ರಾಜ್ಯಕ್ಕೆ ಇಂಡಸ್ಟ್ರಿಯಲಿ ಬ್ಯಾಕ್‌ವರ್ಡ್ ಪ್ಲಾನಿನಲ್ಲಿ ಸ್ಥಾನ ಸಿಕ್ಕುವಂತೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮದ್ದುಗುಂಡುಗಳ ತಯಾರಿಕೆ ಮಾಡುವಂತೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು. ತಾಳಿಕೋಟೆಯಲ್ಲಿ ಒಂದು ಫ್ಯಾಕ್ಟರಿಯನ್ನು ಸ್ಥಾಪಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಅಲ್ಲಿ 2 ಸಾವಿರ ವರ್ಷಗಳಿಗೆ ಸಾಲುವಷ್ಟು ಸುಣ್ಣದ ಕಲ್ಲು ಸಿಕ್ಕುತ್ತದೆ. ಈ ಬಗ್ಗೆ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದವರು ಅನೇಕ ವರದಿಗಳನ್ನು ಕೊಟ್ಟಿದ್ದಾರೆ.

ಹಲವಾರು ರಿಪೋರ್ಟುಗಳಲ್ಲಿ ಸಹ ತಾಳಿಕೋಟೆ ಸಿಮೆಂಟ್ ಕಾರ್ಖಾನೆಯ ಬಗ್ಗೆ 1958ನೇ ಇಸವಿಯಿಂದ ವ್ಯವಹಾರ ಇದ್ದು, ಸರ್ಕಾರದ ಫೈಲ್ಲಿನಲ್ಲಿ ಸಹ ಇದ್ದು, ಇದರ ಬಗ್ಗೆ ಸರ್ಕಾರ ಇದುವರೆಗೂ ಗಮನ ಹರಿಸಿಲ್ಲವೆಂಬುದಕ್ಕೆ ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇದುವರೆಗೂ ಈ ಉದ್ಯಮವನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರಕಾರದವರು ಏನೊಂದು ಪ್ರೊಜೆಕ್ಟ್ ರಿಪೋರ್ಟ್ ಕೇಳಿದ್ದಾರೆ, ಅದು ಬಂದಿದೆಯೇ ಎಂಬುದನ್ನು ಹೇಳಬೇಕು. ಇಲ್ಲಿ ಒಂದು ಸಾವಿರ ವರ್ಷದ ವರೆಗೆ ಸಿಗತಕ್ಕಂತಹ ಲೈಮ್ ಸ್ಟೋನ್ಸ್ ಡಿಪಾಸಿಟ್ ಇದೆಯೆಂದು ಅಭಿಪ್ರಾಯ ಇದೆ. ಅದನ್ನು ಉಪಯೋಗ ಮಾಡಿಕೊಂಡು ಇಂಥ ಸಿಮೆಂಟ್ ಸ್ಕೇರ್ಸಿಟ್ ಇದ್ದ ಕಾಲದಲ್ಲಿ, ಈ ಕಾರ್ಖಾನೆಯನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಇಲ್ಲಿ ಸಿಮೆಂಟ್ ಕಾರ್ಖಾನೆ ಮಾಡುವುದರಿಂದ ಸುತ್ತು ಮುತ್ತಲು ಸ್ಥಾಪನೆಯಾಗುವಂತಹ ವಿಜಯನಗರ ಕಾರ್ಖಾನೆ, ಮತ್ತು ಇತರ ನೀರಾವರಿ ಪ್ರೊಜೆಕ್ಟುಗಳಿಗೂ ಬಹಳ ಅನುಕೂಲವಾಗುತ್ತದೆ.

ಇನ್ನು ಜಮಖಂಡಿಯಲ್ಲಿ ಒಂದು ಡೈರಿ ಫಾರ್ಮನ್ನು ಮಾಡಬೇಕು. ಏಕೆಂದರೆ ಜಮಖಂಡಿ ಮಹಾರಾಜರ ಸಾವಿರಾರು ಎಕರೆ ಜಮೀನು ಇದೆ. ಅಲ್ಲಿನ ಹಸುಗಳಿಂದ ಉತ್ಪತ್ತಿಯಾಗುವಂತಹ ಹಾಲು ಪೂನ ಮತ್ತು ಸಾಂಗ್ಲಿ ಕಡೆಗೆ ಹೋಗುತ್ತದೆ. ಆದ್ದರಿಂದ ಅಲ್ಲಿ ಒಂದು ಡೈರಿ ಫಾರ್ಮನ್ನು ಮಾಡಿದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ಇದನ್ನು ಮಾಡುವುದರಿಂದ ಅಲ್ಲಿಯ ಜನರಿಗೂ ಕೆಲಸಗಳನ್ನು ಒದಗಿಸಿದ ಹಾಗೆ ಆಗುತ್ತದೆ.

ಇನ್ನು ನೇಕಾರರ ಬಗ್ಗೆ ಹೇಳುವುದಾದರೆ, ಅವರಿಗೆ ಕೆಲಸ ಎಷ್ಟು ಮಟ್ಟಿಗೆ ಸಿಗಬೇಕೋ ಅಷ್ಟು ಮಟ್ಟಿನಲ್ಲಿ ಸಿಗುತ್ತಾ ಇಲ್ಲ. ಅಲ್ಲಿರತಕ್ಕಂತಹ ನೇಕಾರರಿಗೆ ಬೇಕಾದಂತಹ ಸಾಮಾನು ಸಲಕರಣೆಗಳನ್ನು ಒದಗಿಸಿ ಅವರಿಗೆ ಸದಾ ಕೆಲಸ ಸಿಗುವಂತೆ ಮಾಡಿ ಮತ್ತು ಅವರ ಉತ್ಪತ್ತಿಯೂ ಜಾಸ್ತಿಯಾಗುವಂತೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).- ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ಸಚಿವರು ತಂದಿರತಕ್ಕಂತಹ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಇಲಾಖೆಗೆ ಅವರು ಬರುವುದಕ್ಕೆ ಮುಂಚೆ ಅವರ ಬಗ್ಗೆ ಬಹಳ ಆಶೋತ್ತರಗಳನ್ನು ನಾನು ಇಟ್ಟುಕೊಂಡಿದ್ದೆ. ಈ ರಾಜ್ಯದಲ್ಲಿ ಸಮಾಜವಾದ ತತ್ವಕ್ಕೆ ಅನುಗುಣವಾಗಿ ಆಡಳಿತವನ್ನು ನಡೆಸುತ್ತಾರೆ ಮತ್ತು ಸಮಾಜವಾದದ ಆಧಾರದ ಮೇಲೆ ಈ ಕೈಗಾರಿಕೆಗಳ ಬೆಳವಣಿಗೆಯಾಗುತ್ತದೆ. ಮತ್ತು ಇವರ ಯಾವ ಪಾರ್ಟಿಯಲ್ಲಿದ್ದುಕೊಂಡರೂ ಸಹ ನಮ್ಮ ರಾಜ್ಯಕ್ಕೆ ಮತ್ತು ನಮ್ಮ ದೇಶಕ್ಕೆ ಒಳ್ಳೆಯ-

(ಶ್ರೀ ವಾಟಾಳ್ ನಾಗರಾಜ್)

ದಾಗುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೆ. ಆದರೆ ಅವೆಲ್ಲವೂ ಬರೀ ಕನಸಾಗಿದೆ. ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರಿನಲ್ಲಿ ಬಹುಶಃ ಬಹಳ ಕಾರ್ಖಾನೆಗಳು ಇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಅನೇಕ ಹಿಂದುಳಿದ ಜಿಲ್ಲೆಗಳು ಇವೆ. ಇವತ್ತು ಬೆಂಗಳೂರಿನ ಸುತ್ತು ಮುತ್ತಲು ಈ ಕಾರ್ಖಾನೆಗಳು ಕೇಂದ್ರಿಕೃತವಾಗುವ ಬದಲು ಬೇರೆ ಬೇರೆ ಜಿಲ್ಲೆಗಳಲ್ಲಿ ಮಾಡಿದ್ದರೆ ಆ ಜಿಲ್ಲೆಯನ್ನು ಸಹ ಅಭಿವೃದ್ಧಿ ಮಾಡಿದ ಹಾಗೆ ಆಗುತ್ತದೆ. ಇದರಲ್ಲಿ ಇವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ಇನ್ನು ಬೆಂಗಳೂರಿನಲ್ಲಿರುವಂತಹ ಕೈಗಾರಿಕೆಗಳಲ್ಲಿ ನೌಕರಿ ಕೊಡುವುದರಲ್ಲಿ ಸಿಂಹ ಪಾಲು ರಾಜ್ಯದ ಕನ್ನಡಿಗರಿಗೆ ಒದಗಿಸಿ ಕೊಡಬೇಕೆಂದು ಅನೇಕ ಸಾರಿ 6-7 ವರ್ಷಗಳಿಂದಲೂ ಹೇಳಿದ್ದೇವೆ. ಆದರೆ ಇದರ ಬಗ್ಗೆ ಸರಿಯಾದಂತಹ ಕಾರ್ಯಕ್ರಮ ತೆಗೆದುಕೊಳ್ಳುವುದರಲ್ಲಿ ಇವರು ಸಂಪೂರ್ಣ ವಾಗಿ ವಿಫಲರಾಗಿದ್ದಾರೆ. ಅಲ್ಲಿದ್ದಂತಹ ಅಧಿಕಾರಿಗಳು ನಾಲ್ಕನೆಯ ದರ್ಜೆಯ ಕೆಲಸಕ್ಕೆ ಸಹ ಹೊರಗಡೆಯಿಂದ ಬಂದ ಜನರನ್ನು ನೇಮಕ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟದಿದ್ದರೆ, ಇನ್ನು 5 ವರ್ಷಗಳಲ್ಲಿ ಎಲ್ಲಿಯೂ ಕನ್ನಡಿಗರಿಗೆ ಕೆಲಸವೇ ಇಲ್ಲದ ಹಾಗೆ ಆಗುತ್ತದೆ. ಇವತ್ತು ಮನೆಗೆ ಮಾರಿ, ನೆರೆಯವರಿಗೆ ಉಪಕಾರಿ ಎಂದು ಹೇಳುವ ರೀತಿಯಲ್ಲಿ ಮಾಡುತ್ತಿದ್ದಾರೆ. ಮುಂದೆ ಅಲ್ಲಿ ಯಾವುದೇ ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ, ಯಾರಿಗೆ ಕನ್ನಡ ಸಂಪೂರ್ಣವಾಗಿ ಓದುವುದಕ್ಕೆ ಬರೆಯುವುದಕ್ಕೆ ಮತ್ತು ಮಾತನಾಡುವುದಕ್ಕೆ ಬರುತ್ತದೋ, ಅಂಥವರನ್ನು ತೆಗೆದುಕೊಳ್ಳಬೇಕೆಂದು ತಾವು ಕಾರ್ಖಾನೆಗಳಿಗೆ ಆದೇಶ ನೀಡಬೇಕು ಮತ್ತು ಕೇಂದ್ರಸರ್ಕಾರಕ್ಕೂ ಇಂಥ ಆದೇಶವನ್ನು ಕಳಿಸಬೇಕೆಂದು ಹೇಳುತ್ತೇನೆ.

ಇದಾದ ನಂತರ ಮೈಸೂರು ರೋಡಿನಲ್ಲಿ ಮೈಸೂರು ಮೆಶಿನರಿ ಎಂಬ ಕಾರ್ಖಾನೆ ಇದೆ. ಚೆರಿಯನ್ ಎನ್ನುವವರು ಅದರ ಮ್ಯಾನೇಜಿಂಗ್ ಡೈರೆಕ್ಟರ್. ಅಲ್ಲಿ ಒಂದೂವರೆ—ಎರಡು ಸಾವಿರ ಕೆಲಸಗಾರರು ಕೆಲಸ ಇಲ್ಲದೆ ಇದ್ದಾರೆ. ಕೆಲಸಗಾರರಿಗೆ ಇವತ್ತು ಅಲ್ಲಿ ಕೆಲಸ ಕೊಡುವುದರಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ನಾನು ಆರೋಪಣೆ ಮಾಡುತ್ತೇನೆ. ಈಗಲೂ ತಮ್ಮ ಅಧಿಕಾರವನ್ನು ಉಪಯೋಗಿಸಿ, ಆ ಮಾಲೀಕರನ್ನು ಕರೆಸಿ ಅವರಿಗೆ ಸರಿಯಾದ ಎಚ್ಚರಿಕೆಯನ್ನು ಕೊಟ್ಟು ಆ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಬೇಕೆಂದು ಹೇಳುತ್ತೇನೆ. ಆ ವ್ಯಕ್ತಿಯು ಇಡೀ ಕ್ಯಾಬಿನೆಟಿನಲ್ಲಿ ನನ್ನನ್ನು ವಿರೋಧ ಮಾಡತಕ್ಕವರು ಯಾರೂ ಇಲ್ಲವೆಂದು ಹೇಳುತ್ತಿದ್ದಾರೆ. ಕೆಲವು ಕೆಲಸಗಾರರಿಗೆ ಅವರು ಹೊರಗಡೆಯಿಂದ ಗೂಂಡಾಗಳನ್ನು ಕರೆಸಿ ಹೊಡೆಯುವುದಕ್ಕೆ ಸಹ ಹೋಗಿದ್ದಾರೆ. ಇದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ. ಇವತ್ತು ತಾವು ತಮ್ಮ ಸಮಾಜವಾದವನ್ನು ಅನುಷ್ಠಾನಕ್ಕೆ ತರಬೇಕಾದರೆ, ಇಂಥ ಕೆಲಸವನ್ನು ಮಾಡಬೇಕು.

ಅದೇ ರೀತಿ ಮೈಸೂರು ಪೇಪರ್ ಮಿಲ್ಸ್ ಕಂಪೆನಿ ಆಫೀಸ್ ಮೊದಲು ಒಂದು ಸಣ್ಣ ಕಟ್ಟಡದಲ್ಲಿ ಕೆಂಪೆಗೌಡ ರೋಡಿನಲ್ಲಿ ಇತ್ತು. ಈಗ ಅದನ್ನು ಒಂದು ಏರ್ ಕಂಡಿಶನ್ ಕಟ್ಟಡಕ್ಕೆ ಬದಲಾವಣೆ ಮಾಡಿದ್ದಾರೆ. ಅದರ ಚ್ಯಾರ್ಮೇನರಿಗೆ 2-2ವರೆ ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಒಂದು ಒಂದೂವರೆ ಲಕ್ಷ ರೂಪಾಯಿ ಫರ್ನಿಚರ್ ಅದಕ್ಕೆ ಕೊಂಡುಕೊಂಡಿದ್ದಾರೆ. ಈ ರೀತಿ ತಾವು ಸಮಾಜವಾದದ ಹೆಸರಿನಲ್ಲಿ ಖರ್ಚು ಮಾಡುತ್ತೀರಿ ಎಂದು ನಾನು ನಂಬಿರಲಿಲ್ಲ. ಇದು ನಮ್ಮ ದುರ್ದೈವವೆಂದು ಹೇಳಬೇಕಾಗುತ್ತದೆ. ನಿಮ್ಮ ಮೇಲೆ ನಾವು ಏನು ಆಶೋತ್ತರಗಳನ್ನು ಇಟ್ಟುಕೊಂಡಿದ್ದೇವೆ, ಅದನ್ನು ಇವತ್ತು ನಾವು ಬಿಟ್ಟುಬಿಡಬೇಕಾಗಿದೆ. ಆದ್ದರಿಂದ ಈ ಪೇಪರ್ ಮಿಲ್ಸ್ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಇಲ್ಲಿ ಇಡಬೇಕು. ಇನ್ನೊಂದು ವಿಚಾರವೇನೆಂದರೆ, ಆ ಪೇಪರ್ ಮಿಲ್ಲಿನ ಶ್ಯಾರುಗಳನ್ನು ಯಾವುದೋ ಒಂದು ಖಾಸಗೀ ಕಂಪೆನಿ ಕೊಂಡು ಅವರದೇ ಸ್ವಂತ ಕಾರ್ಖಾನೆಯನ್ನಾಗಿ ಮಾಡಬೇಕೆಂದು ಏರ್ಪಾಡು ನಡೆಯುತ್ತಿದೆಯಂತೆ. ಇದರ ಬಗ್ಗೆ ಸಹ ತಮ್ಮ ಸರಿಯಾದ ವಿವರಗಳನ್ನು ಇಲ್ಲಿ ಕೊಡಬೇಕೆಂದು ಹೇಳುತ್ತೇನೆ.

ಮಂಡ್ಯಾ ಸಕ್ಕರೆ ಕಾರ್ಖಾನೆಯ ಚೇರ್‌ಮನ್‌ರಿಗೆ ಬಹುಶಃ ಹಿಂದೆ 1000 ರೂಪಾಯಿಗಳಷ್ಟು ಸಂಬಳವಿತ್ತು. ಇವರು ಬಂದಮೇಲೆ ಆ ಸಂಬಳವನ್ನು ಜಾಸ್ತಿಮಾಡುವ ಉದ್ದೇಶವಾದರೂ ಏನು ? ಇದು ಸಮಾಜವಾದವೇ ? ಇದು ಒಂದು ಸಮಾಜವಾದದ ಕಾರ್ಯಕ್ರಮವೇ ಎಂಬುದಾಗಿ ನಾನು ಒತ್ತಾಯದಿಂದ ಕೇಳುತ್ತಿದ್ದೇನೆ. ಅದನ್ನು ಸ್ಪಷ್ಟಪಡಿಸಬೇಕು. ಇವತ್ತು ಸಮಾಜವಾದಿ ಕಾರ್ಯಕ್ರಮದ ಬಗ್ಗೆ ಭಾಷಣಗಳನ್ನು ಉದ್ದುದ್ದವಾಗಿ ಮಾಡುವ ಜನರಿಗೆ ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಟ್ಟು ಯಾರೋ ನಿಮಗೆ ಬೇಕಾದವರನ್ನು ನೀವು ದೊಡ್ಡದೊಡ್ಡ

ಹುದ್ದೆಗಳಲ್ಲಿ ನೇಮಿಸಿದರೆ ಅದು ನಿಮ್ಮ ಅಧಿಕಾರ ದುರುಪಯೋಗವಾದಂತೆ ಆಗುವುದಿಲ್ಲವೇ? ನಿಮ್ಮನ್ನು ಅವರು ಉಪಯೋಗಿಸಿದರೂ, ನಿಮ್ಮ ಅಧಿಕಾರವನ್ನು ಅವರು ದುರುಪಯೋಗಪಡಿಸಿಕೊಂಡರೂ ಅದು ಖಂಡಿತವಾಗಿ ಅಧಿಕಾರ ದುರುಪಯೋಗಪಡಿಸಿಕೊಂಡ ಹಾಗೆ ಆಗುತ್ತದೆ. ಮತ್ತೊಂದು ವಿಚಾರವನ್ನು ಕೇಳಬೇಕಾಗಿದೆ. ಮಾನ್ಯ ಶ್ರೀ ಪಾರ್ಥಸಾರಥಿ ಎಂಬುವರು ಯಾರು? ಅವರು ಎಲ್ಲಿಯುವರು? ಅವರನ್ನು ಅನೇಕ ಕೈಗಾರಿಕೆಗಳಲ್ಲಿ ಡೈರೆಕ್ಟರ್ ಎಂಬುದಾಗಿ ಮಾಡಿದ್ದೀರಿ, ಅವರು ಎಂ. ಎಲ್. ಎ. ಅಥವಾ ಮಾಜಿ ಶಾಸಕರೇ? ಅವರು ಯಾರು ಎಂಬುದನ್ನು ಈಗಲೇ ಸ್ಪಷ್ಟಪಡಿಸಬೇಕು. ಇಲ್ಲಿಯೇ ಇದ್ದವರೆಂಬ ಕಾರಣದಿಂದ ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅವರೇ ಈಗ ನಿಮ್ಮ ಮೇಲೆ ಪ್ರಭಾವವನ್ನು ಬೀರಿ ಅನೇಕ ಕರ‍್ಯಗಳನ್ನು ಮಾಡುತ್ತಿದ್ದಾರೆ. ಹಿಂದೆ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ಹೆಸರನ್ನು ಈ ಸಭೆಯಲ್ಲಿ ತಂದಿದ್ದೇನೆ. ಅದೇ ರೀತಿಯಲ್ಲಿ ಇವರು ಒಬ್ಬರಿದ್ದಾರೆಂದು ನನ್ನ ಮನಸ್ಸಿಗೆ ಭಾಸವಾಗುತ್ತಿದೆ. ಇಂತಹ ಕಾರ್ಯಗಳನ್ನು ಮಾಡುವಾಗ ನಿಮ್ಮ ಬಗ್ಗೆ ಏನು ಕಳಕಳಿ ವಿಶಾಲ ಮನೋಭಾವನೆ ಇದೆಯೋ ಅದು ಹೋಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಅದನ್ನು ಸಂಪೂರ್ಣವಾಗಿ ನಾನು ಸ್ಪಷ್ಟಪಡಿಸಬೇಕಾಗಿದೆ. ಅವರು ಇದ್ದಕ್ಕಿದ್ದ ಹಾಗೆ ಇಡೀ ರಾಜ್ಯದಲ್ಲಿ ಐದಾರು ಸಂಸ್ಥೆಗಳಲ್ಲಿ ಡೈರೆಕ್ಟರ್ ಆಗುವುದಕ್ಕೆ ಏನು ಅಧಿಕಾರವಿದೆ, ಯಾವ ಅರ್ಹತೆ ಇದೆಯೆಂಬುದನ್ನು ಸ್ಪಷ್ಟಪಡಿಸಬೇಕು. ಆಡಳಿತಕಾಂಗ್ರೆಸ್ ಪಕ್ಷಕ್ಕೆ ಸೇರಿದ ಮಂಡ್ಯಾದ ಮಾಜಿ ಶಾಸಕರೊಬ್ಬರು 1600 ಜಿಂಕ್‌ಷೀಟ್‌ಗಳನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಉಪಯೋಗಿಸಿದ್ದಾರೆ. ಬರೀ ಬ್ಲಾಕ್ ಮಾರ್ಕೆಟ್ಟಿನಲ್ಲಿ ಆ ಜಿಂಕ್‌ಷೀಟ್‌ಗಳನ್ನು ಮಾರಿ ಸುಮಾರು 32 ಸಾವಿರ ರೂಪಾಯಿಗಳವರೆಗೂ ಸಂಪಾದನೆಮಾಡಿದ್ದಾರೆ. ಇದರಿಂದ ತಮ್ಮ ಒಂದು ಅಧಿಕಾರವನ್ನು ಅವರು ದುರುಪಯೋಗಪಡಿಸಿಕೊಂಡಿದ್ದಾರೆ. ಇದು ತಮ್ಮ ಗಮನಕ್ಕೂ ಬಂದಿದೆ. ನಾನು ನಿಮ್ಮ ಮೇಲೆ ಆರೋಪಣೆ ಮಾಡಬೇಕಾದರೆ ನನಗೆ ಸ್ವಲ್ಪ ಮನ ನೋಯುತ್ತದೆ. ನಾನು ಯಾವುದೇ ಪಾರ್ಟಿಯಲ್ಲಿದ್ದರೂ ನನಗೆ ಇದರಲ್ಲಿ ಏನೂ ಅನುಮಾನಇಲ್ಲ. ಇಂಥಾದ್ದು ತಮ್ಮ ಅಧಿಕಾರದಲ್ಲಿ ನಡೆದರೆ ಖಂಡಿತವಾಗಿ ತಮಗೆ ಕೆಟ್ಟ ಹೆಸರು ಬರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈಗ ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಮಂಡ್ಯಾಕ್ಕೆ ಸಂಬಂಧಪಟ್ಟ ವಿಷಯವಾದ್ದರಿಂದ, ಬಹಳ ಗುರುತರವಾದ ಆರೋಪಣೆಯನ್ನು ಮಾಡುತ್ತಾ ಇರುವುದರಿಂದ ನನಗೆ ತಿಳಿದು ಬಂದಿರುವ ಹಾಗೆ ಈ ವಿಷಯ ಶಾಸಕರ ಬಗ್ಗೆ ಅಲ್ಲ, ನನ್ನಲ್ಲಿಯೂ ಈ ವಿಚಾರವಾಗಿ ಮಾಹಿತಿ ಉಂಟು. ಅದನ್ನು ಮಾನ್ಯ ಸದಸ್ಯರು ಅಧಿಕೃತವಾಗಿ ತಿಳಿಯದೆ ಈ ಸಭೆಯಲ್ಲಿ ಉಚ್ಚರಿಸಿರುವುದು ತಪ್ಪಾಗಿದೆ. ಅದು ಮಾಜಿ ಶಾಸಕನ ಮಗನ ಮೇಲೆ ಈ ಒಂದು ಅಪಾದನೆ ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ಶಾಸಕನಾದರೇನು, ಅವರ ಮಗನಾದರೇನು, ನನಗೆ ಇದರಲ್ಲಿ ಏನೂ ವ್ಯತ್ಯಾಸವಿಲ್ಲ. ನಾನು ಯಾವ ಶಾಸಕರ ಮೇಲೆಯೂ ಆರೋಪವಮಾಡುವುದಿಲ್ಲ. ಮಾನ್ಯ ಶ್ರೀ ಕೃಷ್ಣಪ್ಪನವರೂ ಸಹ ಇದರಲ್ಲಿ ಭಾಗಿಯಾಗಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಒಂದೇ ಮನೆಯಲ್ಲಿದ್ದರೆ ಯಾವಾಗಲೂ ಸಾಮಾನ್ಯವಾಗಿ ಅನೇಕ ಜನರು ತಂತಮ್ಮ ಪ್ರಭಾವವನ್ನು ಉಪಯೋಗಿಸಿಕೊಂಡು ಏನೇನೋ ಅನ್ಯಾಯಗಳನ್ನು ಮಾಡುತ್ತಿದ್ದಾರೆ. ವ್ಯಾಪಾರ ಮಾಡದೇ ಇದ್ದರೂ ಇವರ 30-32ಜನ ಹಿಂಬಾಲಕರಿಗೆ ಸಿಮೆಂಟ್ ಮಾರುವ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಅವರು ನಿಜವಾಗಿಯೂ ವ್ಯಾಪಾರ ಮಾಡುವವರಲ್ಲ. ಅಂತಹವರು ಸಿಮೆಂಟ್ ಮೂಟೆಗಳನ್ನು ಪರ್ಮಿಟ್ ಮೂಲಕ ತೆಗೆದುಕೊಂಡು ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಿದ್ದಾರೆ. ಅದನ್ನು ರುಜುವಾತು ಪಡಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಇವೆಲ್ಲವನ್ನೂ ತಾವು ಸ್ಪಷ್ಟಪಡಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಆ ರೀತಿಯಾಗಿ ಮಾಡಿರುವುದು ನಿಜವಿದ್ದರೆ, ನಿಜವೆಂದು ಹೇಳಿ, ಇಲ್ಲದಿದ್ದರೆ ನಿಜವಲ್ಲವೆಂದು ಹೇಳಿದರೆ ಸಾಕು. ಅದನ್ನು ಒಪ್ಪಿಕೊಳ್ಳುತ್ತೇವೆ. ಇನ್ನೊಂದು ವಿಷಯ. ಮಂಗಳೂರು ಕೆಮಿಕಲ್ಸ್ ಫ್ಯಾಕ್ಟರಿಯ ಬಗ್ಗೆ ಬಹುಶಃ ಅನೇಕ ಸಾರಿ ದೊಡ್ಡ ವಾದವಿವಾದವೇ ನಡೆದಿದೆ. ಇಷ್ಟಾದರೂ ಅಲ್ಲಿರತಕ್ಕ ಮ್ಯಾನೇಜ್‌ಮೆಂಟಿನವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುತ್ತಾ ಇಲ್ಲ. ಅಲ್ಲಿ ಕೊಡುತ್ತಿರುವ ಅಧಿಕಾರಿಗಳ ಸಂಬಳ, ಅಧಿಕಾರಿಗಳು ಎಲ್ಲಿಯವರು, ಯಾವ ಪ್ರದೇಶದವರು, ಯಾವ ನೀತಿಯಿಂದ ಅಪಾಯಿಂಟ್‌ಮೆಂಟ್ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಹಿಂದೆ ಮಾನ್ಯ ಶ್ರೀ ದೇವೇಗೌಡರು ಇದರ ಬಗ್ಗೆ ಬಹಳ ಉದಾತ್ತವಾಗಿ ಗಂಟೆಗಟ್ಟಲೆ ಮಾತನಾಡಿದ್ದಾರೆ. ಅದನ್ನು ಕೊನೆಗಾಣಿಸಿದ್ದಾರೆ. ಅವರ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಅಲ್ಲಿನ ಅವ್ಯವಹಾರದ ಬಗ್ಗೆ, ಆ ಕೈಗಾರಿಕೆಯಲ್ಲಿರತಕ್ಕ ಅಧಿಕಾರಿಗಳಿಗೆ ಕೊಡುತ್ತಿರುವ ಸಂಬಳವೇನು, ಇವೆಲ್ಲವನ್ನೂ ಪರಿಶೀಲಿಸುವುದಾದರೆ, ಒಬ್ಬೊಬ್ಬರಿಗೆ ಎಷ್ಟೆಷ್ಟು ಸಂಬಳವೆಂಬುದರ ಬಗ್ಗೆ ಬಹಳ ಆಶ್ಚರ್ಯವಾಗುತ್ತದೆ. ಇದ

(ಶ್ರೀ ವಾಟಾಳ್ ನಾಗರಾಜ್,

ರಿಂದಲೇ ಅಲ್ಲಿನ ಕಡಿಮೆ ಸಂಬಳದ ಕಾರ್ಮಿಕರು ಕೆಲಸವಿಲ್ಲದೆ ಪ್ರದರ್ಶನವನ್ನು ನಡೆಸುತ್ತಾರೆ. ಅಲ್ಲಿ ಸಾವಿರಾರು ರೂಪಾಯಿಗಳ ಸಂಬಳ ಪಡೆದಿರತಕ್ಕ ಏಜೆನ್ಸಿಯನ್ನು ನಾವು ಕಣ್ಣಾರೆ ನೋಡಿದ್ದೇನೆ. ಅಲ್ಲಿರತಕ್ಕ ಅಧಿಕಾರಿಗಳಲ್ಲಿ ಎಷ್ಟು ಜನ ಮೈಸೂರಿನವರು, ಎಷ್ಟು ಜನ ಹೊರಗಿನವರು ಇದ್ದಾರೆಂಬ ಬಗ್ಗೆ ಈ ಸಭೆಯಲ್ಲಿ ಮಂತ್ರಿಗಳು ಉತ್ತರ ಕೊಡುವಾಗ ಈ ಸಭೆಯ ಮುಂದಿಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಐ. ಟಿ. ಐ. ಇಲಾಖೆಯಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಥಾರಿಟಿಯವರು ಕೆಲವು ಷೆಡ್ಡುಗಳನ್ನು ಕಟ್ಟಿಕೊಟ್ಟಿರುವುದು ಇದರಲ್ಲಿ ಮಂತ್ರಿಗಳ ಕೈವಾಡ ಇದೆ. ಮಂತ್ರಿಗಳ ಪ್ರಭಾವದ ಜೊತೆಗೆ ರಾಜಕಾರಣಿಗಳ ಪ್ರಭಾವವೂ ಸೇರಿಕೊಂಡು ಇವರ ಒಂದು ಅಧಿಕಾರ ದುರುಪಯೋಗವಾಗಿದೆ. ಅದರ ಬಗ್ಗೆ ವಿಚಾರಮಾಡಿ ವಿಮರ್ಶೆಮಾಡಬೇಕು.

ಕೊನೆಯದಾಗಿ ಹೇಳುವುದಾದರೆ, ತಾವು ಸೋಮನಹಳ್ಳಿಯಲ್ಲಿ ಒಂದು ಹಾಸ್ಪಿಟಲ್ ಕಟ್ಟತಕ್ಕ ಒಂದು ಒಳ್ಳೆಯ ಕಾರ್ಯವನ್ನು ಮಾಡುವುದಕ್ಕೆ ಹೋಗಿದ್ದೀರಿ. ಈ ಕಾರ್ಯದ ಹಿಂದೆ ಬಹಳ ವುದಾತ್ತವಾದ ಧ್ಯೇಯಧೋರಣೆಯನ್ನು ಇಟ್ಟುಕೊಂಡು ತಮ್ಮ ಪ್ರಭಾವವನ್ನು ಬೀರಿ ಒಬ್ಬ ನರ್ತಕಿಯಿಂದ ನರ್ತನವನ್ನು ನಡೆಸಿ 10ಲಕ್ಷ ರೂಪಾಯಿಗಳಷ್ಟು ಹಣವನ್ನು ಕೈಗಾರಿಕೋದ್ಯಮಿಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿ ಅತ್ಯಂತ ಹೆಚ್ಚಿನ ರೀತಿಯಲ್ಲಿ ವಸೂಲುಮಾಡಿದ್ದೀರಿಯೆಂಬ ಆರೋಪಣೆ ತಮ್ಮ ಮೇಲೆ ಇದೆ. ಈ ಬಗ್ಗೆ ನಿಖರವಾದ ಹೇಳಿಕೆಯನ್ನು ಕೊಡಬೇಕು. ಇನ್ನುಮುಂದಾದರೂ ಈ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಒಂದರಲ್ಲಿಯೇ ಎಲ್ಲ ಕೈಗಾರಿಕೆಗಳನ್ನು ಕೇಂದ್ರೀಕೃತ ಮಾಡದೆ ಹೊರಗಡೆ ಇರತಕ್ಕ ಎಲ್ಲಾ ಇತರ ಜಿಲ್ಲೆಗಳಲ್ಲಿ ಅದೇ ರೀತಿಯಾಗಿ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈಗ ಅನೇಕ ಜನ ಅಧಿಕಾರಿಗಳು ಬಂದಿದ್ದಾರೆ, ಎನ್. ಜಿ. ಇ. ಎಫ್. ಮತ್ತು ಬಿ. ಇ. ಎಲ್. ಕಾರ್ಖಾನೆಗಳಲ್ಲಿ ನೇಮಕಗಳನ್ನು ಮಾಡುವಾಗ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳು ತಂತಮ್ಮ ಆಫೀಸುಗಳಲ್ಲಿ ಇನ್ನುಮುಂದೆ ನೇಮಕಗಳನ್ನು ಮಾಡುವಾಗ ಕನ್ನಡಿಗರಿಗೇ ತಾವು ಉದ್ಯೋಗಗಳನ್ನು ಕೊಡತಕ್ಕದ್ದು ಮತ್ತು ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡತಕ್ಕ ಒಂದು ನೀತಿಯನ್ನು ತಾವು ಈ ಕೂಡಲೇ ಹಾಕಿಕೊಳ್ಳಬೇಕು. ಸಂಬಂಧಪಟ್ಟ ಎಲ್ಲ ಅಧಿಕಾರವರ್ಗದವರಿಗೂ ಹಾಗೂ ಸರ್ಕಾರದ ಕಾರ್ಖಾನೆಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಇನ್ನುಮುಂದೆ ಕನ್ನಡಿಗರಿಗೆ ಮಾತ್ರ ಉದ್ಯೋಗಗಳನ್ನು ಕೊಡುವ ಬಗ್ಗೆ ಸೂಕ್ತ ಎಚ್ಚರಿಕೆಯನ್ನು ಕೊಟ್ಟು ಈ ವಿಚಾರದಲ್ಲಿ ಸರ್ಕಾರದವರು ಒಂದು ಯೋಗ್ಯ ಮಾರ್ಗದಲ್ಲಿ ಹೋಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಕೈಗಾರಿಕೆಯ ಮಂತ್ರಿಗಳು ತಂದಿರತಕ್ಕಂಥ ಡಿಮ್ಯಾಂಡನ್ನು ಸರ್ವಾನುಮತದಿಂದ ಅಂಗೀಕರಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ನನಗನ್ನಿಸುತ್ತದೆ. ಈಗ ಈ ಬಾಬಿಗೆ ಕೇಳಿರತಕ್ಕ ಹಣ ಬಹಳ ಕಡಿಮೆ ಇದೆ. ಕಾರಣ, ವಿಧ್ಯಾಭ್ಯಾಸ ಆದಮೇಲೆ ಕೈಗಾರಿಕೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಅನೇಕ ಜನರು ನನ್ನ ಮಿತ್ರರು ಇಲ್ಲಿ ಮಾತನಾಡಿದ ಕಾಲದಲ್ಲಿ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಆಗಾಗ್ಗೆ ಹೇಳುತ್ತಿದ್ದರು. ಅವರು ಹೇಳಿರತಕ್ಕ ಮಾತು ಏನೆಂದರೆ, ಇಂಡಸ್ಟ್ರಿಯಲೈಜ್ ಆರ್ ಪೆರಿಷ್ ಎಂಬುದು. ನಮ್ಮಲ್ಲಿ ಈಗ ಶೇಕಡ 80 ರಷ್ಟು ಜನರು ವ್ಯವಸಾಯದಲ್ಲಿಯೇ ಜೀವನ ಮಾಡುತ್ತಿದ್ದಾರೆ. ಹಾಗೆ ಮಾಡಿದರೂ ಸಹ ಅರೆಹೊಟ್ಟೆ ಬಟ್ಟೆಗೂ ಕೂಡ ಸಾಲುತ್ತಿಲ್ಲ. ಕಾರಣವೇನೆಂದರೆ, ಜನಸಂಖ್ಯೆ ಬಹಳ ಹೆಚ್ಚಿಗೆ ಬೆಳೆಯುತ್ತಿದೆ. ಆದ್ದರಿಂದ ಕೈಗಾರಿಕೆಗಳನ್ನು ಬಹಳ ಹೆಚ್ಚಿನ ರೀತಿಯಲ್ಲಿ ಬೆಳೆಸಬೇಕಾಗಿದೆ. ಈ ಡಿಮ್ಯಾಂಡಿಗೆ ಈಗ ಇಟ್ಟಿರುವ 15 ಕೋಟಿ ರೂಪಾಯಿಗಳು ಏನಿದೆಯೋ ಅದನ್ನು 25 ಕೋಟಿ ರೂಪಾಯಿಗಳಿಗೆ ಏರಿಸಿದ್ದರೆ ಬಹಳ ಚೆನ್ನಾಗಿತ್ತು. ಅದರ ಜೊತೆಗೆ ನಾವು ಈಗ ವಿಜ್ಞಾನ ಯುಗದಲ್ಲಿದ್ದೇವೆ. We are in an age of Science and technology. ಪ್ರತಿಯೊಬ್ಬರೂ ಕೈಗಾರಿಕೆಗೆ ಎಲ್ಲಾ ದೇಶಗಳಲ್ಲಿಯೂ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಈಗ ಗೃಹ ಕೈಗಾರಿಕೆಗಳು, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ವಿಲೇಜ್ ಇಂಡಸ್ಟ್ರೀಸ್ ಬೇಕಾದಷ್ಟು ನಡೆಯುತ್ತಿವೆ. ಆದರೆ ಈಗ ಇರತಕ್ಕ ಖಾದಿ ವಿಲೇಜ್ ಇಂಡಸ್ಟ್ರೀಸ್ ಎಂಬುದಾಗಿ ಏನು ಮಾಡಿದ್ದಾರೋ ಅದು ಈ ಒಂದು ಸಂದರ್ಭದಲ್ಲಿ ಅಷ್ಟು ಚೆನ್ನಾಗಿ ಕೆಲಸಮಾಡುತ್ತಾ

ಇಲ್ಲವೆಂದು ನನ್ನ ಒಂದು ಸ್ವಂತ ಅನುಭವದಿಂದಲೇ ಗೊತ್ತಾಗಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುತ್ತಿರುವುದೇನೆಂದರೆ ಈ ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡನ್ನು ರೀ ಆರ್ಗನೈಜ್ ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಮತ್ತು ನಮ್ಮ ರಾಜ್ಯದಲ್ಲಿ ಒಂದು ಟೆಕ್ನೋ ಎಕನಾಮಿಕ್ ಸರ್ವೆ ನಡೆಸಿ ರಾಜ್ಯದ ಯಾವ ಯಾವ ಭಾಗದಲ್ಲಿ ಏನೇನು ರಾ ಮೆಟೀರಿಯಲ್ಸ್ ಸಿಕ್ಕುತ್ತದೆ, ಅಲ್ಲದೆ ಅಲ್ಲಿ ಯಾವ ಯಾವ ಕೈಗಾರಿಕೆಯನ್ನು ಸ್ಥಾಪನೆ ಮಾಡಬಹುದು ಎಂಬ ವಿಚಾರದಲ್ಲಿ ಈ ಟೆಕ್ನೋ ಎಕನಾಮಿಕ್ ಸರ್ವೆ ಬಹಳ ಮುಖ್ಯವಾದದ್ದು. ಇದನ್ನು ತಯಾರಿಸಿ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಏನೇನು ಕೈಗಾರಿಕೆಗಳು ನಡೆಯುತ್ತಿವೆ ಎಂಬುದನ್ನು ವೀಕ್ಷಿಸಲು ಒಂದು ಇಂಡಸ್ಟ್ರೀಯಲ್ ಕಮೀಷನ್‌ನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಇದೇ ರೀತಿ ಬೀಡಿ ಕೈಗಾರಿಕೆಯ ಬಗ್ಗೆ ಕೂಡ ಒಂದು ಸ್ಟೇಟ್ ಲೆವೆಲ್ ಕಮಿಟಿ ಆಗಬೇಕು ಎಂದು ಹೇಳುತ್ತೇನೆ. ಇನ್ನು ಕೇಂದ್ರದಲ್ಲಿ ಈ ವ್ಯಾಪಾರೋದ್ಯಮಗಳ ಅಭಿವೃದ್ಧಿಗಾಗಿ ಕೇಂದ್ರದಲ್ಲಿ ಈ ದಿವಸ ಇರುವಂತೆ ನಮ್ಮ ರಾಜ್ಯಮಟ್ಟದಲ್ಲೂ ಒಂದು ಎಕ್ಸ್‌ಪೋರ್ಟ್ ಕಮೀಷನ್ ಕೌನ್‌ಸಿಲ್ಲನ್ನು ರಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದ ವ್ಯಾಪಾರ ವಾಣಿಜ್ಯದ ಬಗ್ಗೆ ಇಂಗ್ಲೆಂಡ್ ಮತ್ತು ಜಪಾನ್—ಜರ್ಮನಿಗಳಲ್ಲಿ ಟ್ರೇಡ್ ಕಮೀಷನರುಗಳಿದ್ದರೂ ನಿರೀಕ್ಷಿಸಿದ್ದ ಮಟ್ಟದಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಅದಕ್ಕಾಗಿ ಒಂದು ಸ್ಟಡೀ ಟೀಮನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮಲ್ಲಿ ಈ ದಿವಸ ಏನೇನು ಕೈಗಾರಿಕೆಗಳು ನಡೆಯುತ್ತಿವೆ ಎಂಬುದರ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಏನೋ ಇದೆ. ಆದರೆ ಅದು ನಮ್ಮ ಈ ಬೆಳೆಯುತ್ತಿರುವ ಪ್ರಜಾಸಂಖ್ಯೆಗೆ ಅನುಗುಣವಾಗಿಲ್ಲ. ಆದುದರಿಂದ ಅನೇಕರಿಗೆ ಇದರ ತಿಳುವಳಿಕೇ ಇರುವುದಿಲ್ಲ. ಆದುದರಿಂದ ಈ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರಿಸಿ ಎಲ್ಲ ಶಾಸಕರಿಗೆ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಷಿಪ್ಪಿಂಗ್ ಇಂಡಸ್ಟ್ರೀಗೆ ಬಂದರೆ ಈ ದಿವಸ ಆಂಧ್ರ ಮತ್ತು ಕೇರಳ ರಾಜ್ಯಗಳಲ್ಲಿ ಈ ಇಂಡಸ್ಟ್ರಿ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ 200 ಮೈಲಿಗಳ ಸಮುದ್ರ ಕರಾವಳಿ ಇದ್ದರೂ ನಾವು ಅತ್ತ ಕಡೆ ಗಮನವನ್ನು ಇಲ್ಲಿಯವರೆಗೂ ಹರಿಸಿಲ್ಲ. ಇನ್ನಾದರೂ ನಾವು ಇದನ್ನು ಗಮನಿಸಿ ನಮ್ಮಲ್ಲಿ ಆ ಮಲ್ಪೆ, ಭಟ್ಕಲ್ ಮತ್ತು ಮಂಗಳೂರಲ್ಲಿ ಷಿಪ್ಪಿಂಗ್ ಇಂಡಸ್ಟ್ರೀಯನ್ನು ಪ್ರಾರಂಭ ಮಾಡಿ ಅಲ್ಲಿ ಸಣ್ಣ ಸಣ್ಣ ಕಂಟ್ರಿ ಕ್ರಾಫ್ಟ್ಸನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ನಮ್ಮಲ್ಲಿ ಇನ್‌ಲ್ಯಾಂಡ್ ಟ್ರಾಫಿಕ್ ಬೆಳೆಯುವುದಲ್ಲದೆ, ಇದರಿಂದ ಫಾರಿನ್ ಎಕ್ಸ್‌ಛೇಂಜ್ ಗಳಿಸುವುದಕ್ಕೂ ಅನುಕೂಲವಾಗುತ್ತದೆಂದು ಈ ನಾಲ್ಕು ಮಾತುಗಳನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರು ಮಂಡಿಸಿರತಕ್ಕ ಬೇಡಿಕೆಯ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಅಪೇಕ್ಷಪಡುತ್ತೇನೆ. ನೂರಕ್ಕೆ 80 ಜನರು ವ್ಯವಸಾಯವನ್ನೇ ಅವಲಂಬಿಸಿರುವ ಜನರನ್ನು ಒಳಗೊಂಡಂಥ ದೇಶ ನಮ್ಮದು. ಇದರಿಂದ ಇಲ್ಲಿಯ ಜನರ ಆರ್ಥಿಕ ಬೆಳವಣಿಗೆ ಬಹಳ ಕುಂಠಿತವಾಗಿದೆ. ಆದುದರಿಂದ ವ್ಯವಸಾಯದ ಮೇಲೆ ಬಿದ್ದಿರತಕ್ಕ ಒತ್ತಡವನ್ನು ಕಡಮೆ ಮಾಡಿ ಜನರನ್ನು ಕೈಗಾರಿಕೆಗಳತ್ತ ಹೊರಳಿಸಬೇಕಾಗಿದೆ. ಆದರೆ ನಮ್ಮಲ್ಲಿ ಈ ಕೈಗಾರಿಕೆಗಳ ಬೆಳವಣಿಗೆಯಾದರೋ ಕಳೆದ 10—15 ವರ್ಷಗಳಿಂದ ನಾವು ನಿರೀಕ್ಷಿಸಿದ್ದ ಮಟ್ಟದಲ್ಲಿ ಆಗಲಿಲ್ಲ. ಗ್ರಾಮಾಂತರ ಪ್ರದೇಶಗಳ ಬೆಳವಣಿಗೆಯಾಗದಿರುವುದಕ್ಕೆ ಇದೂ ಒಂದು ಕಾರಣ. ಆದರೆ ಈ ಒಂದು ಸಮಸ್ಯೆಯನ್ನು ಬಿಡಿಸಿ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಿ ಜನರ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿ ಈ ಒಂದು ಕೀರ್ತಿಗೆ ನಮ್ಮ ಮಂತ್ರಿಗಳು ಭಾಗಿಗಳಾಗಬೇಕೆಂದು ನನ್ನ ಆಸೆ. ನಮ್ಮ ಹಾಸನದಲ್ಲಿ ಕಳೆದ 30 ವರ್ಷಗಳಿಂದಲೂ ಅಲ್ಲಿ ಒಂದು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇದೆ, ಅದು ಸ್ಥಾಪನೆಯಾದಾಗ ಯಾವ ರೀತಿ ಇತ್ತೋ ಈಗಲೂ ಅದೇ ರೀತಿಯಲ್ಲಿದೆ. ಅಲ್ಲಿ ಯಾವ ಆಧುನಿಕ ವ್ಯವಸಾಯೋಪಕರಣಗಳನ್ನೂ ತಯಾರಿಸುತ್ತಿಲ್ಲ. ಆದರೆ ಇತ್ತೀಚೆಗೆ ದೇಶದಲ್ಲಿ ವ್ಯವಸಾಯದಲ್ಲಿ ಇಷ್ಟೊಂದು ಕ್ರಾಂತಿಕಾರಕ ಬದಲಾವಣೆಗಳಾಗಿದ್ದರೂ ಈ ಫ್ಯಾಕ್ಟರಿಯಲ್ಲಿ ಮಾತ್ರ ಯಾವ ಬದಲಾವಣೆಗಳೂ ಇಲ್ಲ. ಆದರೆ ಈಗಲಾದರೂ ಈ ಫ್ಯಾಕ್ಟರಿಯನ್ನು ಆಧುನಿಕ ರೀತಿಯಲ್ಲಿ ಬದಲಾವಣೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹಾಸನಕ್ಕೆ ಎರಡು ಸಕ್ಕರೆ ಕಾರ್ಖಾನೆಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಬಹಳ ಸಂತೋಷ. ಅದಕ್ಕಾಗಿ ನಾನು ಅವರಿಗೆ ವಂದಿಸುತ್ತೇನೆ. ಆದರೆ ಕಳೆದ 6–7 ವರ್ಷಗಳಿಂದ ಹೊಳೇನರಸೀಪುರದ 'ಅರುಣಾ ಷುಗರ್ ಕಂಪೆನಿ' ಸರ್ವೆ ಇತ್ಯಾದಿ ಕೆಲಸ

(ಶ್ರೀ ಕೆ. ಎಚ್. ಹನುಮೇಗೌಡ)

ಗಳೆಲ್ಲಾ ಮುಗಿದಿದ್ದರೂ ಅದು ಹಾಗೇ ನಿಂತು ಹೋಗಿದೆ. ಹಾಸನ ಮತ್ತು ಹೊಳೇನರಸೀಪುರಕ್ಕೆ ಕೊಟ್ಟಿರತಕ್ಕ ಈ ಎರಡು ಸಕ್ಕರೆ ಕಂಪೆನಿಗಳ ಕೆಲಸವನ್ನು ಬೇಗ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಕೈಗಾರಿಕೆಗಳನ್ನು ಬೆಳೆಸದೆ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಅಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಸಿಕ್ಕತಕ್ಕ ಕಬ್ಬಿಣದ ಅದಿರು ಬಹಳ ಉತ್ಕೃಷ್ಟ ವಾದದ್ದು. ಇದನ್ನು ಹಾಗೆ ರಫ್ತು ಮಾಡುವುದರ ಬದಲು ಅದನ್ನು ಪ್ರೋಸೆಸ್ ಮಾಡಿ ಕಳುಹಿಸಿದರೆ ಬಹಳ ಲಾಭ ಇದೆ. ಅಲ್ಲದೆ ಇಲ್ಲಿ ನಮ್ಮ ಜನರಿಗೆ ಉದ್ಯೋಗವೂ ಕೂಡ ಸಿಕ್ಕಂತೆ ಆಗುವುದು. ಆದುದರಿಂದ ಸರ್ಕಾರದವರು ಇದಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಹಾಗೇ ನಮ್ಮ ಹೊಸಪೇಟೆಯ ಅದಿರನ್ನು ಹುಬ್ಬಳ್ಳಿ ಮೂಲಕ ಕಾರವಾರಕ್ಕೆ ರವಾನೆ ಮಾಡಿ ಅಲ್ಲಿಂದ ಪರ ದೇಶಗಳಿಗೆ ರವಾನಿಸಲಾಗುತ್ತಿದೆ. ಆದುದರಿಂದ ಅಲ್ಲಿ ರೈಲ್ವೆ ಸೌಕರ್ಯವನ್ನು ಕಲ್ಪಿಸಬೇಕಾಗಿದೆ. ಸರ್ಕಾರದವರು ಇದಕ್ಕೂ ಹೆಚ್ಚಿನ ಗಮನ ಕೊಡಬೇಕು. ಇನ್ನು ಮಂಗಳೂರಲ್ಲಿ ಒಂದು ಕೆಮಿಕಲ್ ಇಂಡಸ್ಟ್ರೀಯನ್ನು ಮಾಡಲು ಪ್ರಾರಂಭಮಾಡಿದ್ದಾರೆ. ಆದರೆ ನಿರೀಕ್ಷಿಸಿದ್ದ ಮಟ್ಟದಲ್ಲಿ ಕೆಲಸಗಳು ನಡೆಯುತ್ತಿಲ್ಲ. ಅಲ್ಲದೆ ಅಲ್ಲಿ ಒಂದು ಆಯಿಲ್ ರಿಫೈನರಿಯನ್ನು ಸ್ಥಾಪಿಸಬೇಕೆಂದು ಹೇಳುವುದರ ಜೊತೆಗೆ ಅಲ್ಲಿ ಒಂದು ಪೋಟೊ ಕೆಮಿಕಲ್ ಕಾಂಪ್ಲೆಕ್ಸ್ ಇಂಡಸ್ಟ್ರೀಯನ್ನು ಕೇಂದ್ರದ ಸಹಾಯ ಪಡೆದು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ದೇಶದಲ್ಲಿ ರೈತರು ಬೆಳೆಯುತಕ್ಕ ಎಣ್ಣೇ ಬೀಜಗಳನ್ನು ಅಲ್ಲಲ್ಲೇ ಎಣ್ಣೆ ಮಾಡುವುದಕ್ಕೆ ಅನುಕೂಲವಾಗುವಂತೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P. M.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಇದೆ, ಪ್ರಾಮುಖ್ಯವಾದ ಅರಣ್ಯ ಸಂಪತ್ತಿದೆ ಮತ್ತು ಖನಿಜ ಸಂಪತ್ತಿದೆ. ಇವೆಲ್ಲಾ ಸಾಕಷ್ಟಿದ್ದರೂ ನಮ್ಮ ರಾಜ್ಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಮತ್ತು ಮಿರ್ಜಾ ಸಾಹೇಬರ ದಿವಾನಗಿರಿಯಲ್ಲಿ ಆದಷ್ಟು ಪ್ರಗತಿ ಕೈಗಾರಿಕೆಯ ಬಾಬಿನಲ್ಲಿ ಆಗಿಲ್ಲ ಎಂದು ಯೋಚನೆಮಾಡ ಬೇಕಾಗಿದೆ. ಹಿಂದೆಷ್ಟು ಕಾರ್ಖಾನೆಗಳಿವೆ, ಈಗೆಷ್ಟು ಆಗಿವೆ ಎಂಬುದನ್ನು ಗಮನಿಸಬೇಕು. ಕೋಟ್ಯಾಂತರ ಖರ್ಚಾಗುತ್ತಿದೆ. ಆದರೆ ಖನಿಜ ಸಂಪತ್ತು ಮತ್ತು ವನಸಂಪತ್ತು ಸರಿಯಾದ ರೀತಿಯಲ್ಲಿ ಉಪಯೋಗಿಸದಿರುವುದು ಶೋಚನೀಯವಾದ ವಿಚಾರವಾಗಿದೆ. ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಪ್ರಬಲವಾಗಿದೆ. ಅದನ್ನು ಬಗೆಹರಿಸಲು ಹೆಚ್ಚು ಕೈಗಾರಿಕೆಗಳನ್ನು ಅಗತ್ಯವಾಗಿ ಸ್ಥಾಪಿಸ ಬೇಕಾಗಿತ್ತು. ಇದರ ಬಗ್ಗೆ ಸಾಕಾದಷ್ಟು ಗಮನ ಹರಿಸಿಲ್ಲ. ಕೆಲವು ದಿವಸಗಳ ಹಿಂದೆ ಸಿಮೆಂಟ್ ಕಂಟ್ರೋಲ್ ಮಾಡಿದರು, ಆಗ ಅದರ ಬೆಲೆ ಏರಿತು, ಅದು ಸರಿಯಾಗಿ ಸಿಕ್ಕುತ್ತಿಲ್ಲ. ಇದರ ಬಗ್ಗೆ ಸರಿಯಾದ ನೀತಿಯನ್ನನುಸರಿಸದಿದ್ದರೆ ಜನರಿಗೆ ತೊಂದರೆಯಾಗುವುದು. ಭದ್ರಾವತಿ ಮೈಲ್ಡ್ ಸ್ಟೀಲ್ ಎರಡು ಸಾವಿರ ರೂಪಾಯಿಗೆ ಮಾರಿದರೆ ಹಿಂದೂಸ್ಥಾನ್ ಸ್ಟೀಲ್ 1600 ರೂಪಾಯಿಗೆ ಮಾರುವರು. ಆದರೂ ಭದ್ರಾವತಿ ಕಾರ್ಖಾನೆಗೆ ಪ್ರತಿ ವರ್ಷ ನಷ್ಟವಾಗುತ್ತಿದೆ, ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕೆಲವು ದಿವಸಗಳಲ್ಲಿ ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡನ್ನು ಹೊಸದಾಗಿ ನಿರ್ಮಾಣಮಾಡುವ ಪರಿಸ್ಥಿತಿಯಿದೆ. ಅದಕ್ಕೆ ಸರಿಯಾದ ಛೇರ್ಮನ್ ಹಾಕಿ ಬಹಳ ದಕ್ಷತೆಯಿಂದ ಈ ಬೋರ್ಡು ಕೆಲಸ ಮಾಡುವಂತೆ ವ್ಯವಸ್ಥೆ ಮಾಡುವರು ಎಂದು ನಂಬಿದ್ದೇನೆ. ಈಗ ಸರ್ಕಾರದವರು ಕೈಗಾರಿಕೆಗಳಿಗೆ ಕೊಟ್ಟಿರುವ ಸಾಲಸೋಲ ಸರಿಯಾಗಿ ವಸೂಲಾಗದೆ ಅನೇಕ ಲಕ್ಷ ರೂಪಾಯಿ ಹಣ ಹೋಗುವ ಸಂದರ್ಭವಿದೆ. ಇದರ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಂಡು ಸರಕಾರಕ್ಕೆ ಬರಬೇಕಾದ ಸಾಲ ವಸೂಲು ಮಾಡಲು ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಕೈಗಾರಿಕೆಗಳ ರಾಷ್ಟ್ರೀಕರಣ ಮಾಡಬೇಕೆಂದು ಶ್ರೀ ಕೃಷ್ಣನ್ ಮುಂತಾದವರು ಹೇಳಿದರು. ನಾನು ರಾಷ್ಟ್ರೀಕರಣ ವಾದಿಯಲ್ಲ ಮತ್ತು ಪ್ರೈವೇಟ್ ಸೆಕ್ಟಾರ್ ಬಗ್ಗೆ ನಾನು ವಾದ ಮಾಡುವುದಿಲ್ಲ. ಆದರೆ ಜನರ ಹಿತದೃಷ್ಟಿಯಿಂದ ಸರಿಯಾದ ಕ್ರಮ ತೆಗೆದುಕೊಳ್ಳಬೇಕು, ಜನರಿಗೆ ಸಾಮಾನು ಸರಿಯಾಗಿ ಸಿಕ್ಕುವಂತೆ ಮಾಡಬೇಕು ಮತ್ತು ಸರಕಾರಿ ಹಣ ಕ್ಷೇಮವಾಗಿರಬೇಕು ಎಂದು ಒತ್ತಿ

ಹೇಳುತ್ತೇನೆ. ಸರಕಾರ ಮತ್ತು ಪ್ರೈವೇಟ್ ಸೆಕ್ಟಾರ್ ಇಬ್ಬರೂ ಸೇರಿ ಜನರನ್ನು ಕಾಪಾಡಬೇಕು. ಜನರನ್ನು ಕಷ್ಟಕ್ಕೆ ಸಿಕ್ಕಿಸಬಾರದು, ಸಾಮಾನುಗಳು ಸಿಕ್ಕದೆ ಬೆಲೆ ಏರಿ ಜನರಿಗೆ ತೊಂದರೆಯಾಗದಂತೆ ಪ್ರೈವೇಟ್ ಸೆಕ್ಟಾರಿನವರು ಜನರ ಶೋಷಣೆ ಮಾಡದಂತೆ ನೋಡಿಕೊಳ್ಳಬೇಕು. ಜನರಿಗೆ ಹಿತವಾಗುವ ರೀತಿಯಲ್ಲಿ ಕಾರ್ಯಕ್ರಮ ಕೈಕೊಳ್ಳಬೇಕು, ಬರೀ ಸ್ಲೋಗನ್ ಬೇಡ ಎಂದು ಇಷ್ಟು ಹೇಳಿ ಕಾಲಾವಕಾಶವಿಲ್ಲದ್ದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Now the House stands adjourned to meet tomorrow at 12 Noon.

The House adjourned at Five Minutes past Six of the Clock to meet again at Twelve of the Clock on Wednesday, the 18th April 1973.